# ಗೋವರ್ಧನರಾಮ

ರಮಣಲಾಲ್ ಜೋಷಿ



K
891.471 809 2
G 746 J

K
891.471 809 2
G 746 J

*Govardhanram*—Kannada translation by Basavaraj S. Naikar of Ramanlal Joshi's Monograph in English, Sahitya Akademi, New Delhi (1984).

SAHITYA AKADEMI
REVISED PRICE Rs. 15·00

K
891.471 809 2
G 746 J

© Sahitya Akademi
*First Published* : 1984

Library IIAS, Shimla
K 891.471 809 2 G 746 J
00117215

ಸಾಹಿತ್ಯ ಅಕಾದೆಮಿ

ಪ್ರಧಾನ ಕಾರ್ಯಾಲಯ :

ರವೀಂದ್ರಭವನ, ೩೫, ಫಿರೋಜಶಾಹ ರಸ್ತೆ, ನವದೆಹಲಿ—೧೧೦ ೦೦೧.

ಪ್ರಾದೇಶಿಕ ಕಾರ್ಯಾಲಯಗಳು :

೨೯, ಎಲ್ಡಾಮ್ಸ್ ರಸ್ತೆ, ತೇನಾಂಪೇಟ್, ಮದ್ರಾಸ್—೬೦೦ ೦೧೮.

ಬ್ಲಾಕ್ V—ಬಿ, ರವೀಂದ್ರ ಸರೋಬರ್ ಸ್ಟೇಡಿಯಮ್, ಕಲಕತ್ತಾ—೭೦೦ ೦೨೯.

೧೭೨, ಮುಂಬಯಿ ಮರಾಠಿ ಗ್ರಂಥ ಸಂಗ್ರಹಾಲಯ ಮಾರ್ಗ, ದಾದರ್, ಮುಂಬಯಿ ೪೦೦ ೦೧೪.

ನಾ

SAHITYA AKADEMI
REVISED PRICE Rs. 15·00

Indian Institute of Advanced Study
117215
10/12/04
SHIMLA

ಮುದ್ರಕರು : ಡಯೊಸೀಸನ್ ಪ್ರೆಸ್, ಮದ್ರಾಸ್—೬೦೦ ೦೦೭.

ಗೋವರ್ಧನರಾವ್ ಅವರ ಕಲೆ ಮತ್ತು ವಿಚಾರಗಳ

ಘನತೆಯನ್ನು ತೋರಿಸುವಂಥ ಸೂಕ್ಷ್ಮಗ್ರಾಹಿ ಲೇಖನವನ್ನು ಬರೆದಂಥ

# ಶ್ರೀ ವಿಷ್ಣುಪ್ರಸಾದ ತ್ರಿವೇದಿ

ಅವರಿಗೆ ಅರ್ಪಿತ

# ಪರಿವಿಡಿ


| | | | ಪುಟ |
|---|---|---|---|
| I. | ಸಾಂಸ್ಕೃತಿಕ ಪರಿಸರ | ... | 5 |
| II. | ಜೀವನ ಚಿತ್ರ | ... | 8 |
| III. | ಗೋವರ್ಧನರಾಮ ಅವರ ಜೀವನ ದರ್ಶನ | ... | 12 |
| IV. | ಸರಸ್ವತಿಚಂದ್ರ | ... | 19 |
| V. | ಸ್ನೇಹಮುದ್ರೆ ಮತ್ತಿತರ ಕವಿತೆಗಳು | ... | 28 |
| VI. | ಲೀಲಾವತಿ ಜೀವನಕಲೆ | ... | 32 |
| VII. | ವಿಮರ್ಶಾ ಕೃತಿಗಳು | ... | 35 |
| VIII. | ಮಿಶ್ರಲೇಖನಗಳು | ... | 44 |
| IX. | ಮುಕ್ತಾಯ | ... | 45 |
| | ಪರಿಶಿಷ್ಟ — ೧ | ... | 46 |
| | ಪರಿಶಿಷ್ಟ — ೨ | ... | 51 |
| | ಪರಿಶಿಷ್ಟ — ೩ | ... | 57 |

# I ಸಾಂಸ್ಕೃತಿಕ ಪರಿಸರ

ಭಾರತದೇಶದಲ್ಲಿ ಬ್ರಿಟಿಶ್ ಆಡಳಿತ ಸ್ಥಾಪನೆಯಾದಾಗ ಭಾರತದ ರಾಜಕೀಯ ರಂಗದಲ್ಲಿ ಅಷ್ಟೇ ಅಲ್ಲದೆ ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗಗಳಲ್ಲಿಯೂ ಅನೇಕ ಮಹತ್ವಪೂರ್ಣ ಹಾಗೂ ಪ್ರಭಾವಪೂರ್ಣ ಬದಲಾವಣೆಗಳು ಕಂಡುಬಂದವು. ಇದಕ್ಕಿಂತ ಮೊದಲು ನಮ್ಮ ಸಮಾಜವು ಔಚಿತ್ಯವನ್ನು ಕಳೆದುಕೊಂಡಂಥ ಸಂಪ್ರದಾಯ ಮತ್ತು ರೂಢಿ ಪದ್ಧತಿಗಳ ಸೆರೆಮನೆಯಂತಾಗಿದ್ದುದರಿಂದ ಜನರ ಮನಸ್ಸಿನಲ್ಲಿ ಸಂಕುಚಿತ ಭಾವನೆಗಳು ಮತ್ತು ದೇಶಪ್ರೇಮರಾಹಿತ್ಯ ಇವು ಮನೆಮಾಡಿದ್ದವು. ಇಂಗ್ಲಿಷ್ ಜನಾಂಗದೊಂದಿಗೆ ಸಂಬಂಧ ಬೆಳೆದಾಗ ಭಾರತೀಯರ ಜೀವನ ದೃಷ್ಟಿ ವಿಶಾಲವಾಯಿತು. ಹೊಸ ವಿಚಾರಗಳಿಗೆ ಮತ್ತು ಹೊಸ ದೃಷ್ಟಿಗೆ ಸ್ಥಾನ ಸಿಕ್ಕಿತು. ಭಾರತೀಯ ಜೀವನದ ಪ್ರತಿಯೊಂದು ರಂಗದಲ್ಲಿಯೂ ಪುನರುಜ್ಜೀವನಕ್ಕೆ ಬೇಕಾದಂಥ ವಾತಾವರಣ ಉಂಟಾಗಿತ್ತು. ಇಡೀ ರಾಷ್ಟ್ರಕ್ಕೆ ಒಂದು ತರಹದ ಹೊಸ ಚೈತನ್ಯ ಹೊಸ ಪ್ರಜ್ಞೆ, ಮರಳಿದಂತಿತ್ತು. ಈ ಪುನರುಜ್ಜೀವನ ಮೊಟ್ಟಮೊದಲು ಸಾಂಸ್ಕೃತಿಕ ರಂಗದಲ್ಲಿಯೇ ಕಾಲಿಟ್ಟಿತು. ಭಾರತೀಯ ಸಾಂಸ್ಕೃತಿಕ ಪುನರುಜ್ಜೀವನದ ತಂದೆ ರಾಜಾರಾಮ್ ಮೋಹನ್‌ರಾಯ್ ಅವರು.

೧೮೧೭ ರಲ್ಲಿ 'ಸಿಪಾಯಿ ದಂಗೆ' ಯ ರೂಪದಲ್ಲಿ ಹೊರಚಿಮ್ಮಿದ ಭಾರತೀಯರ ರಾಜಕೀಯ ಸ್ವಾತಂತ್ರ್ಯದ ಹೆಬ್ಬಯಕೆಯ ಜ್ವಾಲಾಮುಖಿ ಕೇವಲ ರಾಜಕೀಯವಾಗಿರದೆ ಕಳೆದುಹೋದ ಸ್ವಾತಂತ್ರ್ಯವನ್ನು ಮರಳಿ ಪಡೆಯುವ ಪ್ರಯತ್ನವಾಗಿತ್ತು. ಈ ಪ್ರಯತ್ನ ನಿಷ್ಫಲವಾದರೂ ಅದರಿಂದ ಒಂದು ಮಹತ್ವದ ಬದಲಾವಣೆ ಉಂಟಾಯಿತು. ಭಾರತೀಯ ಆಡಳಿತ ಈಸ್ಟ್ ಇಂಡಿಯಾ ಕಂಪನಿಯವರಿಂದ ಬ್ರಿಟಿಶ್ ಪಾರ್ಲಿಮೆಂಟಿಗೆ ಸ್ಥಳಾಂತರಿಸಲ್ಪಟ್ಟಿತು. ಹೀಗಾಗಿ ವಿಕ್ಟೋರಿಯಾ ಮಹಾರಾಣಿ ಭಾರತದ ಸರ್ವಾಧಿಕಾರಿಯಾದಳು. ಭಾರತದೇಶ ಬ್ರಿಟಿಶ್ ಸಾಮ್ರಾಜ್ಯದ ಒಂದು ಅಂಗವಾಯಿತು. ಈಗ ಕೆಲವು ಸಮಯದವರೆಗಾದರೂ ಭಾರತೀಯರು ರಾಜಕೀಯ ಸ್ವಾತಂತ್ರ್ಯದ ವಿಚಾರಗಳನ್ನು ಬದಿಗಿರಿಸಿದ್ದರಿಂದ, ಭಾರತ ಮತ್ತು ಪಾಶ್ಚಾತ್ಯ ಜಗತ್ತಿನ ನಡುವೆ ಅತ್ಯಂತ ಉಪಯುಕ್ತವಾದ ಸಂಬಂಧಗಳು ಏರ್ಪಡಲು ಸಾಧ್ಯವಾಯಿತು. ಈಗ ಭಾರತೀಯ ಮುಖಂಡರು ತಮ್ಮ ಗಮನವನ್ನು ಸಂಪೂರ್ಣವಾಗಿ ಸಾಂಸ್ಕೃತಿಕ ಹಾಗೂ ಸಾಮಾಜಿಕ ಸುಧಾರಣೆಗಳತ್ತ ಹರಿಸಿದರು.

ವಿಪರ್ಯಾಸದ ಸಂಗತಿಯೆಂದರೆ 'ದಂಗೆ' ಪ್ರಾರಂಭವಾದ ವರುಷವೆ ಭಾರತದಲ್ಲಿ ಕಲಕತ್ತಾ, ಮದ್ರಾಸ್ ಮತ್ತು ಮುಂಬಯಿ ವಿಶ್ವವಿದ್ಯಾಲಯಗಳು ಸ್ಥಾಪಿಸಲ್ಪಟ್ಟವು. ಮರುವರುಷವೆ ಬಂಕಿಮಚಂದ್ರ ಚಟರ್ಜಿಯವರು ಭಾರತೀಯ ವಿಶ್ವವಿದ್ಯಾಲಯದ ಪ್ರಥಮ ಪದವೀಧರರಾಗಿ ಹೊರಬಂದರು. ಕಲಕತ್ತಾ ವಿಶ್ವವಿದ್ಯಾ

ಲಯದಲ್ಲಿ ಪದವಿಯನ್ನು ಪಡೆದುಕೊಂಡ ಇವರು ಅನಂತರ ಭಾರತೀಯ ಸಾಹಿತ್ಯದ ಅಗ್ರಗಾಮಿಗಳಾಗಿ ದುಡಿದರು. ಈ ವಿಶ್ವವಿದ್ಯಾಲಯಗಳು ಜನರ ಸಾಮಾಜಿಕ ಸುಧಾರಣೆಯ ಕಾರ್ಯಕ್ಕೆ ಹೊಸ ಚೈತನ್ಯವನ್ನು ಪೂರೈಸಿದವು. ಅವು ವಿವೇಕ ಪೂರ್ಣ ವಿದ್ಯೆಯ ಹಸಿವನ್ನು ಹಿಂಗಿಸಲು ಸಹಾಯಕವಾದವು. ಈ ಕಾರಣದಿಂದ ಸಾಂಪ್ರದಾಯಕ ವಿಚಾರಧಾರೆ ಮಾಯವಾಗಿ ವಿವೇಕಪೂರ್ಣ ಹಾಗೂ ಮಾನವೀಯ ದೃಷ್ಟಿಯಿಂದ ಜೀವನದ ಸಮಸ್ಯೆಗಳನ್ನು ವಿವೇಚಿಸುವಂತಾಯಿತು. ಕೆಲವು ಸ್ವಯಂ ಪ್ರೇರಿತ ಸಂಘ ಸಂಸ್ಥೆಗಳನ್ನು—ಅಂದರೆ **ಬುದ್ಧಿವರ್ಧಕ ಸಭೆ- ತತ್ವಶೋಧಕ ಸಭೆ, ವಿದ್ಯಾಭ್ಯಾಸಕ ಸಭೆ ಮತ್ತು ಮಾನವಧರ್ಮ ಸಭೆ** ಮುಂತಾದ ಸಭೆ ಗಳನ್ನು (ಬುದ್ಧಿ ಜೀವಿಗಳಿಗಾಗಿ, ತತ್ವಜ್ಞಾನಿಗಳಿಗಾಗಿ ಹಾಗೂ ಮಾನವತಾವಾದಿ ಗಳಿಗಾಗಿ)—ನೋಡಿದಾಗ ನಮಗೆ ಈ ವಿಷಯ ತಿಳಿಯದೆ ಇರದು. ೧೮೪೮ ರಲ್ಲಿ **ಗುಜರಾತ ಪ್ರಾದೇಶಿಕ ಸಮಾಜ** ಸ್ಥಾಪಿತವಾಯಿತು. ಬುದ್ಧಿವಂತರಿಗಾಗಿ ರಚಿತವಾದ **ಬುದ್ಧಿವರ್ಧಕ ಸಭೆ** ೧೮೫೧ ರಲ್ಲಿ ಪ್ರಾರಂಭವಾಯಿತು. ೧೮೫೮ ರಲ್ಲಿ ಕವಿಗಳೂ ಸಮಾಜ ಸುಧಾರಕರೂ ಆದ ನರ್ಮದ ಅವರು ಈ ಸಭೆಯ ಕಾರ್ಯ ದರ್ಶಿಗಳಾದರು. ತತ್ವಜ್ಞಾನಿಗಳಿಗಾಗಿ ರಚಿತವಾದ **ತತ್ವಶೋಧಕ ಸಭೆಯು** ೧೮೬೦ ರಲ್ಲಿ ಸ್ಥಾಪನೆಯಾಯಿತು. ಆದರೆ ಈ ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿವರ್ತನೆಯ ಕಾಲದಲ್ಲಿ ಅಂದರೆ ೧೮೫೮ ರಲ್ಲಿ ಆದ **ಹೋಪ್ ವಚನಮಾಲಾ** ಎಂಬ ಪುಸ್ತಕದ ಪ್ರಕಟನೆ ಅತ್ಯಂತ ಮಹತ್ವದ ಘಟನೆಯೆಂದು ಹೇಳಬಹುದು.

ಈ ಹೊಸ ವಿಶ್ವವಿದ್ಯಾಲಯಗಳ ಪದವೀಧರರು ಹೆಚ್ಚೆಚ್ಚು ಜ್ಞಾನವನ್ನು ಪಡೆಯಬೇಕೆಂಬ ಹಂಬಲವುಳ್ಳವರಾಗಿದ್ದರು. ತಮ್ಮ ಮಹಾ ವಿದ್ಯಾಲಯಗಳಲ್ಲಿ ಇಂಗ್ಲಿಷ್ ಮತ್ತು ಸಂಸ್ಕೃತ ಭಾಷೆಗಳಲ್ಲಿ ಬರೆದ ಮೇರುಕೃತಿಗಳನ್ನು ಅಭ್ಯಸಿಸಿದುದ ರಿಂದ ಅವರಿಗೆ ಹೊಸ ವೈಚಾರಿಕ ಜೀವನದ ಕಡೆಗೆ ಸಾಕಷ್ಟು ಆಕರ್ಷಣೆಯಾಗಿತ್ತು. ಪಾಶ್ಚಾತ್ಯ ಸಂಸ್ಕೃತಿ ಮತ್ತು ನಾಗರಿಕತೆಯ ಪರಿಚಯವಾದುದರ ಪರಿಣಾಮವಾಗಿ ಅಲ್ಲದೆ ಭಾರತೀಯ ಧಾರ್ಮಿಕ ವ್ಯಕ್ತಿ ಹಾಗೂ ಪರಂಪರೆಗಳಲ್ಲಿ ಸಾಕಷ್ಟು ಆಳವಾದ ಅಧ್ಯಯನ ಮಾಡಿದ ಪಾಶ್ಚಾತ್ಯ ವಿದ್ವಾಂಸರ ಬಗೆಗೆ ಸಾಕಷ್ಟು ಗೌರವವಿದ್ದುದರಿಂದ ಈ ತರುಣ ವಿದ್ಯಾರ್ಥಿಗಳು ಒಂದು ಹೊಸ ತರಹದ ಆತ್ಮವಿಶ್ವಾಸವನ್ನು ಗಳಿಸಿ ಕೊಂಡರು. ಹೀಗೆ ಇವೆಲ್ಲ ಹೊಸ ವಾತಾವರಣದ ಅಂಶಗಳಾಗಿದ್ದವು.

ಈ ತರಹದ ಹೊಸ ಜ್ಞಾನದ, ಹೊಸ ಪ್ರಜ್ಞೆಯ. ಹೊಸ ಹಂಬಲಗಳ ಪರಿಣಾಮವಾಗಿ ೧೮೮೫ ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಹುಟ್ಟಿಕೊಂಡಿತು. ರಾಜಕೀಯ ಸ್ವಾತಂತ್ರ್ಯಕ್ಕಾಗಿ ಸಾಕಷ್ಟು ಹೆಣಗಾಡಿತು. 'ದಂಗೆ' ಮತ್ತು ವಿಶ್ವ ವಿದ್ಯಾಲಯಗಳು ಪ್ರಾರಂಭವಾದ ದಿನಗಳು ಹಾಗೂ ಕಾಂಗ್ರೆಸ್ ಪಕ್ಷದ ಸ್ಥಾಪನೆಯ ನಡುವಿರುವ ಮೂವತ್ತು ವರುಷಗಳ ಅಂದರೆ ಒಂದು ತಲೆಮಾರಿನ ಅವಧಿಯನ್ನು ಆಧುನಿಕ ಭಾರತದ ಪುನರುಜ್ಜೀವನದ ಸ್ವರ್ಣಕಾಲವೆಂದು ಹೇಳಬಹುದು. ರಾಜ ಕೀಯ ವಾಗಿ ಇದು ಶಾಂತಿ ಮತ್ತು ಸ್ಥಿರತೆಯ ಅವಧಿಯಾಗಿತ್ತು. ೧೭೬೫ ರಲ್ಲಿ

ಗೋವರ್ಧನರಾಮ ಅವರು ಜನಿಸಿದಾಗ ದೇಶದಲ್ಲಿ ಆಗಲೆ ರೈಲು ಉದ್ದಿಮೆ ಪ್ರಾರಂಭ ವಾಗಿತ್ತು. ಅವರು ಜನಿಸುವುದಕ್ಕಿಂತ ಒಂದು ವರುಷ ಮೊದಲು ಅಂಚೆಖಾತೆ ಆರಂಭವಾಗಿತ್ತು. ಅಷ್ಟು ಹೊತ್ತಿಗೆ ಶ್ರೀ ರಾಂಛೋಡಬಾಯಿ ಅವರು ಅಹಮದಾಬಾದಿನಲ್ಲಿ ನೂಲಿನ ಗಿರಣಿಯೊಂದನ್ನು ಸ್ಥಾಪಿಸಿದ್ದರು. ಈ ಊರು ಗೋವರ್ಧನರಾಮ ಅವರ ಜನ್ಮಸ್ಥಳವಾದ ನಂದಿಯಾಡದಿಂದ ಕೇವಲ ಐವತ್ತು ಮೈಲು ದೂರದಲ್ಲಿತ್ತು. ಮುದ್ರಣೋದ್ಯಮ ಪ್ರಾರಂಭವಾದುದರಿಂದ ನಿಯತಕಾಲಿಕೆಗಳನ್ನು ಪ್ರಕಟಿಸುವುದು ಬಹಳ ಸುಲಭಸಾಧ್ಯವಾಗಿತ್ತು. ಶ್ರೀ ರಾಂಛೋಡಲಾಲ್ ಝೂವೇರಿ, ದುರ್ಗಾರಾಮ್ ಮೆಹತಾ ಮತ್ತು ಭೋಗಿಲಾಲ್ ಪ್ರಾಣವಲ್ಲಭದಾಸ್ ಮುಂತಾದ ಮಹನೀಯರು ಶಿಕ್ಷಣರಂಗದಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧಿಸಲು ಪ್ರಯತ್ನಿಸಿದರು. ಅನೇಕ ಗ್ರಂಥಾಲಯಗಳೂ ಸ್ಥಾಪನೆಗೊಂಡವು.

ಸಮಾಜ ಸುಧಾರಣಾ ಚಳುವಳಿ ಆದರ ಉತ್ತುಂಗಾವಸ್ಥೆಯಲ್ಲಿದ್ದಾಗ ಗೋವರ್ಧನರಾಮ ಅವರು ಜನಿಸಿದುದು ಅವರ ಭಾಗ್ಯವೆಂದೆ ಹೇಳಬೇಕು. ಆದರೆ ಅವರು ತಾರುಣ್ಯಾವಸ್ಥೆಯನ್ನು ಮುಟ್ಟುವ ಮೊದಲೆ ಈ ಚಳುವಳಿ ಕೊನೆಗೊಂಡಿತ್ತು. ದುರ್ಗಾರಾಮ, ದಲಪತ್‌ರಾಮ, ನರ್ಮದ ಮತ್ತು ಮಹಿಪತ್‌ರಾಮ ಮುಂತಾದವರ ಪ್ರಯತ್ನದಿಂದಾಗಿ ಸಮಾಜದಲ್ಲಿ ದೆವ್ವಭೂತಗಳು, ಬಾಲವಿವಾಹ, ವಿಧವಾವಿವಾಹ, ಪರದೇಶಯಾತ್ರೆ ಮುಂತಾದ ವಿಷಯಗಳಲ್ಲಿ ಪ್ರಚಾರದಲ್ಲಿರುವ ಮೂಢನಂಬಿಕೆಗಳ ಬಗೆಗೆ ಒಂದು ಹೊಸ ಪ್ರಜ್ಞೆ ಉಂಟಾಗತೊಡಗಿತ್ತು. ಇಂಥ ಹೊಸ ತರಹದ ಉತ್ಸಾಹದಲ್ಲಿ ಜನರು ಗತಕಾಲದ ರೂಢಿಸಂಪ್ರದಾಯಗಳನ್ನು ಸಂಪೂರ್ಣವಾಗಿ ತ್ಯಜಿಸಿ, ಮೂರ್ತಿಭಂಜನ ಕಾರ್ಯಗಳಲ್ಲಿ ತೊಡಗುತ್ತಿದ್ದರು. ಅದಕ್ಕೆ ಪೂರಕವಾಗಿ ಪಾಶಾತ್ಯ ವಸ್ತು, ಪದ್ಧತಿಗಳ ಅಂಧಾನುಕರಣೆ ಮಾಡತೊಡಗಿದರು. ವಿಶ್ವವಿದ್ಯಾಲಯಗಳು ಸ್ಥಾಪನೆಗೊಂಡಮೇಲೆ ಬಂದ ಹೊಸ ತಲೆಮಾರಿನ ಹೊತ್ತಿಗೆ ಸಮಾಜ ಸುಧಾರಣೆ ಮಾಡಬೇಕೆಂಬ ಉತ್ಸಾಹವಾಗಲೆ ಕಡಿಮೆಯಾಗ ತೊಡಗಿತ್ತು.

ಇಂಥ ಪರಿಸ್ಥಿತಿಯಲ್ಲಿ ಸುಧಾರಣೆ ಮಾಡಬೇಕೆಂಬ ಬರಿಯ ಉತ್ಸಾಹ ಸಾಕಾಗಿರಲಿಲ್ಲ. ಇಂಥ ಉತ್ಸಾಹಕ್ಕಿಂತ ಹೆಚ್ಚು ಅವಶ್ಯಕವಾದ ಅಂಶವೆಂದರೆ ಜೀವನದ ಬಗೆಗಿರುವ ದೃಷ್ಟಿಕೋನಗಳ ಬದಲಾವಣೆ. ನರ್ಮದ ಅವರ ಜೀವನದ ಕೊನೆಯ ಭಾಗದಲ್ಲಿ ಇಂಥ ಉದಾಹರಣೆಗಳನ್ನು ನಾವು ಕಾಣಬಹುದು. ಈ ತರಹದ ಹೊಸ ದೃಷ್ಟಿಕೋನಗಳ ಅವಶ್ಯಕತೆಯನ್ನು ಎತ್ತಿಹೇಳುವುದರ ಸಲುವಾಗಿ ಕೆಲವು ಹೊಸ ಸಂಸ್ಥೆಗಳು ಹುಟ್ಟಿಕೊಂಡವು. ಬಂಗಾಲದಲ್ಲಿ **ಬ್ರಹ್ಮೋಸಮಾಜ** ಪ್ರಾರಂಭವಾಯಿತು. ಅನಂತರ ೧೮೭೧ ರಲ್ಲಿ ಗುಜರಾಥದಲ್ಲಿ **ಪ್ರಾರ್ಥನಾ ಸಮಾಜ** ಪ್ರಾರಂಭವಾಯಿತು. ೧೮೭೫ ರಲ್ಲಿ ಸ್ವಾಮಿ ದಯಾನಂದರು **ಆರ್ಯಸಮಾಜ**ವನ್ನು ಸ್ಥಾಪಿಸಿದರು. ಅದೆ ವರುಷ **ತತ್ವಾನ್ವೇಷಣ ಸಮಾಜ**ವೂ ರಚಿತವಾಯಿತು. ಇವೆಲ್ಲ ಸಂಸ್ಥೆಗಳು ಸ್ಥಾಪನೆಯಾದುದರಿಂದ ಜನರು ಪಾಶ್ಚಾತ್ಯ ನಾಗರಿಕತೆಯ ಅಂಧಾನುಕರಣೆಯನ್ನು ತ್ಯಜಿಸಿ ಒಂದು ಹೊಸ ಹಾದಿಯನ್ನು ತುಳಿಯಹತ್ತಿ

ದರು. ಅವರೆಲ್ಲ ಪಾಶಾತ್ಯ ಸಂಸ್ಕೃತಿಯ ಪ್ರಮುಖ ಗುಣಗಳಾದ ವೈಚಾರಿಕತೆ, ಮತ್ತು ವೈಜ್ಞಾನಿಕ ದೃಷ್ಟಿಯನ್ನು ಪುರಾತನ ಭಾರತೀಯ ಜೀವನದ ಪ್ರಮುಖ ಅಂಶವಾದ ಆಧ್ಯಾತ್ಮಿಕತೆಯೊಂದಿಗೆ ಮೇಳವಿಸುವ ಪ್ರಯತ್ನಮಾಡಿದರು. ಈ ತರಹದ ಎರಡು ಸಂಸ್ಕೃತಿಗಳ ಸಮ್ಮಿಲನ ಅತ್ಯಂತ ಫಲಕಾರಿಯಾಗುವಂತಿತ್ತು.

೧೮೫೫ ರಲ್ಲಿ ಜನಿಸಿದ ಗೋವರ್ಧನರಾಮ ಅವರು ೧೮೮೪ ರಲ್ಲಿ ವಕೀಲ ವೃತ್ತಿಯನ್ನು ಪ್ರಾರಂಭಿಸುವ ವರೆಗಿನ ಅವಧಿ ಭಾರತೀಯ ಪುನರುಜ್ಜೀವನದ ಸುವರ್ಣ ಕಾಲಕ್ಕೆ ಸಮನಾಗಿರುತ್ತದೆ. ಈ ಸುವರ್ಣಕಾಲದಲ್ಲಿಯೇ ಕಾಂಗ್ರೆಸ್ (೧೮೮೫) ಮತ್ತು ವಿಶ್ವವಿದ್ಯಾಲಯಗಳು (೧೮೫೭) ಗಳು ಅಸ್ತಿತ್ವದಲ್ಲಿ ಬಂದವು.

ಗೋವರ್ಧನರಾಮ ಮತ್ತು ಅವರ ಸಮಕಾಲೀನರಿಗೆ ಸಾಂಸ್ಕೃತಿಕ ಸಮಸ್ಯೆಗಳೆ ಮುಖ್ಯ ಸಮಸ್ಯೆಗಳಾಗಿದ್ದವು. ಆದರಂತೆಯೆ ಜನರ ಆರ್ಥಿಕ ಸಮಸ್ಯೆಗಳತ್ತ ಇವರೆಲ್ಲ ಗಮನ ಹರಿಸಿದ್ದರೂ ಒಳ್ಳೆಯದಾಗುತ್ತಿತ್ತು. ಆದರೆ ಪೌರ್ವಾತ್ಯ ಹಾಗೂ ಪಾಶ್ಚಾತ್ಯ ಸಂಸ್ಕೃತಿಗಳ ಅತ್ಯುತ್ತಮ ಅಂಶಗಳನ್ನು ಮೇಳವಿಸುವುದೆ ಅತ್ಯಂತ ಮುಖ್ಯವಾದ ಸಾಧನೆಯೆಂದು ಹೇಳಬಹುದು. ಇಂಥ ಪರಿಸ್ಥಿತಿಯಲ್ಲಿ ಗೋವರ್ಧನರಾಮ ಅವರು ವಿದ್ವಾಂಸರ ಪಾತ್ರ ವಹಿಸುವುದು ಅವರ ಕರ್ತವ್ಯವಾಗಿತ್ತು. ಅವರು ಕಾರ್ಲೈಲನ ಅರ್ಥದಲ್ಲಿ ಜೀವನದಲ್ಲಿ ಒಂದು ನಿರ್ದಿಷ್ಟವಾದ ಉದ್ದೇಶವನ್ನು ಹೊಂದಿರುವ 'ನಾಯಕ' ನಂತಿದ್ದರು. "ಜೀವನದಲ್ಲಿ ತನ್ನ ಕರ್ತವ್ಯವೆಂಬುದನ್ನು ಕಂಡುಕೊಂಡು ಯಾವ ಆರ್ಥಿಕ ಲಾಭವನ್ನು ಬಯಸದೆ ಅದರ ಸಲುವಾಗಿ ಹೋರಾಡುವವರು ನಿಜವಾಗಿಯೂ ಅದೃಷ್ಟವಂತರು" ಎಂದು ಹೇಳುತ್ತಾನೆ ಕಾರ್ಲೈಲ್. ಇಂಥ ನಾಯಕ ತನ್ನ ಸೃಜನಾತ್ಮಕ ಶಕ್ತಿಯನ್ನು ಜ್ಞಾನದ ಕ್ಷೇತ್ರದಲ್ಲಿಯೂ ಉಪಯೋಗಿಸುತ್ತಾನೆ. ಗೋವರ್ಧನರಾಮ ಅವರೂ ಜ್ಞಾನಾರ್ಜನೆಯ ಮೂಲಕ ದೇಶ ಸೇವೆಯನ್ನು ಮಾಡ ಬಯಸಿದರು. ಗುಜರಾಥ ಮತ್ತು ಗುಜರಾಥಿಗಳು ಈ ವಿದ್ವಾಂಸರ ಪರಿಶ್ರಮದ ಫಲವನ್ನನುಭವಿಸುತ್ತಾರೆ. ಗೋವರ್ಧನರಾಮ ಅವರು ಗುಜರಾಥದ ಸಾಂಸ್ಕೃತಿಕ ಸಂಪ್ರದಾಯದ ತಿರುಳೆಂದು ಹೇಳಬಹುದು.

## II ಜೀವನ — ಚಿತ್ರ

ಗೋವರ್ಧನರಾಮ ಮಧ್ವರಾಮ ತ್ರಿಪಾಠಿ ಅವರು ಗುಜರಾಥ ರಾಜ್ಯದ ನಂದಿಯಾಡದಲ್ಲಿ ೨೦ ಅಕ್ಟೋಬರ ೧೮೮೫ ರಂದು ಜನಿಸಿದರು. ಅಂದು ದಸರಾ ಭಾರತದಲ್ಲಿಯೆ ಅತ್ಯಂತ ಪ್ರಮುಖವಾದ ಹಬ್ಬವಾಗಿತ್ತು. ಅವರ ತಾಯಿಯ ಹೆಸರು ಶಿವಕಾಶಿ. ಅವರ ಮುತ್ತಜ್ಜಂದಿರಾದ ಮೋಹನರಾಮ ಅವರು ಪ್ರಸಿದ್ಧ ವ್ಯಾಪಾರಿಗಳಾಗಿದ್ದರು. ಅವರು ರತ್ನಮ್, ವಡರೊಡಾ, ಸೂರತ್ ಮತ್ತು ನಂದಿಯಾಡ

ದಲ್ಲಿ ಅಂಗಡಿಗಳನ್ನು ನಡೆಸುತ್ತಿದ್ದರು. ಆದರೆ ಒಂದು ಸಲ ಸಾಕಷ್ಟು ಹಾನಿಯಾದು ದರಿಂದ ಅವರು ಅವೆಲ್ಲ ಅಂಗಡಿಗಳನ್ನು ಮುಚ್ಚ ಬೇಕಾಯಿತು. ಅಲ್ಲದೆ ಗೋವರ್ಧನ ರಾಮು ಅವರ ಅಜ್ಜಂದಿರಾದ ಧೀರಜರಾಮು ಅವರು ಸಾವಿಗೀಡಾದುದರಿಂದ ಮೋಹನ ರಾಮು ಅವರಿಗೆ ತೀವ್ರವಾದ ಆಘಾತವುಂಟಾಯಿತು. ಗೋವರ್ಧನರಾಮು ಅವರು ತಮ್ಮ ಇಳಿ ವಯಸ್ಸಿನಲ್ಲಿ ತಮ್ಮ ತಂದೆಯುವರ ತಾಳ್ಮೆ ಹಾಗೂ ಅವರ ಕಾಲದ ಬಗೆಗೆ **ಮಧ್ವರಾಮು ಸ್ಮರಿಕಾ** ಎಂಬ ಪುಸ್ತಕದಲ್ಲಿ ವಿವರಿಸಿದ್ದಾರೆ.

ಬಾಲ್ಯಾವಸ್ಥೆಯಲ್ಲಿ ಗೋವರ್ಧನರಾಮು ಅವರು ಅತ್ಯಂತ ಅದೃಷ್ಟವಂತರಾಗಿದ್ದರು· ಏಕೆಂದರೆ ಆಗ ಅವರಿಗೆ ಒಬ್ಬ ಸಾಧುವಿನ ಪರಿಚಯವಾದುದರಿಂದ ಅವರಿಗೆ ವೈಷ್ಣವ ಪಂಥದ ಬಗೆಗೆ ಅತ್ಯುತ್ತಮ ತಳಹದಿಯನ್ನು ಹಾಕಿ ಕೊಳ್ಳಲು ಸಹಾಯವಾಯಿತು. ಅವರಿಗೆ ದಲಪತರಾಮು ಅವರ ಕಾವ್ಯದಲ್ಲಿ ಹಾಗೂ **ಕಾವ್ಯದೋಹನ** ದ ಅಧ್ಯಯನ ದಲ್ಲಿ ಬಹಳ ಅಭಿರುಚಿ ಬೆಳೆಯಿತು. ಬೆಳೆಯುತ್ತಿರುವ ದಿನಗಳಲ್ಲಿ, ಅವರಿಗೆ ಮನಃಸುಖ ರಾಮು ಅವರ ಮಾರ್ಗದರ್ಶನ ಸಿಕ್ಕಿದುದರಿಂದ ಸಂಸ್ಕೃತ ಮತ್ತು ಆರ್ಯ ಸಂಸ್ಕೃತಿಯಲ್ಲಿ ಆಳವಾದ ಅಭಿರುಚಿಯನ್ನು ಬೆಳೆಯಿಸಿ ಕೊಂಡರು.

೧೮೭೪ ರಲ್ಲಿ ಗೋವರ್ಧನರಾಮು ಅವರು ಹರಿಲಕ್ಷ್ಮಿ ಯವರನ್ನು ಮದುವೆಯಾ ದರು. ಅವರ ಸಹೋದರ ನರಹರಿರಾಮು ಅದೇವರುಷ ಜನಿಸಿದರು. ನರಹರಿರಾಮು ಅನಂತರ ಮುಂಬಯಿಯಲ್ಲಿ ಸುಪ್ರಸಿದ್ಧ 'ಎನ್. ಎಮ್. ತ್ರಿಪಾಠಿ ಆ್ಯಂಡ್ ಕೊ.' ಎಂಬ ಪ್ರಕಾಶನ ಸಂಸ್ಥೆಯನ್ನು ಸ್ಥಾಪಿಸಿದರು. ಮದುವೆಯಾದ ಮೇಲೆ ಗೋವರ್ಧನರಾಮು ಅವರು ಎಲ್ಫಿನ್‌ಸ್ಟನ್ ಹಾಯಸ್ಕೂಲಿನಲ್ಲಿ ವಿದ್ಯಾಭ್ಯಾಸ ಮಾಡುವುದಕ್ಕಾಗಿ ಮುಂಬಯಿಗೆ ಹೋದರು. ಅಲ್ಲಿ ೧೮೭೧ ರಲ್ಲಿ ತಮ್ಮ ಹದಿನಾರ ನೆಯ ವಯಸ್ಸಿನಲ್ಲಿ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆ ಪಾಸಾದರು. ೧೮೭೪ ನೆಯ ಇಸ್ವಿ ಅವರ ಜೀವನದಲ್ಲಿ ಒಂದು ದುರಂತ ಮಯ ಕಾಲವಾಗಿತ್ತು. ಏಕೆಂದರೆ ಅದೇ ವರುಷ ಅವರ ಹೆಂಡತಿ ಹರಿಲಕ್ಷ್ಮಿ ಅವರು ರಾಧಾ ಎಂಬ ಕೂಸನ್ನು ಬಿಟ್ಟು ಹೆರಿಗೆ ಯಲ್ಲಿಯೆ ಸತ್ತು ಹೋದರು. ಆಮೇಲೆ ಅವರು ಸಾಲ ತೀರಿಸುವುದಕಾಗಿ 'ಶ್ರೀ ಕೃಷ್ಣ ವಾಸುದೇವ ಆ್ಯಂಡ್ ಕೊ' ಎಂಬ ವ್ಯಾಪಾರಿ ಸಂಸ್ಥೆಯನ್ನು ಮುಚ್ಚಬೇಕಾಯಿತು. ಗೋವರ್ಧನರಾಮು ಅವರು ಬಿ. ಎ. ಪರೀಕ್ಷೆಯಲ್ಲಿ ನಪಾಸಾದರು. ಆದರ ಮುಂದಿನ ವರ್ಷ ೧೮೭೫ ರಲ್ಲಿ ಆ ಪರೀಕ್ಷೆಯಲ್ಲಿ ಪಾಸಾದರು.

ಇಷ್ಟೊತ್ತಿಗಾಗಲೆ ಗೋವರ್ಧನರಾಮು ಅವರು ಬರೆಯಲಿಕ್ಕೆ ಪ್ರಾರಂಭಿಸಿದ್ದರು. ತಮ್ಮ ಜೀವನದ ಮುಖ್ಯ ಕಾರ್ಯವೇನೆಂಬುದರ ಬಗೆಗೆ ಅವರು ಸಾಕಷ್ಟು ಗಂಭೀರ ವಾಗಿ ಆಲೋಚಿಸುತ್ತಿದ್ದರು. ಇಪ್ಪತ್ತನೆ ವಯಸ್ಸಿಗೆ ಬರುವಷ್ಟರಲ್ಲಿ ತಮ್ಮ ಜೀವನ ವನ್ನು ಹೇಗೆ ಸಾಗಿಸಬೇಕು , ಯಾವ ತರಹದ ಕೃತಿ ಗಳನ್ನು ಬರೆಯು ಬೇಕೆಂಬುದರ ಬಗೆಗೆ ನಿರ್ದಿಷ್ಟವಾದ ಯೋಜನೆಗಳನ್ನು ಹಾಕಿಕೊಂಡರು. ಅದೇ ದಿಶೆಯಲ್ಲಿ ಕಾರ್ಯರೂಪಕ್ಕಿಳಿದರು. ಈ ಯೋಜನೆಯ ಪ್ರಕಾರ ಅವರು ಮೊದಲು ಕಾಯಿದೆ ಪದವಿಯನ್ನು ಪಡೆದು ಮುಂಬಯಿಯಲ್ಲಿ ಸ್ವತಂತ್ರ ವಕೀಲ ವೃತ್ತಿಯನ್ನು ಪ್ರಾರಂಭಿ

ಸಿದರು. ಅವರಿಗೆ ಯಾರ ಕೈಕೆಳಗೂ ಕೆಲಸ ಮಾಡುವ ಮನಸ್ಸಿರಲಿಲ್ಲ. ಆದ್ದರಿಂದ ನಾಲ್ವತ್ತನೆಯ ವಯಸ್ಸಿನಲ್ಲಿ ವಕೀಲ ವೃತ್ತಿಯಿಂದ ನಿವೃತ್ತಿ ಪಡೆದು ತಮ್ಮ ವೇಳೆಯನ್ನು ಸಂಪೂರ್ಣವಾಗಿ ಬರವಣಿಗೆ ಮತ್ತು ಅಧ್ಯಯನದಲ್ಲಿ ಕಳೆದರು. ತಮ್ಮ ಸಮಾಜಕ್ಕಾಗಿ ತಮ್ಮ ದೇಶಕ್ಕಾಗಿ ತಮ್ಮ ಸೇವೆಯನ್ನು ಸಲ್ಲಿಸಿದರು.

೧೮೭೪ ರಲ್ಲಿ ಅವರು ಲಲಿತಗೌರಿಯನ್ನು ಮದುವೆಯಾದರು. ೧೮೭೭ ರಲ್ಲಿ **ಸ್ನೇಹಿತ ಸಮಾಜದ** ಆಶ್ರಯದಲ್ಲಿ ಏರ್ಪಡಿಸಿದ ಸಭೆಯಲ್ಲಿ "ನನ್ನ ದೃಷ್ಟಿಯಲ್ಲಿ ಪ್ರಾಯೋಗಿಕ ವೈರಾಗ್ಯದ ಸಾಮಾನ್ಯ ಗುಣಗಳ ಸ್ಥೂಲ ಚಿತ್ರ" ವೆಂಬ ಪ್ರಬಂಧ ವನ್ನು ಓದಿದರು. ಬಲವಂತರಾಯ್ ಠಾಕೂರ ಅವರು ಹೇಳಿದಂತೆ ಈ ಪ್ರಬಂಧವು ಗೋವರ್ಧನರಾಮ ಅವರ ಚಾರಿತ್ರ್ಯ, ಹಂಬಲ ಮತ್ತು ಸಿದ್ಧಾಂತಗಳ ಮೂಲೆ ಗಲ್ಲೆಂದು ಹೇಳ ಬಹುದು.

೧೮೭೯ ರ ಪ್ರಾರಂಭದಲ್ಲಿ ಗೋವರ್ಧನರಾಮ ಅವರು ಭಾವನಗರ ರಾಜ್ಯದ ದಿವಾನರ ಆಪ್ತಕಾರ್ಯದರ್ಶಿಯಾಗಿ ನಿಯಮಿತರಾದರು. ಅಸ್ವಾಸ್ಥ್ಯದಿಂದಾಗಿ ಅವರಿಗೆ ೧೮೮೩ ರ ವರೆಗೆ ಕಾಯಿದೆ ಪದವಿಯನ್ನು ದೊರಕಿಸಲಾಗಲಿಲ್ಲ. ಅನಂತರ ಅನೇಕ ನೌಕರಿಗಳಿಗಾಗಿ ಆಮಂತ್ರಣಗಳು ಬಂದರೂ ಅವುಗಳನ್ನವರು ಸ್ವೀಕರಿಸದೆ ಮುಂಬಯಿಗೆ ಬಂದು ವಕೀಲ ವೃತ್ತಿಯನ್ನು ಪ್ರಾರಂಭಿಸಿದರು. ಹೀಗೆ ಸ್ವತಂತ್ರ ವೃತ್ತಿಯನ್ನು ಆರಂಭಿಸಿದಾಗ ಅವರಿಗೆ ಇನ್ನೂ ಇಪ್ಪತ್ತೊಂಭತ್ತು ವರುಷಗಳಾಗಿದ್ದವು. ಅದೇ ರೀತಿ ತಮ್ಮ ನಲವತ್ತುಮೂರನೆಯ ವಯಸ್ಸಿನಲ್ಲಿಯೆ ಅವರು ವಕೀಲ ವೃತ್ತಿಗೂ ಶರಣು ಹೊಡೆದರು.

೧೮೮೪ ರಲ್ಲಿ ಅವರು **ಸರಸ್ವತಿ ಚಂದ್ರ** ವೆಂಬ ಮಹಾ ಕಾದಂಬರಿಯನ್ನು ಬರೆಯಲಾರಂಭಿಸಿದರು. ೧೮೮೭ ರಲ್ಲಿ ಅದರ ಮೊದಲ ಭಾಗವನ್ನು ಪ್ರಕಟಿಸಿದರು. ಇದಕ್ಕಿಂತ ಮೊದಲೆ ಅವರು ಇನ್ನೊಂದು **ಸ್ನೇಹಮುದ್ರಾ** ಎಂಬ ನೀಳ್ಗವಿತೆಯನ್ನು ಬರೆಯಲು ಪ್ರಾರಂಭಿಸಿದರೂ ಅದನ್ನು ೧೮೮೯ ರ ವರೆಗೆ ಪ್ರಕಟಿಸಲಾಗಲಿಲ್ಲ. **ಸರಸ್ವತಿ ಚಂದ್ರ** ದ ಎರಡನೆಯ ಭಾಗ ೧೮೯೨ ರ ಜೂನ್ ಎರಡನೆಯತಾರೀಖು ಪ್ರಕಟವಾಯಿತು. ಈ ಮಹಾ ಕಾದಂಬರಿಯ ಮೂರನೆಯ ಭಾಗ ೧೮೯೭ ರಲ್ಲಿ ಮುಗಿದರೂ ದೇಶದಲ್ಲಿಯ ರಾಜಕೀಯ ತೊಂದರೆಗಳಿಂದಾಗಿ ಅದು ೧೮೯೮ ರ ವರೆಗೂ ಪ್ರಕಟವಾಗಲಿಲ್ಲ.

ಅವರು ಮೊದಲೆ ಯೋಚಿಸಿದಂತೆ ಈಗ ನೌಕರಿಯಿಂದ ನಿವೃತ್ತಿ ಪಡೆಯುವ ಸಮಯ ಬಂದಿತು. ಅವರ **ಖಾಸಗಿ ಪುಸ್ತಕ** ದಲ್ಲಿ ಈ ವಿಷಯವಾಗಿ ಅನೇಕ ವಿಚಾರಗಳು ಸಿಗುತ್ತವೆ. ಇದರ ಸಲುವಾಗಿ ಅವರು ತಮ್ಮ ಕಕ್ಕಂದಿರಾದ ಮನಃಸುಖರಾಮ ಅವರನ್ನೂ ಒಪ್ಪಿಸ ಬೇಕಾಯಿತು. ಕೊನೆಗೆ ಅವರು ತಮ್ಮ ಅನು ಮತಿ ಕೊಟ್ಟ ನಂತರ ಗೋವರ್ಧನರಾಮ ತಮ್ಮ ೪೩ ನೆಯ ವಯಸ್ಸಿನಲ್ಲಿ ನೌಕರಿಯಿಂದ ನಿವೃತ್ತರಾಗಿ ಅತ್ಯಂತ ಹುಮ್ಮಸ್ಸಿನಿಂದ ಮುಂಬಯಿಯನ್ನು ಬಿಟ್ಟರು. ಈ ವೇಳೆಯಲ್ಲಿ ಅವರು ಅನೇಕ ಆತಂಕಗಳನ್ನು ಎದುರಿಸ ಬೇಕಾಯಿತು. ನಿವೃತ್ತ

ಜೀವನದಲ್ಲಿ ಆರ್ಥಿಕ ತೊಂದರೆಗಳನ್ನು ಹೇಗೆ ಎದುರಿಸಬೇಕೆಂಬುದನ್ನು ಅವರು ಸ್ಪಷ್ಟವಾಗಿ ವಿಚಾರಿಸದಿದ್ದರೂ ಅದರ ಬಗೆಗೆ ಅವರೇನು ಚಿಂತಿಸಲಿಲ್ಲ. ಅತ್ಯಂತ ಯಶಸ್ವಿಯಾಗಿ ವಕೀಲಿವೃತ್ತಿಯನ್ನು ನಡೆಸಿಕೊಂಡು ಬಂದ ಅವರು ಈಗ ತಮ್ಮ ಜೀವನವನ್ನು ಸಾಹಿತ್ಯಕೃಷಿಗೆ ಮುಡುಪಾಗಿಡಲು ನಿರ್ಧರಿಸಿದರು. ಆದ್ದರಿಂದಲೆ ಅವರು ಅತ್ಯಂತ ಹುಮ್ಮಸ್ಸಿನವರಾಗಿದ್ದರು. ಅವರ ಕನಸು ನನಸಾಗುವ ಸಮಯ ಬಂದಿತ್ತು. ಅವರು ೧೯ ನೆಯ ಅಕ್ಟೋಬರ ೧೮೯೮, ಲಲಿತ ಪುಚಮಿಯ ದಿನ ಮುಂಬಯಿ ನಗರವನ್ನು ಬಿಟ್ಟು ಜನ್ಮ ಸ್ಥಳವಾದ ನಂದಿಯಾಡಕ್ಕೆ ಹೋದರು. ಆಮೇಲೆ ಕಚ್ಛದಲ್ಲಿ ದಿವಾನರ ಸ್ಥಳಕ್ಕೆ ಅವರಿಗೆ ಆಮಂತ್ರಣ ಬಂದರೂ ಅವರದನ್ನು ಸ್ವೀಕರಿಸಲಿಲ್ಲ. ಕೆಲವು ದೊಡ್ಡ ದೊಡ್ಡ ಪಕ್ಷಗಾರರು ಬಂದು ತಮ್ಮ ಪರವಾಗಿ ವಕಾಲತ್ತು ನಡೆಸಬೇಕೆಂದು ಬೇಡಿಕೊಂಡರೂ ಅವರದನ್ನೆಲ್ಲ ನಿರಾಕರಿಸಿದರು.

೧೯೦೦ ರಲ್ಲಿ ಅವರು **ಸರಸ್ವತಿ ಚಂದ್ರ** ವೆಂಬ ಗದ್ಯ ಮಹಾ ಕಾವ್ಯದ ನಾಲ್ಕನೆಯ ಹಾಗೂ ಕೊನೆಯ ಭಾಗವನ್ನು ಸಂಪೂರ್ಣಗೊಳಿಸಿದರು. ಅನಂತರ **ಸಮಾಲೋಚಕ** ವೆಂಬ ಪತ್ರಿಕೆಯಲ್ಲಿ "ಸಾಕ್ಷರ ಜೀವನ" ವೆಂಬ ಲೇಖನ ಮಾಲೆಯನ್ನು ಪ್ರಕಟಿಸತೊಡಗಿದರು. ಅದಲ್ಲದೆ ಕೆಲವು ಉಪನ್ಯಾಸಗಳನ್ನೂ ನೀಡಿದರು. ೧೮೯೮ ರಲ್ಲಿ ಅವರು ಲಾಠಿ ಮತ್ತು ಜುನಾಗಡಕ್ಕೆ ಭೇಟಿ ಕೊಟ್ಟರು. ಕೆಲವು ಸಲ ಅವರು ಮುಂಬಯಿಗೂ ಹೋಗಿ ಬಂದರು. ೧೯೦೨ ನೆಯ ಇಸ್ವಿ ಜನವರಿ ೮ ರಂದು ಅವರ ಹಿರಿಯ ಮಗಳು ಲೀಲಾವತಿ ಕೈಲಾಸ ವಾಸಿಯಾದಳು ಹೀಗಾಗಿ ಅವರಿಗೆ ವಿಪರೀತ ಆಘಾತವುಂಟಾಯಿತು. ಅನಂತರ ಮಗಳ ನೆನಪಿಗಾಗಿ ಅವಳ ಜೀವನ ಕುರಿತ **ಲೀಲಾವತಿ ಜೀವನ ಕಲೆ** ಎಂಬ ಕೃತಿಯನ್ನು ರಚಿಸಿದರು. ಅದು ೧೯೦೫ ರಲ್ಲಿ ಪ್ರಕಟವಾಯಿತು. ಬಲವಂತರಾಯ್ ಠಾಕೂರ ಅವರು ಹೇಳಿದಂತೆ, ಗೋವರ್ಧನರಾಮ ಅವರು ಈ ಕೃತಿಯನ್ನು ಬರೆಯುವಾಗ ಅನೇಕ ಸಾರೆ ಬಿಕ್ಕಳಿಸಿ ಅಳುತ್ತಿದ್ದರಂತೆ.

೧೯೦೫ ರಲ್ಲಿ ಗೋವರ್ಧನರಾಮ ಅವರು ಗುಜರಾಥಿ ಸಾಹಿತ್ಯ ಪರಿಷತ್ತಿನ ಪ್ರಥಮ ಅಧಿವೇಶನದ ಅಧ್ಯಕ್ಷರಾಗಿ ಚುನಾಯಿತರಾದರು. ಆಗ ಅವರು **ಪ್ರಾಚೀನ ಗುಜರಾಥಿ ಸಾಹಿತ್ಯದ ಸಂಕ್ಷಿಪ್ತ ಚರಿತ್ರೆ** ಎಂಬ ಉಪನ್ಯಾಸವನ್ನು ನೀಡಿದರು. ೧೯೦೬ ರಲ್ಲಿ ಅಹಮದಾಬಾದಿನಲ್ಲಿ ನಡೆಯುವ ಸಾಹಿತ್ಯ ಸಭೆಯಲ್ಲಿ ಓದುವುದರ ಸಲುವಾಗಿ **ದಯಾರಾಮರ ಸಾಹಿತ್ಯ ಕೃತಿಗಳು** ಎಂಬ ಪ್ರಬಂಧ ವನ್ನು ಸಿದ್ಧ ಪಡಿಸಿದರು.

ಗೋವರ್ಧನರಾಮ ಅವರು ಯೋಗಶಾಸ್ತ್ರದ ಆಳವಾದ ಅಭ್ಯಾಸ ಮಾಡಿದ್ದರು. ಅಲ್ಲದೆ ಸಂಪೂರ್ಣ ವೈರಾಗ್ಯದ ಬಗೆಗೆ ಸಾಕಷ್ಟು ಚಿಂತನೆಗೈದಿದ್ದರು. ಹೀಗಾಗಿ ಅವರು ಸನ್ಯಾಸಿಯಾಗಿ ಸಂಸಾರದಿಂದ ಓಡಿಹೋಗದೆ ಸಂಸಾರದಲ್ಲಿದ್ದುಕೊಂಡೆ ವೈರಾಗ್ಯಪೂರ್ಣ, ಕಾರ್ಯಪ್ರವೃತ್ತ ಜೀವನವನ್ನು ನಡೆಸಲು ನಿರ್ಧರಿಸಿದರು. ಅವರು ಮೊದಲಿನಿಂದಲೂ ದೈಹಿಕವಾಗಿ ಸೂಕ್ಷ್ಮವಾಗಿಯೆ ಇದ್ದರು. ಅಜಮೀರ

ಪುಶ್ಕಾರ್, ಜೈಪುರ, ಗೋಕುಲ ಮತ್ತು ಮಥುರಾ ಯಾತ್ರೆ ಮಾಡಿದ ನಂತರ ಅವರ ಆರೋಗ್ಯ ಮತ್ತಷ್ಟು ಕೆಟ್ಟಿತು. ಹೀಗಾಗಿ ಅವರು ೧೯೦೭ ನೆಯ ಇಸ್ವಿ ಜನವರಿ ೪ ರಂದು ಮಧ್ಯಾಹ್ನ ೨:೩೦ ಕ್ಕೆ ವೈಕುಂಠವಾಸಿಗಳಾದರು. ಇಡೀ ಗುಜರಾಥದ ಜನರೆಲ್ಲ ದುಃಖದಿಂದ ಕಣ್ಣೀರು ಸುರಿಸಿದರು.

ಅವರ ಚಾರಿತ್ರ್ಯ ಮತ್ತು ಸಾಧನೆಗಳನ್ನು ಕುರಿತು ಅನೇಕ ದೇಶೀಯ ಹಾಗೂ ಪರದೇಶೀಯ ಪತ್ರಿಕೆಗಳಲ್ಲಿ ಲೇಖನಗಳು ಮತ್ತು ಶ್ರದ್ಧಾಂಜಲಿಗಳು ಪ್ರಕಟವಾದವು. ಲಂಡನ್ನಿನ **ದ ಟೈಮ್ಸ** ಪತ್ರಿಕೆ ೧೯೦೭ ನೆಯ ಇಸ್ವಿ ಫೆಬ್ರುವರಿ ಸಂಚಿಕೆಯಲ್ಲಿ ಗೋವರ್ಧನರಾಮ ಅವರ ಸ್ಮರಣಾರ್ಥವಾಗಿ ಅವರ ಸಾಹಿತ್ಯ ಸಾಧನೆ ಕುರಿತು ಒಂದು ಸವಿಸ್ತಾರವಾದ ಲೇಖನವನ್ನು ಪ್ರಕಟಿಸಿತು. ಇವೆಲ್ಲ ಪತ್ರಿಕೆಗಳಲ್ಲಿ **ಸಮಾಲೋಚಕ** ಮತ್ತು **ವಸಂತ** ಪತ್ರಿಕೆಗಳ ವಿಶೇಷಾಂಕ ಪ್ರಮುಖವಾದವುಗಳು.

# III ಗೋವರ್ಧನರಾಮ ಅವರ ಜೀವನದರ್ಶನ

ಸೊಫೊಕ್ಲಿಸ್‌ನು 'ಜೀವನವನ್ನು ಸಮಾಧಾನದಿಂದಲೂ ಸಮಗ್ರವಾಗಿಯೂ ನೋಡಿದ' ನೆಂದು ಹೇಳುತ್ತಾನೆ ಇಂಗ್ಲಿಷ್ ಕವಿ ವಿಮರ್ಶಕ ಮ್ಯಾಥ್ಯೂ ಆರ್ನಲ್ಡ. ಈ ಮಾತು ಗೋವರ್ಧನರಾಮ ಅವರಿಗೂ ಅನ್ವಯಿಸುತ್ತದೆ. ಸಮಗ್ರತೆ, ಸಂಪೂರ್ಣತ್ವ ಮತ್ತು ಏಕತೆಗಳು ಅವರ ಜೀವನ ದರ್ಶನದ ಗುಣಗಳಾಗಿವೆ. ರವೀಂದ್ರನಾಥ ಠಾಕೂರ ಅವರು ಜೀವನವೆಂದರೆ ದೇವರ ದೇಣಿಗೆಯೆಂದು ಹೇಳುತ್ತಿದ್ದರು. ಅವರ ಒಂದು ಕವಿತೆಯಲ್ಲಿ ದೇವರ ಕರೆಯನ್ನು ಸ್ವೀಕರಿಸಿದ ಅವರು ಯಾತ್ರೆಗಾಗಿ ಸಿದ್ಧರಾಗಿ ಕುಳಿತಿದ್ದರೆಂದು ಹೇಳಿದ್ದಾರೆ. ಗೋವರ್ಧನರಾಮ ಅವರು ಜೀವನವನ್ನು ರವೀಂದ್ರರಿಗಿಂತ ಬೇರೆ ತೆರನಾಗಿ ನೋಡಿದರು. ಜೀವನವೆಂದರೆ ಅತ್ಯಂತ ಗಂಭೀರವಾದದ್ದೆಂದೂ ಆದ್ದರಿಂದ ಪ್ರತಿಯೊಬ್ಬನೂ ಈ ಜೀವನ ಗಾಂಭೀರ್ಯದ ಪ್ರಜ್ಞೆಯುಳ್ಳವನೂ, ನಿಶ್ಚಿತ ಉದ್ದೇಶವನ್ನು ಹೊಂದಿದವನೂ ಆಗಿರ ಬೇಕೆಂದು ಗೋವರ್ಧನರಾಮ ಅವರು ನಂಬಿದ್ದರು. ಅವರು ಯಾವಾಗಲೂ ಜೀವನದ ಅರ್ಥಶೊಧನೆಯಲ್ಲಿ ಮತ್ತು ಅರ್ಥ ಸಾಧನೆಯಲ್ಲಿ ತಮ್ಮ ಜೀವನವನ್ನು ಕಳೆದರು. ಅವರು ತಮ್ಮ ಜೀವನದ ಗುರಿ ಏನು? ಜೀವನದಲ್ಲಿಬರುವ ಎಡರು ತೊಡರುಗಳನ್ನು, ಕಲಹಗಳನ್ನು, ಚಾಪಲ್ಯಗಳನ್ನು ಹೇಗೆ ಎದುರಿಸಿ ಜಯಿಸಬೇಕೆಂಬುದನ್ನು ನಿರ್ಧರಿಸಿಬಿಟ್ಟಿದ್ದರು. ಈ ಜೀವನ ಪರ್ಯಂತ ಸತ್ಯ ಶೋಧನೆಯಿಂದಲೆ ಅವರು ಇತರ ಗುಜರಾಥಿ ಸಾಹಿತಿಗಳಿಗಿಂತ ಭಿನ್ನರಾಗಿ ಕಾಣಿಸುತ್ತಾರೆ.

ದೇಶಪ್ರೇಮ ಮತ್ತು ಆಧ್ಯಾತ್ಮಿಕತೆ – ಇವೆರಡು ಗೋವರ್ಧನರಾಮ ಅವರ ಜೀವನದಲ್ಲಿ ಪ್ರಾಮುಖ್ಯವಾದ ಅಂಶಗಳು. ಅವರ ದಿನ ವಹಿ ಮತ್ತು ಇತರ ಕೃತಿಗಳನ್ನು ನೋಡಿದಾಗ ಅವರ ದೇಶಪ್ರೇಮವೆಷ್ಟು ಗಾಢವಾಗಿತ್ತೆಂಬುದು ತಿಳಿದು ಬರುತ್ತದೆ. ಅವರ **ಖಾಸಗಿ ಪುಸ್ತಕ** ದಲ್ಲಿ 'ಕರ್ತವ್ಯ' ವೆಂಬ ಶಬ್ದ ಪ್ರತಿಧ್ವನಿಸುತ್ತದೆ. ಅವರ ಅರ್ಥದಲ್ಲಿ 'ಕರ್ತವ್ಯ' ವೆಂಬಂದು ಕೇವಲ ಒಂದು ನೈತಿಕ ಕಲ್ಪನೆಯಾಗಿರದೆ, ಅದೊಂದು ಆದರ್ಶವನ್ನಭಿವ್ಯಕ್ತಿಸುವ ಸಾಧನೆಯಾಗಿದೆ. ಕುಟುಂಬಕ್ಕಾಗಿ ಮತ್ತು ದೇಶಕ್ಕಾಗಿ ಕರ್ತವ್ಯವೆಂಬುದು ಅವರ ಜೀವನದಲ್ಲಿ ಕೇಂದ್ರೀಯ ಆದರ್ಶವಾಗಿದೆ. ಅಲ್ಲದೆ ಮೂಲತ: ಅದು ಆತ್ಮಕ್ಕಾಗಿದ್ದ ಕರ್ತವ್ಯವೆ ಆಗಿದೆ. ಅವರ ಪ್ರಕಾರ ಕರ್ತವ್ಯ ಪ್ರಜ್ಞೆಯೆಂದರೆ ಮಾನವಪ್ರಜ್ಞೆಯ ಪರಾಕಾಷ್ಠೆಯಾದ ಪರಿಪೂರ್ಣಸ್ಥಿತಿಯನ್ನು ಮುಟ್ಟಬೇಕೆಂಬ ಹಂಬಲದ ಪರಿಣಾಮವೆ ಆಗಿದೆ.

ಜೀವನ ಕಲೆಯ ಬಗೆಗೆ ಚಿಂತನೆಗೈದುದರ ಪರಿಣಾಮವಾಗಿಯೆ ಗೋವರ್ಧನರಾಮ ಅವರ ಜೀವನ ಸಿದ್ಧಾಂತ ಹುಟ್ಟಿಕೊಂಡಿದೆ. ಅದರಂತೆ, ಅವರ **ಸರಸ್ವತಿಚಂದ್ರ** ದಲ್ಲಿ ಬರುವ ಅನೇಕ ಸೈದ್ಧಾಂತಿಕ ವಾಕ್ಯವೃಂದಗಳು ಅವರ ಪಾಂಡಿತ್ಯಪೂರ್ಣವಾದ ಓದು ಮತ್ತು ವಿಚಾರಧಾರೆಗಳನ್ನು ಹಾಗೂ "ಪ್ರಾಯೋಗಿಕ ವೈರಾಗ್ಯ" ಜೀವನವನ್ನು ಜೀವಿಸಬೇಕೆಂಬ ಹಂಬಲಗಳನ್ನು ಎತ್ತಿ ತೋರಿಸುತ್ತದೆ. ಜೀವನ ಮತ್ತು ಜೀವಿಸುವುದರ ಸಮಸ್ಯೆಗಳನ್ನು ಕೇವಲ ಕೃತ್ರಿಮವಾದ ವೈಚಾರಿಕ ಮಟ್ಟದಲ್ಲಿ ಚರ್ಚಿಸುವುದು ಅವರಿಗೆ ಸೇರುತ್ತಿರಲಿಲ್ಲ. ಅವರ ಕಾಲದ 'ಪಂಡಿತರು' ವೈರಾಗ್ಯವನ್ನು ಅತ್ಯಂತ ಗಂಭೀರವಾದ ರೀತಿಯಲ್ಲಿ ಸಾಧಿಸಬೇಕೆಂದು ನಂಬಿದ್ದರು. ಗೋವರ್ಧನರಾಮ ಅವರೂ ತಮ್ಮ ಬಾಲ್ಯಾವಸ್ಥೆಯಿಂದಲೇ ಈ ಗುರಿಯನ್ನಿಟ್ಟುಕೊಂಡಿದ್ದರು. ನಾವು ಈಗಾಗಲೇ ನೋಡಿದಂತೆ ಅವರು ತಮ್ಮ ಜೀವನದ ಉದ್ದೇಶ ಹಾಗೂ ರೀತಿಗಳನ್ನು ತಮ್ಮ ೨೦ ನೆಯ ವಯಸ್ಸಿನಲ್ಲಿಯೆ ನಿರ್ಧರಿಸಿ ೨೨ ನೆಯ ವಯಸ್ಸಿನಲ್ಲಿ 'ಪ್ರಾಯೋಗಿಕ ವೈರಾಗ್ಯ' ದ ಬಗೆಗೆ ಪ್ರಬಂಧವೊಂದನ್ನು ಓದಿದ್ದರು. ಈ ವಿಚಾರ ಅವರ ಮನಸ್ಸಿನಲ್ಲಿ ಹೊಳೆದದ್ದು ೧೮ ನೆಯ ವಯಸ್ಸಿನಲ್ಲಿ. ಅವರು ಚಿತ್ರಿಸಿದ ಸುಂದರಗಿರಿಯ ವಿಷ್ಣುದಾಸಬಾವಾನ ಪಾತ್ರದಲ್ಲಿ ಅವರು ಜ್ಞಾನ ಮತ್ತು ಭಕ್ತಿಗಳನ್ನು ಒಂದುಗೂಡಿಸಿದ್ದಾರೆ. ಸ್ವತಃ ತಮ್ಮ ಜೀವನದಲ್ಲಿಯೆ ಭಕ್ತಿ, ಜ್ಞಾನ ಮತ್ತು ಕರ್ತವ್ಯಗಳನ್ನು ಸಮನ್ವಯಿಸಿಕೊಂಡು ಆತ್ಮ ಮತ್ತು ಜಗತ್ತಿನ ಸತ್ಯವನ್ನು ಒಪ್ಪಿಕೊಳ್ಳುವ ವೇದಾಂತ ಜ್ಞಾನಮಾರ್ಗವನ್ನನುಸರಿಸಿದರು.

ಅವರು ಭಾವನಗರದ ದಿವಾನರ ಆಪ್ತ ಕಾರ್ಯದರ್ಶಿಯಾಗಿದ್ದಾಗಲೂ ಸಹಿತ ಅವರ ಸಹೋದ್ಯೋಗಿಗಳು ಮತ್ತು ಗುರ್ತಿನವರು "ಗೋವರ್ಧನ ಭಾಯಿಯವರು ದೇವರ ಶೋಧದಲ್ಲಿದ್ದಾರೆ" ಎಂದು ಅವರ ಬಗೆಗೆ ಮಾತನಾಡುತ್ತಿದ್ದರು. ತಮ್ಮ ವಕೀಲ ವೃತ್ತಿಯಿಂದ ನಿವೃತ್ತಿ ಹೊಂದಿದ ಮೇಲೆ ಅವರು ಯೋಗದ ಕಡೆಗೆ ಹೆಚ್ಚು ಗಮನ ಹರಿಸಿ ಅದನ್ನೆ ಸಾಧಿಸತೊಡಗಿದರು. ಅಷ್ಟೆ ಅಲ್ಲದೆ ಸಂಪೂರ್ಣ ವೈರಾಗ್ಯದ ಬಗೆಗೂ ವಿಚಾರಿಸಿ ನೋಡಿದರು. ತಮ್ಮ ಐವತ್ತನೆಯ ಹುಟ್ಟು ಹಬ್ಬದ ದಿನ

ನಾನೇಕೆ ಈ ಸಂಸಾರವನ್ನು ತ್ಯಜಿಸಿ ಸನ್ಯಾಸಿಯಾಗಬಾರದೆಂದು ತಮಗೆ ತಾವೇ ಪ್ರಶ್ನಿಸಿಕೊಂಡರು. "ಮನೆಯಲ್ಲಿಯು ಸನ್ಯಾಸವೊಂದೆ ಪರಿಹಾರ" ವೆಂದು ತೀರ್ಮಾನಿಸಿದರು.

ಗೋವರ್ಧನರಾಮ ಅವರು ಸಾರ್ವಜನಿಕ ಜೀವನದಲ್ಲಿ ಪಾಲ್ಗೊಂಡರೂ ಅವರು ಮೂಲತಃ ಒಬ್ಬ ಸಂತರಾಗಿದ್ದರು. ತಮ್ಮ **ಖಾಸಗಿಪುಸ್ತಕ** ದಲ್ಲಿ ತಮ್ಮನ್ನು ಉದ್ದೇಶಿಸಿ ತಾವೇ ಹೀಗೆ ಬರೆಯುತ್ತಾರೆ: 'ಶ್ರೀಯುತ ತ್ರಿಪಾಠಿ, ನೀನು ಯಾವುದಾದರೊಂದು ಘಟನೆಯನ್ನು ಜರುಗಿಸಬೇಕೆಂದು ಪ್ರಯತ್ನಿಸಿದಾಕ್ಷಣ ನೀನು ನಿನ್ನ ಹದ್ದುಮೀರಿ 'ಸಾರ್ವಜನಿಕ' ವ್ಯಕ್ತಿ ಅಥವಾ 'ನಾಗರಿಕ' ನಾಗಿಬಿಡುತ್ತಿ. ಕೇವಲ ಈ ಘಟನೆ ಅಥವಾ ಆ ಘಟನೆಯನ್ನುಂಟುಮಾಡುವುದು ಅಥವಾ ಮಾಡಿಸುವುದನ್ನು ನೋಡಿದರೆ ನಿನಗೆ ಸಮಾಧಾನವಾಗುವುದಿಲ್ಲ. ನಮ್ಮ ಜನರು ಈಗಿನ ನಿಸ್ಸಹಾಯಕರಾದ ಅಶಿಕ್ಷಿತ ಅಥವಾ ಸುಶಿಕ್ಷಿತ ಜನರಿಗಿಂತ ಹೆಚ್ಚು ಶಕ್ತಿಶಾಲಿಗಳೂ ಹೆಚ್ಚು ಉನ್ನತ ಮಟ್ಟದವರೂ ಆಗಿರುವಂತೆ ಮಾಡಿದರೆ ನನಗೆ ತೃಪ್ತಿ."

ಅವರ ಕೃತಿಗಳಲ್ಲಿ, ಅದರಲ್ಲಿಯೂ ವಿಶೇಷವಾಗಿ ಕಥಾನಾಯಕನಾದ **ಸರಸ್ವತಿ ಚಂದ್ರ**ನಲ್ಲಿ ತೀವ್ರತರವಾದ ಸ್ವದೇಶಪ್ರೇಮ ಕಂಡುಬರುತ್ತದೆ. ಅವರಿಗೆ ಸ್ವದೇಶಾಭಿಮಾನ ಆಧ್ಯಾತ್ಮದ ಒಂದು ಅಂಗವಾಗಿತ್ತು. ಅವರು ತಮ್ಮ ದೇಶಬಾಂಧವರ ಅಂತರ್ಯವನ್ನು ರೂಪಿಸಬಯಸಿದರು. ಹೀಗೆ ಮಾಡುವುದೆ ದೇಶಸೇವೆ ಮಾಡುವ ಅತ್ಯುತ್ತಮ ರೀತಿಯಾಗಿತ್ತು. ಅದರಂತೆಯೇ ದೇಶಸೇವೆ ಮಾಡುವ ಇನ್ನೊಂದು ಅತ್ಯುತ್ತಮ ಮಾರ್ಗವೆಂದರೆ ಜ್ಞಾನಮಾರ್ಗವೆಂದು ಸ್ಪಷ್ಟವಾಗಿ ನಂಬಿದ್ದ ಅವರು ಪಾಂಡಿತ್ಯ ಮತ್ತು ಆತ್ಮಜ್ಞಾನವನ್ನು ಗಳಿಸುವುದರಲ್ಲಿ ನಿರತರಾಗಿದ್ದರು. ತಮ್ಮ ಸೃಜನಾತ್ಮಕ ಶಕ್ತಿಯನ್ನು ಭಾಷಾಮಾಧ್ಯಮದ ಮೂಲಕ ಅಭಿವ್ಯಕ್ತಿಸುವುದರಿಂದ ಅವರು ಜೀವನ ಪರ್ಯಂತ ನಿಜವಾದ ಪಾಂಡಿತ್ಯವನ್ನು ಗಳಿಸುವುದರ ಸಲುವಾಗಿ ಪರಿಶ್ರಮಿಸಿದರು.

ಕರ್ಮವನ್ನೊಳಗೊಂಡ ವೈರಾಗ್ಯವೇ ಗೋವರ್ಧನರಾಮ ಅವರ ಜೀವನತತ್ವದ ತಳಹದಿಯಾಗಿತ್ತು. ಹೀಗಾಗಿ ಅದು ಅವರ ಜೀವನ ಮತ್ತು ಕೃತಿಗಳಲ್ಲಿ ಎದ್ದುಕಾಣುತ್ತದೆ. ಜೀವನ ಮತ್ತು ಸಾಹಿತ್ಯದ ಬಗೆಗೆ ಅವರಿಗಿರುವ ವಿಚಾರಗಳು ಮತ್ತು ಕಲ್ಪನೆಗಳು ಈ 'ಪ್ರಾಯೋಗಿಕ ವೈರಾಗ್ಯ' ದ ವಿವಿಧ ರೂಪಗಳೆ ಆಗಿವೆ. ಕರ್ಮರಹಿತ ವೈರಾಗ್ಯವೆಂದರೆ ಅವರಿಗೆ ಸೇರುತ್ತಿರಲಿಲ್ಲ. ಅವರ ಪ್ರಕಾರ 'ಕರ್ತವ್ಯ' ಒಳ್ಳೆಯ ಜೀವನದ ಆದರ್ಶವಾಗಿತ್ತು. ಕರ್ತವ್ಯವೆಂದರೆ ಅದೊಂದು ಆಧ್ಯಾತ್ಮಿಕ ಶಕ್ತಿಯಾಗಿದ್ದು ಅದೇ ಜೀವನದ ಗುರಿಯೂ ಆಗಿರಬೇಕೆಂದು ಅವರು ನಂಬಿದ್ದರು. ಆಧ್ಯಾತ್ಮಿಕ ಮಹತ್ವವಿಲ್ಲದ ಧರ್ಮದ ಬಾಹ್ಯ ಪರಿಕರಗಳು ಅವರಿಗೆ ಹಿಡಿಸುತ್ತಿರಲಿಲ್ಲ. ಮನುಷ್ಯ ತನ್ನ ಕುಟುಂಬಕ್ಕಾಗಿ, ತನ್ನ ಸಮಾಜಕ್ಕಾಗಿ ಮತ್ತು ದೇಶಕ್ಕಾಗಿ ಮಾಡುವ ಕರ್ತವ್ಯದಲ್ಲಿಯೆ ಆತನ ಆಧ್ಯಾತ್ಮಿಕತೆ ಅಡಗಿದೆ ಎಂದು ನಂಬಿದ್ದರು ಗೋವರ್ಧನರಾಮ ಅವರು. ಇದೇ ನಿಜವಾದ ಸಂತೋಷವನ್ನನನುಭವಿಸುವ ಮಾರ್ಗವಾಗಿತ್ತು. ಪಾಶ್ಚಾತ್ಯ ದೇಶಗಳ ಪ್ರಭಾವದ ಪರಿಣಾಮವಾಗಿ ಭಾರತದಲ್ಲಿ ಉಂಟಾದ ಸಾಂಸ್ಕೃತಿಕ ಪುನರುಜ್ಜೀವದ

ಕಾಲದಲ್ಲಿ ಗೋವರ್ಧನರಾಮ ಅವರಂಥ ವಿಚಾರವಂತರು ಭಾರತೀಯ ಧಾರ್ಮಿಕ ಬರಹಗಳಲ್ಲಿ ಹುದುಗಿದ ಕರ್ತವ್ಯದ ಕಲ್ಪನೆಯನ್ನು ಪ್ರಚಾರಗೊಳಿಸಲಾರಂಭಿಸಿದರು. ಈ ವೇಳೆಗೆ 'ಪ್ರಾಯೋಗಿಕ ವೇದಾಂತ' ದ ಪ್ರತಿಪಾದಕರಾದ ಸ್ವಾಮಿ ವಿವೇಕಾ ನಂದರು ಇನ್ನೂ ಭಾರತೀಯ ದಿಗಂತದಲ್ಲಿ ಮೂಡಿರಲಿಲ್ಲ. ಹೀಗೆ ಸ್ವಾಮಿ ವಿವೇಕಾ ನಂದರಿಗಿಂತ ಮೊದಲೆ ಆಧ್ಯಾತ್ಮಿಕತೆ ಮತ್ತು ಕರ್ತವ್ಯಗಳನ್ನು ಒಂದುಗೂಡಿಸಿ ತಮ್ಮ ದೇಶಬಾಂಧವರನ್ನು ಎಚ್ಚರಗೊಳಿಸಿದ ಕೀರ್ತಿ ಗೋವರ್ಧನರಾಮ ಅವರದು,

ಕರ್ಮ ಮತ್ತು ಕರ್ತವ್ಯಗಳನ್ನೊಳಗೊಂಡ ವೈರಾಗ್ಯವನ್ನು ಸಾಧಿಸಲು ಗೋವರ್ಧನರಾಮ ಅವರು ಬೋಧಿಸುತ್ತಾರೆ: 'ನೀನಿದ್ದಲ್ಲಿಂದಲೆ ನಿನ್ನ ಕರ್ತವ್ಯವನ್ನು ಪ್ರಾರಂಭಿಸು. ನಿನ್ನ ಕುಟುಂಬಕ್ಕಾಗಿ ಮಾಡುವ ಕರ್ತವ್ಯವೆ ನಿನ್ನ ಮೊದಲ ಕರ್ತವ್ಯ. ಮೊದಲು ನಿನ್ನ ಕುಟುಂಬದವರನ್ನೆಲ್ಲ ಆರೋಗ್ಯವಂತರನ್ನಾಗಿ ಮಾಡಿ ಅವರೂ ನಿನ್ನ ಕೆಲಸದಲ್ಲಿ ಪಾಲ್ಗೊಳ್ಳುವಂತೆ ಮಾಡು. ದೇಶಕ್ಕಾಗಿ ದುಡಿ, ಅವರ ಅವಶ್ಯಕತೆ ಗಳನ್ನು, ಆಕ್ಷೇಪಣೆಗಳನ್ನು, ಮತ್ತು ತೊಂದರೆಗಳನ್ನು ತಿಳಿದುಕೊ. ಅವುಗಳನ್ನೆಲ್ಲ ಹೋಗಲಾಡಿಸಲು, ಅವುಗಳನ್ನೆಲ್ಲ ಕಡಿಮೆಮಾಡಲು ಯಾವುದಾದರೊಂದು ಮಾರ್ಗ ವನ್ನು ಕಂಡುಹಿಡಿದು ಅದನ್ನು ಸರಿಯಾಗಿ ಅನುಸರಿಸು. ಇಡೀ ಮಾನವ ಜನಾಂಗದ ಸೇವೆ ಮತ್ತು ನಿಸ್ವಾರ್ಥದಲ್ಲಿಯೆ ವೈರಾಗ್ಯವಡಗಿದೆ.' ಒಂದುವೇಳೆ ಮನುಷ್ಯ ಸ್ವಾರ್ಥಿ ಯಾಗಿದ್ದರೆ ಆತ ಕೊನೆಗೆ ದುಃಖಪಡುವುದು ಖಂಡಿತ. ಜೀವನವಾದರೂ ದುಃಖದಿಂದ ತುಂಬಿದೆ. ಪರರ ಸಲುವಾಗಿ ದುಡಿಯುವುದರಲ್ಲಿಯೆ ಮನುಷ್ಯ ಸುಖಶಾಂತಿ ಪಡೆಯ ಬಹುದು. ಆದ್ದರಿಂದಲೆ ಗೋವರ್ಧನರಾಮ ಅವರು ತಮ್ಮ 'ಪ್ರಾಯೋಗಿಕ ವೈರಾಗ್ಯ' ವೆಂಬ ಪ್ರಬಂಧದಲ್ಲಿ ತಮ್ಮ ವಿಚಾರವನ್ನು ಸ್ಪಷ್ಟವಾಗಿ ಹೇಳುತ್ತಾರೆ: 'ನೀವು ಜ್ಞಾನಿಗಳಂತೆ ಕಾರ್ಯಗೈಯಬೇಕಾದರೆ ಜನತೆಯ ಕಲ್ಯಾಣವನ್ನೆ ನಿಮ್ಮ ಕಾರ್ಯ ಕೇಂದ್ರವನ್ನಾಗಿಟ್ಟುಕೊಳ್ಳಿರಿ. ಇದೇ ಉದಾತ್ತವಾದ ಮಾನವಜನಾಂಗದ ಪವಿತ್ರ ಕರ್ತವ್ಯವಾಗಿದೆ.'

ಗೋವರ್ಧನರಾಮ ಅವರ ಸ್ವದೇಶಾಭಿಮಾನ ಅವರ ಧಾರ್ಮಿಕ ಶೋಧ ಮತ್ತು ಆಧ್ಯಾತ್ಮಿಕ ಹಂಬಲದಿಂದಲೆ ಹುಟ್ಟಿಕೊಂಡದ್ದು ಎಂಬುದನ್ನು ನಾವು ಈಗಾಗಲೇ ತಿಳಿದುಕೊಂಡಿದ್ದೇವೆ. ಅವರ ಮಾತುಗಳನ್ನೇ ಕೇಳೋಣ: 'ನಮ್ಮ ದೇಶದಲ್ಲಿ ಎಷ್ಟೊಂದು ದುಷ್ಟಶಕ್ತಿಗಳು ಮೆರೆಯುತ್ತಿವೆ ಎಂಬುದನ್ನು ಪರೀಕ್ಷಿಸಿ ನೋಡಿರಿ. ಅಸಂಖ್ಯ ಧಾರ್ಮಿಕ ಪಂಥಗಳು ಮನುಷ್ಯರ ಮನಸ್ಸು ಹೃದಯಗಳನ್ನು ಸಂಕುಚಿತಗೊಳಿಸಿ ಪರಸ್ಪರರಲ್ಲಿ ಒಡಕು ಹುಟ್ಟಿಸುತ್ತವೆ. ಭಾರತಮಾತೆಯು ಪೊಳ್ಳು ಮತ್ತು ವಿಷಪೂರಿತ ಸಾಮಾಜಿಕ ಕಟ್ಟಳೆಗಳ ಬೇಡಿಗಳಿಂದ ಬಂಧಿಸಲ್ಪಟ್ಟಿದ್ದಾಳೆ. ಜನರು ಇದನ್ನೆಲ್ಲ ನೋಡಿ ಜಿಗುಪ್ಸೆ ಪಡುವುದನ್ನು ಬಿಟ್ಟು ಅದರ ಬಗೆಗೆ ಅಭಿಮಾನ ಪಡುತ್ತಾರೆ. ದೇಶದ ಜನತೆಯೆಲ್ಲ ಗಾಢವಾದ ಅಜ್ಞಾನದಿಂದ ಬಳಲುತ್ತಿದೆ. ಪರ್ವತ ಗಳಷ್ಟು ವಿಶಾಲವಾದ ಹಾಗೂ ಶಕ್ತಿಯುತವಾದ ಮೂಢನಂಬಿಕೆಗಳು ದೇಶಸುಧಾರ ಣೆಯ ಸ್ವಾಭಾವಿಕವಾದ ಭೂಗೋಳವನ್ನು ಅಡ್ಡ ಹಾದಿಗೆಳೆಯುತ್ತವೆ. ಸ್ವಪ್ರತಿಷ್ಠೆಗಾಗಿ

ಜನರು ಸಮಷ್ಟಿಯನ್ನೆ ಕೃತ್ರಿಮವಾಗಿ ನಾಶಗೊಳಿಸುತ್ತಿದ್ದಾರೆ. ಸುಶಿಕ್ಷಿತರ ಮಹತ್ವಾಕಾಂಕ್ಷೆಗಳನ್ನು ಹತ್ತಿಕ್ಕುತ್ತಿದ್ದಾರೆ, ಕೆಲವು ಸ್ವಾರ್ಥಿಗಳು. ಅತ್ಯಂತ ದುಃಖದಾಯಕ ಸಂಗತಿಯೆಂದರೆ ಬಡತನ ಭಾರತದ ಹೃದಯವನ್ನೆ ಸ್ವೇಚ್ಛೆಯಿಂದ ನುಂಗುತ್ತಲಿದೆ. ಕೊನೆಗೊಮ್ಮೆ ಬಡತನದ ತಲೆಯೆ ಈ ರಾಕ್ಷಸನ ಹೊಟ್ಟೆಯಲ್ಲಿ ಹೋಗುವ ಪ್ರಸಂಗ ಬರಬಹುದು. ಇದಲ್ಲದೆ ಅನೇಕ ತರಹದ ಸಾಮಾಜಿಕ ಹಾಗೂ ರಾಜಕೀಯ ಒಡಕುಗಳು, ಕಲಹಗಳು; ಅಜ್ಞಾನದ, ಮೂರ್ಖತನದ ಪರಿಣಾಮಗಳು ದೇಶದ ಹೃದಯವನ್ನು ಹಿಂಡಿಬಿಟ್ಟಿವೆ. ಭಾರತಮಾತೆಯು ನಿಸ್ಸಹಾಯಕತಯೆ ಕುಟುಂಬ ಜೀವನದಲ್ಲಿಯೂ ಸಾಮಾಜಿಕ ಜೀವನದಲ್ಲಿಯೂ ಕಂಡುಬರುತ್ತದೆ. ಸಿಹಿಮಾತಿನ ಆದರೆ ಪರದೇಶಪ್ರಿಯರಾದ ದೇಶರಕ್ಷಕರು ಹೊರಗೆ ಓಡಿಹೋಗುತ್ತಿದ್ದಾರೆ. ಸನ್ಯಾಸಿ ಯವರಂಥವರ ಹೃದಯವನ್ನೂ ಹಿಂಡುವ ಸಂಗತಿಯೆಂದರೆ ಭಾರತಮಾತೆಯ ಅವ್ಯಾಹತವಾದ ಹಾಗೂ ಗಟ್ಟಿಯಾದ ನರಳುವಿಕೆಯನ್ನು ಸಹಿತ ಯಾರೂ ಕೇಳ ಲಾರರು. ಏಕೆಂದರೆ ರಾತ್ರಿಯ ನಿರ್ಲಕ್ಷ್ಯ ಗೊರಕೆಯಲ್ಲಿ ಮತ್ತು ಹಗಲಿನ ಕಿವಿಗಡ ಚಿಕ್ಕುವ ಸದ್ದುಗಳಲ್ಲಿ ಅವಳ ಧ್ವನಿ ಕೇಳಿಸುವುದೆ ಇಲ್ಲ.'

ಗೋವರ್ಧನರಾಮ ಅವರ ಕಲ್ಪನೆಯ ಸನ್ಯಾಸಿಗೆ ಇದೇ ಕಾರ್ಯಕ್ಷೇತ್ರವಾಗಿದೆ. ತಮ್ಮ ಕಾಲದ ದೇಶದ ಪರಿಸ್ಥಿತಿಯನ್ನು ಅವರು ಚೆನ್ನಾಗಿ ವಿಶ್ಲೇಷಿಸುತ್ತಾರೆ. ಗೋವರ್ಧನರಾಮ ಅವರ 'ಪ್ರಾಯೋಗಿಕ ವೈರಾಗ್ಯದ' ಕಲ್ಪನೆ ಹೀಗಿದೆ: 'ಪ್ರಕೃತಿಯ ಬಗೆಗೆ ಬಲವಾದ ಹಾಗೂ ಜೀವಂತವಾದ ಪ್ರೀತಿಯಿಂದೊಡಗೂಡಿದ ಜಾಗತಿಕ ಚೈತನ್ಯ ಅವ್ಯಾಹತವಾಗಿ ಅದನ್ನು ತನ್ನಲ್ಲಿ ಮೈಗೂಡಿಸಿಕೊಂಡು, ಯಾವ ವೇದನೆಯನ್ನೂ ಅನುಭವಿಸದೆ ಶಾಂತವಾಗಿ ದೈವೀ ಇಚ್ಛೆಗೆ ಸಮರ್ಪಿಸಿಕೊಳ್ಳುವುದೆ ಸುಂದರವಾದ ವೈರಾಗ್ಯವೆನಿಸುತ್ತದೆ. ಇಂಥ ವೈರಾಗ್ಯದ ಬಗೆಗೆ ನನಗೆ ಅತ್ಯಂತ ಪ್ರೀತಿ ಗೌರವಗಳಿವೆ.'

ಗೋವರ್ಧನರಾಮ ಅವರ ತತ್ವದ ಪ್ರಕಾರ ಅವರು ಕೇವಲ ನಿರೀಕ್ಷಕರಾಗಿರ ಬಯುಸುವುದಿಲ್ಲ. ತಮ್ಮ ಕಾಲದ ವಿವಿಧ ಕಾರ್ಯಗಳಲ್ಲಿ ಅವರು ಪಾಲ್ಗೊಂಡು ತಮ್ಮ ಉದ್ದೇಶಗಳನ್ನು ಸಾಧಿಸಬಯಸುತ್ತಾರೆ. ಅವರು ಒಂದು ಸಾರೆ ನಂದಿಯಾಡದಲ್ಲಿ ಒಂದು ಸಹಕಾರಿ ಭಂಡಾರವನ್ನು ಉದ್ಘಾಟಿಸಿದರು. ಅವರ ಅನೇಕ ಬರಹಗಳು ಇದಕ್ಕೆ ಸಾಕ್ಷಿಯಾಗಿವೆ. ಒಮ್ಮೆ ಅವರ ಜಿಲ್ಲೆಯ ಜಿಲ್ಲಾಧಿಕಾರಿ ಅವರಿಗೆ ಖಾನೆ ಸುಮಾರಿಯ ಪರಿಶ್ರಮದ ಕೆಲಸದಲ್ಲಿ ಸಹಾಯಕಮಾಡಲು ಕೇಳಿಕೊಂಡಾಗ, ತಮ್ಮ ಆರೋಗ್ಯ ಸರಿಯಾಗಿರದಿದ್ದರೂ ಅದು ತಮ್ಮ ಕರ್ತವ್ಯವೆಂದು ತಿಳಿದು ಗೋವರ್ಧನ ರಾಮ ಅವರು ಸಹಾಯಮಾಡಿದರು. ಅವರು ಜೀವನದ ಬಗೆಗೆ ತಮಗಿರುವ ಅಭಿಪ್ರಾಯಗಳನ್ನು ಚೆನ್ನಾಗಿ ಬರೆದಿಟ್ಟಿದ್ದಾರೆ. ಅವರ **ಖಾಸಗಿಪುಸ್ತಕ** ದಲ್ಲಿ 'ಕರ್ತವ್ಯ' ವೆಂಬ ಪದ ಆಗಿಂದಾಗ ಕಾಣಿಸಿಕೊಳ್ಳುತ್ತದೆ. ಅವರಲ್ಲಿರುವ ಕರ್ತವ್ಯ ಪ್ರಜ್ಞೆ ಮತ್ತು ಅದನ್ನು ಕಾರ್ಯರೂಪಕ್ಕಿಳಿಸುವುದು—ಇವೆರಡೂ ಬಹಳ ಮನಂ ಬುಗುವಂತಿದೆ.

ಗೋವರ್ಧನರಾಮ ಅವರು ಒಬ್ಬ ಸಾಹಿತಿಯೆಂದೆ ಪ್ರಸಿದ್ಧರಾಗಿದ್ದಾರೆಯೆ ಹೊರತು ಸುಯೋಜಿತವಾದ ಸಿದ್ಧಾಂತವನ್ನು ಹೊಂದಿದ ತತ್ವಜ್ಞಾನಿಯೆಂದಲ್ಲ. ಆದರೂ ಸಹಿತ **ಸರಸ್ವತಿಚಂದ್ರ** ಅವರ ಜೀವನ ಸಿದ್ಧಾಂತದ ಮೂರ್ತಿಕರಣವೆ ಆಗಿದೆ. ಕಲೆಯು ಒಂದು ಸಿದ್ಧಾಂತವನ್ನು ಪ್ರಜ್ಞಾಪೂರ್ವಕವಾಗಿ ಕಟ್ಟದಿದ್ದರೂ ಅದು ಕಲೆಯ ತತ್ವಗಳಿಗೆ ಚ್ಯುತಿಬರದಂತೆ ಒಂದು ತರಹದ ಜೀವನ ದರ್ಶನವನ್ನು ಒಳಗೊಂಡೆಯೆ ಇರುತ್ತದೆ. ಎಲ್ಲಾ ಮಹಾಸಾಹಿತ್ಯ ಕೃತಿಗಳಲ್ಲಿಯೂ ಕೆಲವೊಂದು ಚಿಂತನಪರ ಭಾಗಗಳು ಇದ್ದೇ ಇರುತ್ತವೆ. ಅದರಿಂದ ಸಾಹಿತ್ಯಕೃತಿಗೆ ಧಕ್ಕೆಬರುತ್ತದೆ ಎಂದೇನಿಲ್ಲ. **ಸರಸ್ವತಿಚಂದ್ರ** ದಲ್ಲಿ ಇಂಥ ಕೆಲವು ಭಾಗಗಳು ಬರುವುದರಿಂದ ಕೆಲವು ವಿಮರ್ಶಕರು ಆಕ್ಷೇಪವೆತ್ತುತ್ತಾರೆ. ಆದರೆ ಈ ವಿಮರ್ಶಕರು ಈ ಚಿಂತನಪರ ಭಾಗಗಳು ಅದರ ಸಾಹಿತ್ಯಿಕ ಮೌಲ್ಯಗಳನ್ನು ಹೇಗೆ ಮೊಟಕು ಗೊಳಿಸುತ್ತವೆ ಎಂಬುದನ್ನು ಸಿದ್ಧಮಾಡಿ ತೋರಿಸಲಾರರು. ಇಂಥ ಅಭಿಪ್ರಾಯಗಳು ಅವರವರ ಸಾಹಿತ್ಯಾಭಿರುಚಿಯನ್ನು ತೋರಿಸುತ್ತವೆ. ಕರ್ತವ್ಯ ಮತ್ತು ಶಿಕ್ಷಣ ಮುಂತಾದ ವಿಷಯಗಳ ಬಗೆಗೆ ಬರುವ ಚಿಂತನಪರ ಭಾಗಗಳು ಈ ಸಾಹಿತ್ಯಕೃತಿಯಲ್ಲಿ ಸಾವಯವ ವಾಗಿ ವ್ಯೆಗೂಡಿಲ್ಲವೆಂಬುದೇನೋ ನಿಜವೆ. ಆದರೂ ಸಹಿತ ಗೋವರ್ಧನರಾಮ ಅವರ ಜೀವನಸಿದ್ಧಾಂತ **ಸರಸ್ವತಿಚಂದ್ರ**ದ ವಸ್ತು ಮತ್ತು ಶಿಲ್ಪದ ಕೇಂದ್ರವಾಗಿ ಬಂದುದರಿಂದ ಸಾಹಿತ್ಯದ ಮೌಲ್ಯಗಳನ್ನು ಪಡೆದುಕೊಳ್ಳುತ್ತದೆ. **ಶೇಕ್ಸಪಿಯರನ ಜೀವನಸಿದ್ಧಾಂತ** ವೆಂಬ ಪುಸ್ತಕದಲ್ಲಿ ಕೆ. ಜೆ. ಸ್ಪ್ಯಾಲ್ಡಿಂಗ್ ಅವರು ಸರಿಯಾದ ದೃಷ್ಟಿಯನ್ನೆ ಅಳವಡಿಸಿಕೊಂಡಿದ್ದಾರೆ: 'ಮೇಲು ನೋಟಕ್ಕೆ ಶೇಕ್ಸಪಿಯರ್ ಒಬ್ಬ ತತ್ವಜ್ಞಾನಿಯಾಗಿ ಕಾಣಿಸುವುದಿಲ್ಲ. ಆದರೂ ಕವಿಗಳು ಮತ್ತು ಕಲಾಕಾರರು ವಿವೇಕ ಮತ್ತು ತತ್ವದಮೂಲಕ ಸಿದ್ಧಾಂತವನ್ನು ವಿವರಿಸಿರುವ ತತ್ವಜ್ಞಾನಿಗಳಿಗಿಂತ ಹೆಚ್ಚು ಸಂವೇದನಾಶೀಲರಾಗಿ ವಸ್ತುಗಳ ಸತ್ಯವನ್ನು ಗ್ರಹಿಸುತ್ತಾರೆ. ತತ್ವಜ್ಞಾನಿ ಗಳಲ್ಲಿಯೂ ವಾಸ್ತವವಾದಿ ಮತ್ತು ಆದರ್ಶವಾದಿಗಳೆಂಬ ಎರಡು ಪ್ರಕಾರಗಳಿವೆ' ಗೋವರ್ಧನರಾಮ ಅವರು ವಾಸ್ತವವಾದಿಗಳ ಗುಂಪಿಗೆ ಸೇರಿದವರಾಗಿದ್ದರು. ಸ್ಪ್ಯಾಲ್ಡಿಂಗ್ ಅವರು ಹೇಳಿದಂತೆ, ವಾಸ್ತವವಾದಿಗಳು ನಿಜವಾದ, ಅನುಭವಗಮ್ಯ ವಾದ ಜೀವನವನ್ನು ನಿರೀಕ್ಷಿಸುತ್ತಾರೆ.

ಗೋವರ್ಧನರಾಮ ಅವರಿಗಿಂತ ಮೊದಲು ಅನೇಕ ಸುಧಾರಕರು, ಸಂಪ್ರದಾಯ ವಾದಿಗಳು ಆಗಿಹೋಗಿದ್ದಾರೆ. ಸಮಾಜ ಸುಧಾರಕರೆಲ್ಲ ಸಾಂಸ್ಕೃತಿಕ ಸುಧಾರಣೆಗಳ ಮೇಲೆಯೇ ಹೆಚ್ಚು ಗಮನಕೊಟ್ಟರು. ಗೋವರ್ಧನರಾಮ ಅವರು ಈ ಅರ್ಥದಲ್ಲಿ ಸಮಾಜ ಸುಧಾರಕರಾಗಿರಲಿಲ್ಲ. ಆದರೆ, ಪ್ರಿತಿ, ಕರ್ತವ್ಯ, ಮದುವೆ ಮುಂತಾದ ವಿಷಯಗಳ ಬಗೆಗೆ ಪ್ರಗತಿಪರ ವಿಚಾರಗಳನ್ನು ಹೊಂದಿದ್ದರು. ಅವರು ಖಂಡಿತ ವಾಗಿಯೂ ಸಂಪ್ರದಾಯವಾದಿಗಳಾಗಿರಲಿಲ್ಲ. ಅವರು ಪೂರ್ವದ ಆಧ್ಯಾತ್ಮಿಕತೆ ಯನ್ನೂ ಪಶ್ಚಿಮದ ವೈಚಾರಿಕತೆಯನ್ನೂ ಮೇಳವಿಸಿಕೊಂಡಿದ್ದರು. ಕರ್ತವ್ಯ ಪ್ರಜ್ಞೆಯೆ ಪೂರ್ವದ ಆಧ್ಯಾತ್ಮಿಕತೆಯ ಕೇಂದ್ರವಾಗಿತ್ತು. ಗೋವರ್ಧನರಾಮ ಅವ ರೆಂದಿಗೂ ಭಾರತೀಯ ರೂಢಿ ಪರಂಪರೆಗಳನ್ನು ಅಲಕ್ಷಿಸುವವರಲ್ಲ. ಅವನ್ನೆಲ್ಲ

ಪಾಶ್ಚಾತ್ಯ ಮೌಲ್ಯಗಳೊಂದಿಗೆ ಹೊಸೆಯುವ ಪ್ರಯತ್ನವೆ ಅವರ ಸಾಹಿತ್ಯದಲ್ಲಿ ವ್ಯಕ್ತವಾಗಿದೆ.

ಸಾಮಾಜಿಕಪ್ರಜ್ಞೆ ಗೋವರ್ಧನರಾಮ ಅವರ ಜೀವನದರ್ಶನದ ಅಂಗವಾಗಿತ್ತು. ಕಾರ್ಯವನ್ನೊಳಗೊಂಡ ವೈರಾಗ್ಯವೆ ಅವರ ಪ್ರಮುಖ ತತ್ವವಾಗಿತ್ತು. ವೇದಾಂತದ ಜೀವ, ದೇವರು ಮತ್ತು ಬ್ರಹ್ಮ ಎಂಬ ಮೂರು ಮುಖ್ಯ ಕಲ್ಪನೆಗಳಿಂದ ಗೋವರ್ಧನರಾಮ ಅವರು ಇಂದ್ರಿಯಗಮ್ಯ, ಹಾಗೂ ಇಂದ್ರಿಯಾತೀತವೆಂಬ ಕಲ್ಪನೆಗಳನ್ನು ರೂಢಿಸಿಕೊಂಡರು. 'ಜೀವ' ಮತ್ತು 'ದೇವರು' ಗಳು ಇಂದ್ರಿಯಗಮ್ಯವಾದರೆ ನಿರ್ಗುಣವಾದ ಬ್ರಹ್ಮ ಇಂದ್ರಿಯಾತೀತವಾಗಿದೆ. ಇದನ್ನೇ ಅವರ ಕಥಾನಾಯಕ ಸರಸ್ವತಿಚಂದ್ರ ಹೀಗೆ ಹೇಳುತ್ತಾನೆ: 'ಕರ್ತವ್ಯ ಅತಿಮುಖ್ಯವಾದುದು. ವೈರಾಗ್ಯ ಬಂದಾಗ ಕರ್ತವ್ಯವನ್ನು ಮರೆಯುವಂತಿಲ್ಲ' ಇದೇ ಗೋವರ್ಧನರಾಮ ಅವರ 'ಪ್ರಾಯೋಗಿಕ ವೈರಾಗ್ಯ' ದ ಕಲ್ಪನೆ.

ಗೋವರ್ಧರಾಮ ಅವರು ಮೂಲತಃ ಒಬ್ಬ ವಿಚಾರವಾದಿಗಳಾಗಿದ್ದರು. ಅವರ **ಖಾಸಗಿ ಪುಸ್ತಕವು** ಅವರು ತಾತ್ವಿಕ ಸಮಸ್ಯೆಗಳ ಬಗೆಗೆ ನಡೆಸಿದ ಚಿಂತನಕ್ಕೆ ಸಾಕ್ಷಿ. ಆದರೂ ಅವರು ಈ ತತ್ವಗಳನ್ನು ಶುಷ್ಕಪಂಡಿತರಂತೆ ವಿಶ್ಲೇಷಿಸದೆ ಒಬ್ಬ ಸತ್ಯಶೋಧಕನಂತೆ ನೋಡುವುದರಿಂದ ಅವರ ವಿಚಾರಧಾರೆ ಯೋಗದೊಂದಿಗೂ ಹೊಂದಿಕೊಳ್ಳುತ್ತದೆ. ಇದೇ ದಿಶೆಯಲ್ಲಿ ಚಿಂತನಗೈದು ಕೊನೆಗೆ ಅವರು 'ಕ್ಷಯಸಿದ್ಧಾಂತ' ವನ್ನು ರೂಪಿಸಿಕೊಳ್ಳುತ್ತಾರೆ. ಸಮಾಜದ ಏಳ್ಗೆಗಾಗಿ ವ್ಯಕ್ತಿಯೊಬ್ಬ ತನ್ನನ್ನು ತಾನೆ ಅರ್ಪಿಸಿಕೊಂಡರೆ ಇಲ್ಲವೆ ಆಹುತಿಗೊಟ್ಟರೆ ಅದೆ 'ಕ್ಷಯ' ವಾಗುತ್ತದೆ ಅವರ ಅರ್ಥದಲ್ಲಿ. **ಖಾಸಗಿ ಪುಸ್ತಕ** ದಲ್ಲಿ 'ಮಹೇಚ್ಛೆ' 'ಮಹಾಶಕ್ತಿ' ಗಳ ಬಗೆಗೆ ಉಲ್ಲೇಖ ಸಿಗುತ್ತದೆ. ಜಗತ್ತನ್ನು ಸೃಷ್ಟಿಸಬೇಕೆಂಬ ದೇವರ ಇಚ್ಛೆಯೆ 'ಮಹೇಚ್ಛೆ' ಯಾಗಿದ್ದು ಕಟ್ಟಿಗೆಯಲ್ಲಿ ಹುದುಕಿದ ಬೆಂಕಿಯಂತೆ ಕಣ್ಣಿಗೆ ಕಾಣುವುದಿಲ್ಲ; ಇದೇ ತತ್ವವನ್ನೆ ಗೋವರ್ಧನರಾಮ ಅವರು ಸಂಸ್ಕೃತದಲ್ಲಿ ಬರೆದ ೨೧ ಪದ್ಯಗಳಲ್ಲಿ ಹಿಡಿದಿಟ್ಟಿದ್ದಾರೆ.

'ಮಹಾಶಕ್ತಿ' ಸುಪ್ತವಾಗಿರುತ್ತದೆ. ಅದನ್ನು ನಾವು ಅಭ್ಯಾಸ ಬಲದಿಂದ ಎಚ್ಚರಿಸಬೇಕು. ವ್ಯಕ್ತಿಯ ಇಚ್ಛೆ ದೇವೆಚ್ಛೆ ಅಥವಾ ಮಹೇಚ್ಛೆಯೊಡನೆ ಒಂದುಗೂಡಿದಾಗ ಮನುಷ್ಯನ ಅಹಂಭಾವನೆ 'ಕ್ಷಯ' ದ ಮಟ್ಟವನ್ನು ಮುಟ್ಟುತ್ತದೆ. ಅದನ್ನೆ ಗೋವರ್ಧನರಾಮ ಅವರು ಸಂಸ್ಕೃತದಲ್ಲಿ ಹೀಗೆ ಹೇಳುತ್ತಾರೆ: 'ದೇವೇಚ್ಛೆ ನನ್ನಿಚ್ಛೆಯಾದಾಗ ದೇವೇಚ್ಛೆಯ ಬಿರುಗಾಳಿಗಳು ಶಾಂತವಾಗುತ್ತವೆ.' ಗೋವರ್ಧನರಾಮ ಅವರು ಮೊಟ್ಟಮೊದಲು ತತ್ವಜ್ಞಾನಿ ಶೋಪೆನ್‌ಹಾವರನ 'ಇಚ್ಛಾಶಕ್ತಿ' ಎಂಬ ವಿಚಾರವನ್ನು ಕೇಳಿದಾಗ ಹೀಗೆ ಹೇಳಿದರಂತೆ: 'ನನ್ನನ್ನು ಬಿಟ್ಟು ಮತ್ತೆ ಯಾರಿಗಾದರೂ ಈ ವಿಚಾರ ಹೊಳೆದಿದ್ದರೆ ಅದು ಶೋಪೆನಹಾವರಿಗೆ.' ಅವರು ತಮ್ಮ **ಖಾಸಗಿ ಪುಸ್ತಕ** ದಲ್ಲಿ 'ಪುನರ್ಜನ್ಮವಿದೆಯೆ?' ಎಂದು ಕೇಳುತ್ತಾರೆ. ಆಮೇಲೆ ತರ್ಕದ ಸಹಾಯದಿಂದ ಪುನರ್ಜನ್ಮವಿದೆಯೆಂದು ಸಿದ್ಧಮಾಡಲು ಪ್ರಯತ್ನಿಸುತ್ತಾರೆ. ತಮ್ಮ

ಮರಣದ ನಂತರ ತತ್ವಜ್ಞಾನ ಮತ್ತು ಕಾವ್ಯಗಳನ್ನಭ್ಯಸಿಸಿದ ತಮ್ಮ ಪ್ರಜ್ಞೆಯು ಜೀವಂತವಾಗಿಯೆ ಉಳಿಯುತ್ತದೆ ಎಂದು ಹೇಳಿದ್ದಾರೆ ಅವರು. ಆದರೆ ಆರೋಗ್ಯವಂತ ರಾಗಿರದ ಜೀವಿಗಳು ಮರಣದ ನಂತರ ಸಂಪೂರ್ಣವಾಗಿ ನಶಿಸಿಹೋಗುತ್ತವೆ ಎಂದು ಅವರು ನಂಬಿದ್ದರು.

ಗೋವರ್ಧನರಾಮ ಅವರು ಸುಪ್ರಸಿದ್ಧ ತತ್ವಜ್ಞಾನಿಗಳಾದ ವಿದ್ಯಾರಣ್ಯರ 'ಪಂಚದಶಿ' ಯಿಂದ ಪ್ರಭಾವಿತರಾಗಿದ್ದರು. ವಿದ್ಯಾರಣ್ಯರ 'ಜೀವನ್ಮುಕ್ತ' ವೆಂಬ ಕಲ್ಪನೆಯನ್ನೆ ತಮ್ಮ ಆಧ್ಯಾತ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದಾರೆ. ಇದು ಅವರ 'ಕರ್ತವ್ಯ' ಮತ್ತು 'ವೈರಾಗ್ಯ' ಗಳ ಕಲ್ಪನೆಯಲ್ಲಿಯೂ ಕಂಡುಬರುತ್ತವೆ.

ಜೀವನ್ಮುಕ್ತನಾದವನು ಯಾವ ಫಲಾಪೇಕ್ಷೆಯಿಲ್ಲದೆ ಸಮಾಜ ಸುಧಾರಣೆಯ ಕಾರ್ಯದಲ್ಲಿ ತೊಡಗುತ್ತಾನೆ. ಕಾದಂಬರಿಯ ಕಥಾನಾಯಕನಾದ ಸರಸ್ವತಿಚಂದ್ರ ತನ್ನ ಜೀವನದಲ್ಲಿ ಅನೇಕ ಬದಲಾವಣೆಗಳನ್ನನುಭವಿಸಿದರೂ ಕೊನೆಗೆ ಸಮಾಜ ಜೀವನಕ್ಕೆ ಮರಳುತ್ತಾನೆ. **ಸರಸ್ವತಿಚಂದ್ರ** ಮತ್ತು **ಸ್ನೇಹಮುದ್ರಾ** ಇವೆರಡೂ ಕಾದಂಬರಿಗಳಲ್ಲಿ ಪ್ರೀತಿಯೆ ಕಥಾಕೇಂದ್ರವಾಗಿದ್ದರೂ ಅದು ಸಾಮಾಜಿಕ ಪರಿಸರದಿಂದ ಬೇರ್ಪಟ್ಟಿಲ್ಲ. ಇದು ಗೋವರ್ಧನರಾಮ ಅವರ ಜೀವನದರ್ಶನ ಕತೆಯಾಗಿ ಮಾರ್ಪಟ್ಟಿರುವ ಉದಾಹರಣೆ.

# IV ಸರಸ್ವತಿಚಂದ್ರ

**ಸರಸ್ವತಿಚಂದ್ರ** ದ ನಾಲ್ಕು ಭಾಗಗಳು ಪ್ರಕಟವಾಗಬೇಕಾದರೆ ಹದಿನೈದು ವರುಷಗಳು (೧೮೮೭ ರಿಂದ ೧೯೦೧) ಕಳೆದವು. ಈ ಕಾದಂಬರಿಯ ಮೊದಲ ಭಾಗ ೧೮೮೭ ರಲ್ಲಿ ಪ್ರಕಟವಾದಾಗ ಗುಜರಾಥಿ ಭಾಷೆಯಲ್ಲಿ ಗದ್ಯ ಇನ್ನೂ ಸರಿಯಾಗಿ ಬೆಳೆದಿರಲಿಲ್ಲ. ಹೀಗಾಗಿ ಇದು ಪ್ರಕಟವಾದಾಗ ತನ್ನ ಗದ್ಯಸೌಂದರ್ಯದಿಂದ ಮುಂದೆ ಬರುವ ಲೇಖಕರಿಗೆ ಒಂದು ಆದರ್ಶವನ್ನು ಹಾಕಿ ಕೊಟ್ಟಿತು. ಕಾದಂಬರಿಯು ಕಥಾವಸ್ತುವಿನ ಕಾಳಜಿಯನ್ನು ತೋರಿಸುವುದಲ್ಲದೆ, ಗೋವರ್ಧನರಾಮ ಅವರು ಸಮಾಜ ಸುಧಾರಕರಿಗೂ ಒಂದೆರಡು ಮಹತ್ವದ ಅಂಶಗಳನ್ನು ಸೂಚಿಸಿದರು. ಭಾರತೀಯ ಲೇಖಕರು ಪಾಶ್ಚಾತ್ಯ ಸಂಸ್ಕೃತಿಯಿಂದ ಪ್ರಭಾವಿತರಾಗಿ ಭಾರತೀಯ ಸಮಾಜದ ಚಿತ್ರವನ್ನು ನಿರೂಪಿಸುವಾಗ ಭಾರತೀಯತ್ವವನ್ನು ಮರೆಯಬಾರದೆಂದು ಅವರು ಎಚ್ಚರಿಸುತ್ತಾರೆ. ಹೀಗೆ ಅವರ ಜೀವನದಲ್ಲಿ ಪಾಶ್ಚಾತ್ಯ ವೈಚಾರಿಕತೆ, ಪೌರ್ವಾತ್ಯ ಆಧ್ಯಾತ್ಮಿಕತೆ ಮತ್ತು ಕರ್ತವ್ಯ ಪ್ರಜ್ಞೆಗಳು ಮುಪ್ಪುರಿಗೊಂಡಿವೆ. ಸೃಜನಾತ್ಮಕ ಲೇಖಕರಾದ ಗೋವರ್ಧನರಾಮ ಅವರು ೨೫೦೦ ಪುಟಗಳ ವಿಶಾಲ ವಾದ ಚಿತ್ರಪಟದ ಮೇಲೆ ಒಂದು ಜೀವಂತ ಪ್ರೇಮಕಥೆಯನ್ನು ಚಿತ್ರಿಸಿದರು. ಈ

ಮೊದಲೆ ಹೇಳಿದಂತೆ, ಈ ಕಾದಂಬರಿಯಲ್ಲಿ ಅನೇಕ ತಾತ್ವಿಕ ಭಾಗಗಳು ಕಥಾವಸ್ತುವಿನೊಂದಿಗೆ ಸಾವಯುವವಾಗಿ ಬೆರೆತು ಕೊಂಡಿದ್ದರೂ ಗೋವರ್ಧನರಾಮ ಅವರನ್ನು ಕಲೆಯ ಹೊಣೆಗಾರಿಕೆಯ ಆಳವಾದ ಪ್ರಜ್ಞೆಯಿಲ್ಲದವರೆಂದು ಹೇಳಲಾಗದು.

ಸಮಾಜ ಸುಧಾರಣೆ, ಕುಟುಂಬದ ಸಮಸ್ಯೆಗಳು ಹಾಗೂ ಇವೆಲ್ಲವುಗಳೊಂದಿಗೆ ನಿಕಟವಾದ ರಾಜಕೀಯ ಜೀವನ- ಇವೆಲ್ಲವೂ ಕಾದಂಬರಿಯಲ್ಲಿ, ಕೇಂದ್ರಸ್ಥಾನದಲ್ಲಿವೆ. ಆದ್ದರಿಂದ ಈ ಕಾದಂಬರಿಯ ಕಥಾವಸ್ತು ಆತ್ಮದ ನಿರಂತರ ವಿಸ್ತಾರವೆಂದು ಹೇಳಬಹುದು.

ಬೇರೆಬೇರೆ ಸಂಸ್ಕೃತಿಗಳಲ್ಲಿರುವ ಅತ್ಯುತ್ತಮ ಅಂಶವನ್ನು ಆರಿಸಿಕೊಂಡು ಒಂದು ಹೊಸ ಜೀವನ ದರ್ಶನವನ್ನು ರೂಪಿಸಿಕೊಳ್ಳುವುದು ಅನೇಕ ಭಾರತೀಯ ಲೇಖಕರ ವಾಡಿಕೆಯಾಗಿತ್ತು. ಹೀಗೆ ಮಾಡುವುದರಿಂದ ಒಂದು ಹೊಸ ತೆರನಾದ ಭಾರತೀಯತ್ವವನ್ನು ಸ್ಥಾಪಿಸಿದಂತಾಗುತ್ತದೆಂದು ಅವರೆಲ್ಲ ನಂಬಿದ್ದರು. ಉದಾಹರಣೆಗೆ, ರವೀಂದ್ರನಾಥ ಠಾಕೂರ ಅವರು ಪಾಶ್ಚಾತ್ಯ ದೇಶದ ಪುನರುಜ್ಜೀವನಾನಂತರದ ಮಾನವತಾವಾದದಿಂದ ಪ್ರಭಾವಿತರಾಗಿದ್ದರೂ ಅದನ್ನವರು ಗೋವರ್ಧನ ರಾಮ ಅವರ ರೀತಿಯರಲ್ಲಿ ಅಭಿವ್ಯಕ್ತಿಸುವುದಿಲ್ಲ. ಠಾಕೂರ ಅವರ ಮಾನವತಾವಾದ ವೈಷ್ಣವ ಮತದ ತೀವ್ರವಾದ ಭಕ್ತಿ ಪಂಥವನ್ನೂ, ಸಂಸ್ಕೃತ ಗ್ರಂಥಗಳ ವಿಚಾರ ಧಾರೆಯನ್ನೂ ಉಪನಿಷತ್ತುಗಳ ತತ್ವವನ್ನೂ ಒಳಗೊಂಡ ಭಾರತೀಯ ಆಧ್ಯಾತ್ಮಿಕತೆಯನ್ನು ಅರಗಿಸಿಕೊಂಡ ಕಾವ್ಯ ಪ್ರಜ್ಞೆಯಿಂದ ಸೋಸಿ ತೆಗೆದ ಆಧ್ಯಾತ್ಮಿಕ ಮಾನವತಾ ವಾದ ವಾಗಿದೆ. ಗೋರಾ ಮತ್ತು ಸರಸ್ವತಿಚಂದ್ರ ಇವರಿಬ್ಬರೂ ಭಾರತೀಯತ್ವದ ನಿಜವಾದ ಶೋಧಕರೆ ಆಗಿದ್ದಾರೆ.

ಕಾದಂಬರಿಯ ರಚನೆ ಕುರಿತು ಹೇಳಬೇಕೆಂದರೆ, ಈ ಕಾದಂಬರಿಯ ಮೊದಲ ಭಾಗದಲ್ಲಿ ಬುದ್ಧಿಧನನ ಆಡಳಿತದ ಚಿತ್ರಣ, ಎರಡನೆಯ ಭಾಗದಲ್ಲಿ ಗುಣಸುಂದರಿಯ ಕುಟುಂಬ ಜೀವನ, ಮೂರನೆಯ ಭಾಗದಲ್ಲಿ ರತ್ನನಗರಿಯ ರಾಜಕೀಯದ ಚಿತ್ರಣ ಮತ್ತು- ನಾಲ್ಕನೆಯ ಭಾಗದಲ್ಲಿ ಕಥಾನಾಯಕನಾದ ಸರಸ್ವತಿಚಂದ್ರನ ಪ್ರಜ್ಞೆಯ ಚಿತ್ರಣ ಬರುತ್ತವೆ. ಆದುದರಿಂದ ಸಾಮಾಜಿಕ, ರಾಜಕೀಯ ಹಾಗೂ ಧಾರ್ಮಿಕ ಚಿಂತನಗಳೆಲ್ಲವೂ ನಾಲ್ಕನೆಯ ಭಾಗದಲ್ಲಿ ಕೇಂದ್ರೀಕೃತವಾಗಿವೆ.

ಸುವರ್ಣಪುರದ ದಿವಾನರಾದ ಬುದ್ಧಿಧನನ ಮಗ ಪ್ರಮುದಧನನ ಹೆಂಡತಿ ಕುಮುದಳನ್ನು ಭೇಟಿಯಾಗುವುದರ ಸಲುವಾಗಿ ಕಥಾನಾಯಕ ಸುವರ್ಣಪುರಕ್ಕೆ ಬರುವುದರೊಂದಿಗೆ ಕಾದಂಬರಿ ಪ್ರಾರಂಭವಾಗುತ್ತದೆ. ಆದುದರಿಂದ ಬುದ್ಧಿಧನನ ಆಡಳಿತದಲ್ಲಿ ಸುವರ್ಣಪುರದಲ್ಲಿ ನಡೆಯುವ ರಾಜಕೀಯ ಜೀವನ ಹಾಗೂ ಒಳಸಂಚಿನ ಚಿತ್ರ ಕಾದಂಬರಿಯ ಮೊದಲ ಭಾಗದಲ್ಲಿ ಬರುತ್ತದೆ. ಮೊದಲ ಭಾಗದ ಕೊನೆಯಲ್ಲಿ ತನ್ನ ತಂದೆ ತಾಯಿಗಳನ್ನು ಭೇಟಿಯಾಗುವುದಕ್ಕಾಗಿ ಕುಮುದಳು ಸುವರ್ಣಪುರವನ್ನು ಬಿಟ್ಟು ಹೋಗುತ್ತಾಳೆ. ಇದರಿಂದ ಓದುಗರಿಗೆ ಅವಳ ಕುಟುಂಬದ ಪರಿಚಯವಾಗುತ್ತದೆ. ಹೀಗಾಗಿ ಕಾದಂಬರಿಯ ಎರಡನೆಯ ಭಾಗದಲ್ಲಿ ನಮಗೆ ಗುಣಸುಂದರಿಯ

ಕುಟುಂಬ ಜೀವನದ ಚಿತ್ರಣ ಗೊತ್ತಾಗುತ್ತದೆ. ಮೂರನೆಯ ಭಾಗದಲ್ಲಿ ಕುಮುದಳ ತಂದೆ ದಿವಾನರಾಗಿರುವ ರತ್ನಗಿರಿ ರಾಜ್ಯದ ಜನಜೀವನದ ಚಿತ್ರಣ ಬರುತ್ತದೆ.

ಕೊನೆಯ ಭಾಗದಲ್ಲಿ ಕಳೆದು ಹೋಗಿರುವಳೆಂದು ನಂಬಲ್ಪಟ್ಟ ಕುಮುದಳು ವಿಷ್ಣು ದಾಸರ ಮಠದಲ್ಲಿ ಸರಸ್ವತಿಚಂದ್ರನಲ್ಲಿ ಬೆರೆಯುತ್ತಾಳೆ.

ಪ್ರಣಯಿಗಳಿಬ್ಬರು ತಮ್ಮ ಭಾವನೆಗಳನ್ನು ಪರಿಶುದ್ಧಗೊಳಿಸಿಕೊಂಡು ಒಂದು ಲೋಕೋತ್ತರವಾದ ಪ್ರಜ್ಞೆಯನ್ನು ಹೇಗೆ ಪಡೆಯುತ್ತಾರೆ ಎಂಬ ರೀತಿಯನ್ನು ಗೋವರ್ಧನರಾಮ ಅವರು ತಮ್ಮ ಕಾದಂಬರಿಯಲ್ಲಿ ಚಿತ್ರಿಸಲಿಚ್ಛಿಸಿದರು. ಈ ಪ್ರಣಯಿಗಳು ಜೀವನದ ಎಲ್ಲ ತರಹದ ಕಹಿ ಅನುಭವಗಳನ್ನು ಅನುಭವಿಸಬೇಕಾಗುತ್ತದೆ. ಅಂದರೆ ಮಾತ್ರ ಅವರು ಕೊನೆಯಲ್ಲಿ ಆಶೆಯಿಂದ ಮುಕ್ತರಾಗಿ ದೇವರಲ್ಲಿ ಐಕ್ಯಹೊಂದುತ್ತಾರೆ, ಅಲ್ಲದೆ ದೇಶದ ಭವಿಷ್ಯದ ದರ್ಶನವನ್ನು ಪಡೆಯುತ್ತಾರೆ. ಹೀಗಾಗಿ ನಾಲ್ಕನೆಯ ಭಾಗದ ೩೯ ನೆಯ ಅಧ್ಯಾಯದಲ್ಲಿ 'ಕಲ್ಯಾಣ ಗ್ರಾಮ' ದ ಯೋಜನೆಯ ಚಿತ್ರ ಬರುತ್ತದೆ. ಇದರಲ್ಲಿ ಗೋವರ್ಧನರಾಮ ಅವರು ಕರ್ತವ್ಯ ಮತ್ತು ವೈರಾಗ್ಯಗಳೆರಡನ್ನೂ ತಮ್ಮ ಕಥಾನಾಯಕನಲ್ಲಿ ಮೇಳವಿಸಿ ತೋರಿಸಿದ್ದನ್ನು ಕಾಣಬಹುದು. ನಲ್ಲೆಯ ಬಗೆಗಿದ್ದ ಪ್ರೇಮವನ್ನು ಗಳಿಸುವುದರ ಚಿತ್ರವನ್ನು ನಾವಿಲ್ಲಿ ಕಾಣುತ್ತೇವೆ. ಪ್ರೀತಿಯ ಶುದ್ಧೀಕರಣ ಮತ್ತು ಭಾರತೀಯತ್ವದ ಶೋಧಗಳೂ ಇದಕ್ಕೆ ಸಮಾನಾಂತರವಾಗಿ ನಡೆಯುತ್ತವೆ.

ಶಿಲ್ಪವು ಸಾಹಿತ್ಯ ಕೃತಿಯ ಸಾವಯವ ಅಂಗವಾಗಿರುತ್ತದೆ. ಕಥಾವಸ್ತು ಯಾವಾಗಲೂ ಒಂದು ಪಡಿಯಚ್ಚಿನ ಮೂಲಕವೆ ಅಭಿವ್ಯಕ್ತಿಸಲ್ಪಡುತ್ತದೆ. ಅವೆರಡನ್ನೂ ನಾವು ಬಾಟಲಿ ಮತ್ತು ವಸ್ತುಗಳಂತೆ ಬೇರ್ಪಡಿಸಲಾಗುವುದಿಲ್ಲ. ಆದರೂ ಕಾದಂಬರಿ ಒಂದು ಸಡಿಲಾದ ಸಾಹಿತ್ಯ ಪ್ರಕಾರವಾಗಿರುವುದರಿಂದ ವಸ್ತು ಮತ್ತು ರೀತಿಯ ನಡುವಿರುವ ಸಾವಯವ ಸಂಬಂಧವನ್ನು ಕಾದಂಬರಿಕಾರ ಅತ್ಯಂತ ಸೂಕ್ಷ್ಮವಾಗಿ ಪಾಲಿಸಬೇಕೆಂಬ ನಿಯಮವೇನಿಲ್ಲ. ಈ ವಿಷಯದಲ್ಲಿ ವಿವಾದವಿರುವುದರಿಂದ ಅನೇಕ ವಿಮರ್ಶಕರು ಅದನ್ನು ಶುದ್ಧವಾದ ಸಾಹಿತ್ಯ ಕೃತಿಯೆಂದು ಒಪ್ಪಿಕೊಳ್ಳಲು ಹಿಂಜರಿಯುತ್ತಾರೆ. ಈ ವಿಮರ್ಶಕರ ಅಭಿಪ್ರಾಯದಲ್ಲಿ ಸಡಿಲಾದ ಸಾಹಿತ್ಯ ಪ್ರಕಾರವಾದ ಕಾದಂಬರಿ ಒಬ್ಬ ಕೀಳು ದರ್ಜೆಯ ಲೇಖಕನ ಕೈಯ್ಯಲ್ಲಿ ಸಿಕ್ಕಿತೆಂದರೆ ಹದಗೆಟ್ಟು ಹೋಗುವ ಸಂಭವವುಂಟು. ಇತ್ತೀಚೆಗಿನ ಓದುಗರು **ಸರಸ್ವತಿಚಂದ್ರ** ಕಾದಂಬರಿಯ ಶಿಲ್ಪವನ್ನು ಮೆಚ್ಚಲಿಕ್ಕಿಲ್ಲ. ಆದರೆ ಪಂಡಿತ ಯುಗ ಮತ್ತು ಗಾಂಧಿ ಯುಗಗಳ ವಿಮರ್ಶಕರು ಈ ಕಾದಂಬರಿಯ ಮೇಲೆ ಸಾಕಷ್ಟು ಬರೆದಿದ್ದಾರೆ. ಉದಾಹರಣೆಗೆ ಆನಂದ ಶಂಕರ ಧೃವ ಅವರು ಅದನ್ನು ಒಂದು 'ಪುರಾಣ' ವೆಂದು ಕರೆಯುತ್ತಾರೆ. ವಿಶ್ವನಾಥ ಭಟ್ಟ ಅವರು ಅದನ್ನೊಂದು 'ಗದ್ಯ ಮಹಾಕಾವ್ಯ' ವೆಂದು ವರ್ಣಿಸುತ್ತಾರೆ. ದೊಲಾರ್‌ರಾಯ್ ಮಂಕಡ್ ಅವರು ಸಂಸ್ಕೃತ ವಿಮರ್ಶಕರ ರೀತಿಯಲ್ಲಿ ಅದನ್ನೊಂದು 'ಸಕಲ ಕಥೆ' ಯೆಂದು ಕರೆಯುತ್ತಾರೆ. **ಸರಸ್ವತಿಚಂದ್ರ** ಕಾದಂಬರಿಯ ವಸ್ತು ಮತ್ತು ರಚನೆಯನ್ನು ಕುರಿತು ಮಾತನಾಡುತ್ತ ರಾಮನಾರಾಯಣ–



Indian I... ...ce
117215

ಪಾಠಕ ಅವರು ಹೇಳುವುದೇನೆಂದರೆ ಕಾದಂಬರಿಯ ಶಿಲ್ಪದ ಶಿಥಿಲತೆ ಅದರ ಸಾಹಿತ್ಯಿಕ ಸೌಂದರ್ಯವನ್ನು ಕೆಡಿಸುವುದಿಲ್ಲವೆಂದು. ಅವರು ಅದರ ಆಕಾರವನ್ನು ಒಂದು ಮಹಾ ನದಿಯ ಆಕಾರಕ್ಕೆ ಹೋಲಿಸುತ್ತಾರೆ. ಸರಸ್ವತಿಚಂದ್ರನ ಕಥೆ ಮುಖ್ಯ ನದಿಯಿದ್ದಂತೆ, ಬುದ್ಧಿಧನ, ಗುಣಸುಂದರಿ, ರತ್ನನಗರಿ, ಸುಂದರಗಿರಿ, ಮತ್ತು ಡಕಾಯತರು—ಇವರೆಲ್ಲರ ಕಥೆಗಳು ಮುಖ್ಯನದಿಗೆ ಬಂದು ಸೇರುವ ವಾಹಿನಿಗಳಿದ್ದಂತೆ ಎಂದು ಹೇಳುತ್ತಾರೆ. ಬಲವಂತರಾಯ್ ಠಾಕೂರ ಅವರು ಅದನ್ನು ಅನೇಕ ಜಡಗಳನ್ನು ಹಾಕಿ ಅಲಂಕರಿಸಿದ ಉದ್ದಗೂದಲೆಂದು ಕರೆಯುತ್ತಾರೆ. ವಿಷ್ಣುಪ್ರಸಾದ ತ್ರಿವೇದಿಯವರಿಗೆ ಈ ಕಾದಂಬರಿಯ ರಚನೆ ಬೋರೊಬೂದುರ್ ಅನ್ನು ನೆನಪಿಗೆ ತರುತ್ತದೆಂತೆ. ವಿಜಯರಾಯ್ ವೈದ್ಯ ಅವರು ಅದನ್ನು ಸಂಸ್ಕೃತಿಯ ಕಥೆಯನ್ನಾವರಿಸಿದ ಪ್ರೇಮ ಕಥೆಯೆಂದು ಕರೆಯುತ್ತಾರೆ. ಉಮಾಶಂಕರ ಅವರಿಗೆ ಅದೊಂದು ಗದ್ಯರೂಪದ ಯುಗಕಾವ್ಯವಂತೆ.

ರಾಮನಾರಾಯಣ ಪಾಠಕ ಮತ್ತು ಆನಂದಶಂಕರ ಅವರು ಈ ಕಾದಂಬರಿಯಲ್ಲಿರುವ ಶಿಲ್ಪದ ಶಿಥಿಲತೆಯ ಕಾರಣದಿಂದಾಗಿ ಅದನ್ನು ತಿರಸ್ಕರಿಸುವುದು ಸರಿಯಲ್ಲವೆಂದು ಹೇಳುತ್ತಾರೆ. ಕಾದಂಬರಿಯು ಕಲಾತ್ಮಕವಾಗಿಲ್ಲವೆಂದು ಅದನ್ನು ತಿರಸ್ಕರಿಸಿದರೂ ಅದಕ್ಕೆ ಬೇರೆ ಮೌಲ್ಯಗಳಿರುವುದರಿಂದ ಜಗತ್ತಿನ ಸುಪ್ರಸಿದ್ಧ ಸಾಹಿತ್ಯಕೃತಿಗಳಂತೆ ಅದೂ ನಿಲ್ಲುತ್ತದೆ.

ಗೋವರ್ಧನರಾಮ ಅವರು ಗೋಯೆತ್‌ನ ವಿಲ್ಹೆಮ್ ಮಿಸ್ಟರ್ ಕೃತಿಯನ್ನು ಓದಿದಂತೆ ಕಾಣಿಸುತ್ತದೆ. ಆ ಕಾದಂಬರಿಗೆ ಮುನ್ನುಡಿ ಬರೆಯುತ್ತ ಕಾರ್ಲೈಲ್ ಅವನು ಸ್ಲೆಗೆಲ್‌ನ ಮಾತುಗಳನ್ನು ಉದ್ಧರಿಸುತ್ತಾನೆ: 'ಈ ಹೊಸ ಮತ್ತು ವಿಚಿತ್ರವಾದ ಕಾದಂಬರಿಯನ್ನು ಅದರಂತರಂಗದಿಂದ ಹೊರಬಂದ ಮಾನದಂಡಗಳಿಂದ ಅಳೆಯದೆ ಆಕಸ್ಮಿಕವಾಗಿಯೂ ಕೃತ್ರಿಮವಾಗಿಯೂ ಕಲೆಹಾಕಿದ ಕಲ್ಪನೆಯ ತುಣುಕುಗಳ ಮಾನದಂಡದಿಂದ ಈ ಕಾದಂಬರಿಯನ್ನು ವಿಮರ್ಶಿಸಿದರೆ ಮಗುವೊಂದು ಚಂದ್ರ ಮತ್ತು ತಾರೆಗಳನ್ನು ಹಿಡಿದು ತನ್ನ ಆಟಿಗೆಯಪೆಟ್ಟಿಗೆಯಲ್ಲಿ ಹಾಕಬೇಕೆಂದು ಹಟ ಮಾಡಿದಂತಾಗುತ್ತದೆ. ದುರದೃಷ್ಟವಶಾತ್ ನಮ್ಮಲ್ಲಿ ಅನೇಕರ ಹತ್ತಿರ ಪೆಟ್ಟಿಗೆಗಳಿದ್ದರೂ ಅವು ಬಹಳ ಚಿಕ್ಕವಾಗಿವೆ'.

ಒಟ್ಟಿನಲ್ಲಿ ಹೇಳುವುದಾದರೆ **ಸರಸ್ವತಿಚಂದ್ರ** ಕಾದಂಬರಿಯಲ್ಲಿ ಮಾರ್ಕ್ ಶ್ರೋರರ್‌ನ ಅರ್ಥದ 'ಕಥಾವಸ್ತು' ಮತ್ತು 'ಸಾಧಿಸಿದ ಕಥಾವಸ್ತು' ಗಳೆರಡೂ ಇರುತ್ತವೆ. ಅಲ್ಲದೆ ಇದರಲ್ಲಿ 'ಸಂಕಲ್ಪ' ಮತ್ತು 'ನಿರ್ವಹಣೆ' ಗಳ ನಡುವೆ ಗೊಂದಲವೇಳುವುದಿಲ್ಲ.

**ಸರಸ್ವತಿಚಂದ್ರ**ವು ಗದ್ಯಮಹಾ ಕಾವ್ಯವಾಗಿರುವುದರಿಂದ ಅದರಲ್ಲಿ ಅಸಂಖ್ಯ ಪಾತ್ರಗಳು ಮತ್ತು ಸನ್ನಿವೇಶಗಳು ಬರುತ್ತವೆ. ಅಲ್ಲದೆ ಅವೆಲ್ಲ ಸಮಕಾಲೀನ ಜೀವನದ ಸಂಗತಿಗಳನ್ನು ನಿರೂಪಿಸುತ್ತವೆ. ಗೋವರ್ಧನರಾಮ ಅವರು ತಮ್ಮ ಪಾತ್ರಗಳನ್ನು ನಿಜಜೀವನದಲ್ಲಿ ಕಂಡುಬರುವ ವ್ಯಕ್ತಿಗಳನ್ನಾಧರಿಸಿ ಬರೆದಿದ್ದಾರೆಂದು

ಕೆಲವರ ನಂಬಿಕೆ: ಬುದ್ಧಿಧನ (ಭಾವನಗರದ ದಿವಾನ ಶಾಮಲದಾಸ), ವಿಷ್ಣುದಾಸ (ನಂದಿಯಾಡದ ಶಾಂತಾರಾಮ ಮಹಾರಾಜ), ಗುಣಸುಂದರಿ (ಲೇಖಕರ ಪತ್ನಿಯಾದ ಲಲಿತಾಗೌರಿ) ಮತ್ತು ಅಲಕ್ಕಿಶೋರಿ (ಶಾಮಲದಾಸ ಅವರ ಮಗಳಾದ ಅನೂಪಕುನ್ವರ್ಬಾ). ಅದರಂತೆಯೆ ಕಥಾನಾಯಕನ ಚಿತ್ರವೂ ಸ್ವತಃ ಲೇಖಕರ ಜೀವನದ ಮೇಲೆಯೆ ಆಧರಿಸಿದೆಯೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಈ ವಿಷಯವಾಗಿ ೧೮೮೩ ರಲ್ಲಿ ತಮ್ಮ **ಖಾಸಗಿ ಪುಸ್ತಕ**ದಲ್ಲಿ ಗೋವರ್ಧನರಾಮ ಹೀಗೆ ಬರೆಯುತ್ತಾರೆ: 'ನನ್ನ **ಸರಸ್ವತಿಚಂದ್ರ** ಕಾದಂಬರಿಯಲ್ಲಿ ನನ್ನ ಜನರಿಗೆ ನನ್ನ ಭಾವನಾಮಯ ಕರ್ತವ್ಯಗಳನ್ನು ಮಾಡಿತೋರಿಸಿದ್ದೇನೆ. ವಿಷ್ಣುದಾಸನ ಪಾತ್ರದ ಮೂಲಕ ನಾನು 'ವೇದಾಂತ' ವನ್ನು ಒಂದು ಹೆಜ್ಜೆ ಮುಂದೆ ಒಯ್ದು ನನ್ನ ಚಿಕ್ಕಪ್ಪ ಮನಃಸುಖರಾಮನಿಗೆ ವೇದಾಂತದ ಬಗೆದಿದ್ದ ಗೌರವವನ್ನು ಅಭಿವ್ಯಕ್ತಿಸಿ ನನ್ನ ಕರ್ತವ್ಯವನ್ನು ಸಲ್ಲಿಸುತ್ತೇನೆ. ನನ್ನ ಚಿಕ್ಕಪ್ಪ ನನಗೆ ಹೇಳಿದ ಪಾಠಗಳು ನಿರರ್ಥಕವಾಗದಂತೆ ನೋಡಿಕೊಳ್ಳುತ್ತೇನೆ. ಅದರಂತೆಯೆ ನನ್ನವಲ್ಲದ ವಿಚಾರಗಳಿಗೆ ನಾನು ಬದ್ಧನಾಗದೆ ನನ್ನವೆ ಆದ ಸ್ವತಂತ್ರ ವಿಚಾರಗಳನ್ನು ನಿರೂಪಿಸಿ ಸಾಹಿತ್ಯಕ್ಕೆ ನನ್ನ ಕರ್ತವ್ಯವನ್ನು ಸಲ್ಲಿಸುತ್ತೇನೆ. ಅದರಂತೆಯೆ ವೈಷ್ಣವ ಮಾರ್ಗವನ್ನು ನಿರೂಪಿಸಿ ಮತ್ತು ವಿವರಿಸಿ ನನ್ನ ತಂದೆಯವರಿಗೆ ನನ್ನ ಕರ್ತವ್ಯವನ್ನು ಸಲ್ಲಿಸುತ್ತೇನೆ. ಗುಣಸುಂದರಿಯ ಪಾತ್ರವನ್ನು ಚಿತ್ರಿಸಿ ನನ್ನ ಮಡದಿಗೆ ನನ್ನ ಕರ್ತವ್ಯವನ್ನು ಸಲ್ಲಿಸುತ್ತೇನೆ. ಇದರರ್ಥ ನನ್ನ ಮಡದಿ ನನ್ನ ಕಥಾನಾಯಕಿಯ ಸಮಾನಳೆಂದಾಗಲಿ ಅಥವಾ ನನ್ನ ಕಥಾನಾಯಕಿ ನನ್ನ ಮಡದಿಯಷ್ಟು ಸಂಕುಚಿತದೃಷ್ಟಿಯನ್ನು ಹೊಂದಿದವಳೆಂದಾಗಲಿ ಅಲ್ಲ. ನನ್ನ ಮಡದಿ ನನ್ನ ಕಥಾನಾಯಕಿಯಾಗಲಾರದಷ್ಟು ಬಡವಳಾಗಿದ್ದಾಳೆ. ನನ್ನ ಕಥಾನಾಯಕಿಯ ಕೆಲವೊಂದು ಗುಣಗಳನ್ನು ನನ್ನ ತಾಯಿಯಿಂದಲೂ ನಾನು ಆರಿಸಿಕೊಂಡಿದ್ದೇನೆ. ಉಳಿದ ವಿಷಯದಲ್ಲಿಯೂ ನನ್ನ ಕಾದಂಬರಿ ಸ್ವತಂತ್ರ ರೀತಿಯದಾಗಿದೆ.'

ಬೇರೆಬೇರೆ ವ್ಯಕ್ತಿಗಳಿಂದ ಆರಿಸಿಕೊಂಡ ಗುಣಗಳ ಸಂಗ್ರಹವೆ ಒಂದು ಕಾದಂಬರಿಯಾಗಲಾರದು. ಲೇಖಕರ ಪ್ರತಿಭೆಯು ಬೇರೆಬೇರೆ ಗುಣಗಳನ್ನೆಲ್ಲ ಅರಗಿಸಿ, ಒಂದು ಹೊಸತೆರನಾದ ಸಾಮರಸ್ಯವನ್ನುಂಟುಮಾಡಿ ಪಾತ್ರಗಳನ್ನು ಸ್ವತಂತ್ರ ಮತ್ತು ಜೀವಂತ ವ್ಯಕ್ತಿಗಳನ್ನಾಗಿ ಮಾಡುತ್ತದೆ. ಇಂಥ ಪಾತ್ರಗಳಲ್ಲಿ ನಿಜಜೀವನದ ವ್ಯಕ್ತಿಗಳ ಕೆಲವು ಅಂಶಗಳು ಕಂಡುಬಂದರೂ, ಪಾತ್ರಗಳ ಐಕ್ಯತೆ ಮತ್ತು ವಯಕ್ತಿಕತೆಗೆ ಕುಂದುಬರುವುದಿಲ್ಲ.

**ಸರಸ್ವತಿಚಂದ್ರ** ಕಾದಂಬರಿಯ ಪಾತ್ರಗಳು ನಮೂನೆಗಳಾಗಿರದೆ ಸ್ವತಂತ್ರ ವ್ಯಕ್ತಿಗಳಾಗಿದ್ದಾರೆ. ಅವರ ಹೆಸರುಗಳು ಮಾತ್ರ ಸಾಂಪ್ರದಾಯಕವಾದವುಗಳಾಗಿವೆ. ದುಷ್ಟರಾಯ್, ಶಠರಾಯ್, ಬುದ್ಧಿಧನ ಮೊದಲಾದ ಹೆಸರುಗಳು ಸದ್ಗುಣ ಮತ್ತು ದುರ್ಗುಣಗಳನ್ನು ಸೂಚಿಸಿದರೂ ಬರಿ ಅವುಗಳ ಸುತ್ತ ಅವರು ಬೆಳೆಯುವುದಿಲ್ಲ.

**ಸರಸ್ವತಿಚಂದ್ರ** ಕಾದಂಬರಿಯಲ್ಲಿಯ ಪಾತ್ರಗಳಾದಂಥ ಸರಸ್ವತಿಚಂದ್ರ, ಕುಮುದ, ಕುಸುಮ, ಗುಣಸುಂದರಿ, ಚಂದ್ರಕಾಂತ, ತರಂಗಶಂಕರ ಮತ್ತು ಇತರರೆಲ್ಲ ಜೀವಂತರಾಗಿದ್ದಾರೆ. ಇದಕ್ಕೆ ಕಾರಣ ಪಾತ್ರನೈಜತೆಯೊಂದಿಗೆ ಭಾವನೆಗಳನ್ನು ಬೆಸೆಯುವ ಗೋವರ್ಧನರಾಮ ಅವರ ಸಾಮರ್ಥ್ಯ. **ರಾಮಾಯಣ** ಮತ್ತು **ಮಹಾಭಾರತ**ಗಳಂತಹ ಮಹಾಕಾವ್ಯಗಳ ರೀತಿಯಲ್ಲಿಯೆ ಈ ವಿಶ್ವವೆಲ್ಲ ಆ ಜಗದೀಶ್ವರನ ಲೀಲೆಯೆಂಬ ಸತ್ಯವನ್ನು ತೋರಿಸಬೇಕೆಂಬ ಮಹತ್ವಾಕಾಂಕ್ಷೆ ಅವರಿಗಿತ್ತು. ಆದುದರಿಂದಲೆ ಅವರು ಜೀವನದ ಅತಿ ಎತ್ತರದ ಮಟ್ಟದಿಂದ ಹಿಡಿದು ಅತಿ ಕೆಳಗಿನ ಮಟ್ಟದ ವರೆಗಿನ ಎಲ್ಲ ತರಹದ ವ್ಯಕ್ತಿಗಳನ್ನು ಮತ್ತು ಸಂದೇಶಗಳನ್ನು ಆರಿಸಿಕೊಂಡಿದ್ದರು. **ಸರಸ್ವತಿಚಂದ್ರ**ದ ಜಗತ್ತಿನಲ್ಲಿ ಮಹಾರಾಜರು, ಮಂತ್ರಿಗಳು, ಬ್ರಿಟಿಶ್ ಅಧಿಕಾರಿಗಳು, ಭಾರತೀಯ ಅಧಿಕಾರಿಗಳು, ಸಾಧುಗಳು, ಮಧ್ಯಮ ವರ್ಗ ಮತ್ತು ಕೆಳವರ್ಗದ ಜನ, ಪತ್ರಿಕಾಕಾರರು, ಕಾರಕೂನರು, ವ್ಯಾಪಾರಿಗಳು, ಡಕಾಯಿತರು, ದೇಶಾಭಿಮಾನಿಗಳು, ಮತ್ತು ಆಂಗ್ಲಪ್ರೇಮಿಗಳು—ಈ ಎಲ್ಲ ತರಹದ ವ್ಯಕ್ತಿಗಳಿಗೆ ಸ್ಥಾನವಿದೆ. ಗೋವರ್ಧನರಾಮ ಅವರು ಅಂದಿನ ಸಮಾಜ ನಿಜವಾಗಿ ಹೇಗಿತ್ತು ಎಂಬುದನ್ನು ತೋರಿಸುವುದರ ಜೊತೆಗೆ ಆ ಸಮಾಜಕ್ಕೆ ಅವಶ್ಯವಿದ್ದ ಆದರ್ಶಗಳನ್ನೂ ಸೂಚಿಸುತ್ತಾರೆ. ಅವರು ಪಾತ್ರಗಳ ಮಾನಸಿಕ ದ್ವಂದ್ವಗಳ ಮೂಲಕ, ತುಮುಲಗಳ ಮೂಲಕ, ಹೊಯ್ದಾಟಗಳ ಮೂಲಕ ಹಾಗೂ ತೊಳಲಾಟಗಳ ಮೂಲಕ ತಮ್ಮ ಆದರ್ಶಗಳನ್ನು ಸೂಚಿಸುತ್ತಾರೆ. ಇದಲ್ಲದೆ ಗೋವರ್ಧನರಾಮ ಅವರು ತಮ್ಮ ಕಾದಂಬರಿಗೆ ಇನ್ನೊಂದು ಹೆಚ್ಚಿನ ಆಯಾಮವನ್ನು ಕೊಟ್ಟಿರುವುದರಿಂದ ಅವರೊಬ್ಬ ಮಹಾಸಾಹಿತಿಗಳೆಂಬುದು ಸಿದ್ಧವಾಗುತ್ತದೆ. ಇದನ್ನವರು ಇಪ್ಪತ್ತನೆಯ ಶತಮಾನದ ಪ್ರಾರಂಭದಲ್ಲಿ ಮಾಡದಿದ್ದುದರಿಂದ ಅವರೊಬ್ಬ ಪ್ರತಿಭಾಶಾಲಿಗಳೆಂಬುದು ವಿದಿತವಾಗುತ್ತದೆ.

**ಸರಸ್ವತಿಚಂದ್ರ** ಕಾದಂಬರಿ ಹೇಗೆ ಮುಕ್ತಾಯಗೊಳ್ಳುತ್ತದೆ ಎಂಬ ವಿಷಯವಾಗಿ ಗುಜರಾಥಿ ವಿಮರ್ಶಕರು ದಣಿವಿಲ್ಲದೆ ಚರ್ಚಿಸುತ್ತಾರೆ. ಅದರಲ್ಲಿ ಈ ಕೆಳಗಿನ ಮೂರು ಪ್ರಶ್ನೆಗಳು ಅವರನ್ನು ಕಾಡಿಸುತ್ತವೆ: (೧) ಕುಮುದಳ ಮದುವೆ ಸರಸ್ವತಿಚಂದ್ರನೊಂದಿಗೆ ಏಕಾಗಲಿಲ್ಲ? (೨) ಕುಸುಮಳು ಸರಸ್ವತಿಚಂದ್ರನನ್ನು ಮದುವೆ ಮಾಡಿಕೊಳ್ಳಲಿಕ್ಕೆ ಏಕೆ ಮುಂದೆ ಬರುತ್ತಾಳೆ? (೩) ಕುಸುಮಳು ಸರಸ್ವತಿಚಂದ್ರನನ್ನು ಲಗ್ನಮಾಡಿಕೊಳ್ಳಲು ಸಿದ್ಧಳಿದ್ದರೂ ಆತನೇಕೆ ಕುಮುದಳ ಪ್ರೇಮದಲ್ಲಿ ಸಿಲುಕಿಕೊಳ್ಳುತ್ತಾನೆ? ಇವು ಮೂರು ಪ್ರಮುಖವಾದ ಪ್ರಶ್ನೆಗಳು. ಕುಮುದಳ ವಿಷಯವಾಗಿ ಹೇಳುವುದಾದರೆ ಅವಳ ಅಂತರಂಗ ವಿಕಾಸ ಅವಳನ್ನು ಪುನರ್ವಿವಾಹಕ್ಕೆಳೆಯುವುದಿಲ್ಲ. ಅವಳ ಕೈಯಲ್ಲಿರುವ ದಿವಂಗತ ಸೌಭಾಗ್ಯದೇವಿಯ ಕೂಸಾದ ಅಲಕ್‌ಳನ್ನು ಚೆನ್ನಾಗಿ ಜೋಪಾನ ಮಾಡುವುದೆ ಹೆಚ್ಚು ಸ್ವಾಭಾವಿಕವಾಗುತ್ತದೆ. ಆದುದರಿಂದ ಅವಳು ಪುನರ್ವಿವಾಹದ ಆಶೆಯನ್ನು ಮೀರಿನಿಂತಿದ್ದಾಳೆ. ಕೆಲವು ಸಲ ಅವಳು ಚಂದ್ರಾವಲಿಯನ್ನು ಭೇಟಿಯಾಗುವುದರ ಸಲುವಾಗಿ ಸುಂದರಗಿರಿಗೆ ಬರುತ್ತಾಳೆ. ಇಲ್ಲವೆ ತನ್ನ ಸಹೋದರಿಯನ್ನು ನೋಡುವುದಕ್ಕಾಗಿ ಮುಂಬಯಿಗೆ ಹೋಗುತಾ '

ಅವಳ ಭವಿಷ್ಯವೂ ಹೀಗೆಯೆ ಇರುವುದು. ಅವಳ ಪಾತ್ರಚಿತ್ರಣಕ್ಕೆ ಇದರಿಂದ ಮೆರುಗು ಬರುತ್ತದೆ. ಅವಳು ಒಂದು ತರಹದ 'ಕಣ್ಣೀರಿನ ದೇವತ್ವ'ವನ್ನು ಸಾಧಿಸಿದ್ದಾಳೆ. ಹೀಗಿದ್ದುದರಿಂದ ಪುನರ್ವಿವಾಹ ಅವಳಿಗೆ ಅಷ್ಟೊಂದು ಉಚಿತವಾಗುವುದಿಲ್ಲ.

ವಿಮರ್ಶಕರೆಲ್ಲರೂ **ಸರಸ್ವತಿಚಂದ್ರ** ಕಾದಂಬರಿಯನ್ನು ಒಂದು ಕಲಾಕೃತಿ ಯೆಂದು ಒಪ್ಪಿಕೊಂಡಿದ್ದಾರೆ. ಆದುದರಿಂದ ಈ ಕಾದಂಬರಿಯ ಮುಕ್ತಾಯದ ಬಗೆ ಗಿದ್ದ ಅವರ ವಾದಗಳೇನು ಅಷ್ಟೊಂದು ವಿವೇಕಪೂರ್ಣವೆನಿಸುವುದಿಲ್ಲ. ಯಾವುದೆ ಒಂದು ಮಹಾಕಲಾಕೃತಿಯ ಮುಕ್ತಾಯ ಅದರ ಪಾತ್ರಚಿತ್ರಣ, ಸನ್ನಿವೇಶನಿರೂಪಣೆ ಹಾಗೂ ಇವೆರಡನ್ನೂ ಸಾಧಿಸಲು ಲೇಖಕರು ಉಪಯೋಗಿಸುವ ಘಾಟಿ ಇವೆಲ್ಲವುಗಳ ಸ್ವಾಭಾವಿಕ ಪರಿಣಾಮವಾಗಿಯೆ ಉಂಟಾಗುತ್ತದೆ. ಕಾದಂಬರಿಯಲ್ಲಿ, ಅದರಲ್ಲಿಯೂ ಅದರ ಕೊನೆಯ ಭಾಗದಲ್ಲಿ ಕುಮುದಳ ಪುನರ್ವಿವಾಹದ ಸಮಸ್ಯೆಯನ್ನೆ ರದ್ದು ಗೊಳಿಸುವಂಥ ಆಂತರಿಕ ಆಧಾರ ಬೇಕಾದಷ್ಟಿದೆ. ಈ ವಿಷಯದಲ್ಲಿ ಗೋವರ್ಧನ ರಾಮ ಅವರು ಸಾರ್ವಜನಿಕ ಅಭಿಪ್ರಾಯಕ್ಕಾಗಲಿ, ಸಂಪ್ರದಾಯಕ್ಕಾಗಲಿ ಶರಣು ಹೋದರೆಂದು ಹೇಳುವುದು ಅಷ್ಟೊಂದು ಸರಿಯೆನಿಸುವುದಿಲ್ಲ. ಕಾದಂಬರಿಯಲ್ಲಿಯ ಸನ್ನಿವೇಶ ತಂದೆತಾಯಿಗಳಾದ ವಿದ್ಯಾಚತುರ ಮತ್ತು ಗುಣಸುಂದರಿಯರ ಅಸಮ್ಮತಿ ಯನ್ನು ಎತ್ತಿಹಿಡಿಯುವುದರ ಬದಲು ಸ್ವತಃ ಕುಮುದಳ ಅಸಮ್ಮತಿಯನ್ನೆ ಎತ್ತಿ ತೋರಿಸುತ್ತದೆ. ಜೀವನತೃಪ್ತಿಗಾಗಲಿ ಅಥವಾ ಜೀವನದ ಸುಪ್ತಶಕ್ತಿಯನ್ನು ಸಾಕ್ಷಾತ್ಕರಿಸುವುದಕ್ಕಾಗಲಿ ಮದುವೆ ಅವಶ್ಯವೆಂದು ಗೋವರ್ಧನರಾಮ ಅವರು ನಂಬಿರಲಿಲ್ಲ. ಜೀವನದಲ್ಲಿ ತೃಪ್ತಿಯನ್ನು ಹೊಂದುವುದರಲ್ಲಿ ಪ್ರೀತಿ ಅತ್ಯಂತ ಪ್ರಮುಖ ವಾದ ಪಾತ್ರ ವಹಿಸುತ್ತದೆ. ಆಶೆಯ ಕಸವನ್ನು ತೆಗೆದು ಪ್ರೀತಿಯನ್ನು ಪರಿಶುದ್ಧೀಕರಿಸಿ ಅದನ್ನು ಭಾರತೀಯ ಸಂಸ್ಕೃತಿಯ ಅತ್ಯುತ್ತಮ ಅಂಶಗಳೊಂದಿಗೆ ಬೆರೆಸಬೇಕೆಂಬುದೆ ಅವರ ಇಚ್ಛೆಯಾಗಿತ್ತು. ಆದುದರಿಂದ **ಸರಸ್ವತಿಚಂದ್ರ** ಕಾದಂಬರಿಯ ಮುಕ್ತಾಯ ಪಾಶ್ಚಾತ್ಯ 'ದುರಂತ' ದರ್ಶನವನ್ನು ಪ್ರತಿಬಿಂಬಿಸದೆ ಕರ್ತವ್ಯದ ಆದರ್ಶದ ಸುತ್ತು ಬಳಸಿದ ಪ್ರಗತಿಪರ ವೈರಾಗ್ಯ ಮತ್ತು ಪ್ರೇಮದ ನಿರಂತರ ನಿರ್ಮಲೀಕರಣಗಳ ಚಿತ್ರ ವನ್ನು ನಿರೂಪಿಸುತ್ತದೆ. ಆದುದರಿಂದಲೆ 'ಕಲ್ಯಾಣಗ್ರಾಮ' ವೆಂಬ ಕಲ್ಯಾಣ ಯೋಜನೆ ಕಾದಂಬರಿಯಲ್ಲಿ ಅತ್ಯಂತ ಮಹತ್ವದ ಭಾಗವಾಗುತ್ತದೆ. ಇಲ್ಲಿ ಕಲ್ಯಾಣ ವೆಂದರೆ ಕೇವಲ ಆರ್ಥಿಕ ಕಲ್ಯಾಣವಲ್ಲ. ಅದು ಆಧ್ಯಾತ್ಮಿಕ ಕಲ್ಯಾಣವೂ ಆಗಿದ್ದು ಖಾಸಗಿ ಜೀವನದಲ್ಲಿಯೂ ವೈರಾಗ್ಯ ಮತ್ತು ನಿರ್ಮಲೀಕರಣಗಳ ಮಹತ್ವವನ್ನು ಒತ್ತಿಹೇಳುತ್ತದೆ. ಆದುದರಿಂದ ಕಾದಂಬರಿಯ ಮುಕ್ತಾಯ ಲೇಖಕರ ಜೀವನ ದರ್ಶನದ ಪರಿಪೂರ್ಣವಾದ ಮೂರ್ತರೂಪವೆಂದು ಹೇಳಬಹುದು.

ಈ ಕಾದಂಬರಿಯಲ್ಲಿ ಪಾತ್ರಗಳು ಅನುಭವಿಸುವ ತುಮುಲ ಅಂತರಂಗ ವಾಗಿಯೂ ಬಹಿರಂಗವಾಗಿಯೂ ಇರುತ್ತದೆ. ಇದಲ್ಲದೆ ಸಮಕಾಲೀನ ಹಿಂದೂ ಸಮಾಜದ ರೂಢಿ ಸಂಪ್ರದಾಯಗಳೊಂದಿಗೆ ನಡೆಯುವ ತುಮುಲ ಒಂದು ಹೆಚ್ಚಿನ ಆಯಾಮವನ್ನುಂಟುಮಾಡುತ್ತದೆ. ಆದುದರಿಂದ ಪಾತ್ರಗಳು ಸಾಂಪ್ರದಾಯಿಕ

ಹಿಂದೂ ಪದ್ಧತಿಯಲ್ಲಿ ಪ್ರತಿಸ್ಪಂದಿಸುವುದರಿಂದ ನಿಷೇಧಿಸಲ್ಪಟ್ಟಿವೆ. ಬುದ್ಧಿಧನ ಮತ್ತು ವಿದ್ಯಾಚತುರ ಅವರ ಪಾತ್ರಗಳು ಸಂಕುಚಿತ ಹಿಂದೂ ಧರ್ಮದ ಮಿತಿಯನ್ನು ಮೀರಿಹೋಗುತ್ತವೆ. ಸರಸ್ವತಿಚಂದ್ರನಾದರೊ ನಮಗೆ ಹ್ಯಾಮ್ಲೆಟ್‌ನ ಪಾತ್ರವನ್ನು ನೆನಪಿಗೆ ತರುತ್ತಾನೆ.

ಆನಂದಶಂಕರ ಅವರು ಹೇಳುವಂತೆ ಸರಸ್ವತಿಚಂದ್ರನ ಪಾತ್ರಚಿತ್ರಣ ಶ್ರೇಷ್ಠವಾದುದು. ಅಲ್ಲದೆ ಗೋವರ್ಧನರಾಮ ಅವರ ಸ್ತ್ರೀಪಾತ್ರಗಳು—ಅದರಲ್ಲಿಯೂ ಕುಮುದಳ ಪಾತ್ರ—ಶೇಕ್ಸಪಿಯರ್ ಮತ್ತು ಡಾಂಟೆನ ಸ್ತ್ರೀಪಾತ್ರಗಳನ್ನು ಹೋಲುತ್ತವೆ. ಬಲವಂತರಾಯ್ ಅವರು **ಸರಸ್ವತಿಚಂದ್ರ** ಕಾದಂಬರಿಯ ಸ್ತ್ರೀಪಾತ್ರಗಳ ಅಧ್ಯಯನ ಮಾಡಿದ್ದಾರೆ. ಗೋವರ್ಧನರಾಮ ಅವರು ತಮ್ಮ ಕಿರಿಯ ಪಾತ್ರಗಳಿಗೂ ಜೀವಂತಿಕೆ ಮತ್ತು ವ್ಯಕ್ತಿತ್ವವನ್ನು ಕೊಟ್ಟಿದ್ದಾರೆ.

ಈ ಕಾದಂಬರಿಯಲ್ಲಿಯ ಚಿಂತನಪರ ಭಾಗಗಳು ಅದರ ನಿರೂಪಣೆಯ ನಿರಾಯಾಸವಾದ ಗತಿಗೆ ಅಡ್ಡಬರುತ್ತವೆಂಬುದು ಅತ್ಯಂತ ವಿಸ್ತಾರವಾದ ಸಾಮಾನ್ಯೀಕರಣವಾಗುತ್ತದೆ. ಗೋವರ್ಧನರಾಮ ಅವರೊಬ್ಬ ಪ್ರಜ್ಞಾವಂತ ಕಲಾಕಾರರಾಗಿರುವುದರಿಂದ ತಮ್ಮ ಕಾದಂಬರಿಯಲ್ಲಿಯ ಚಿಂತನವನ್ನು ಅವರ ಮುಖ್ಯವಾದ ಕಾಳಜಿಗಳಲ್ಲಿ ಒಂದನ್ನಾಗಿ ಮಾಡಿಕೊಂಡಿದ್ದಾರೆ. ಅದರಲ್ಲಿ ಚಿಂತನಪರ ಭಾಗಗಳು ಕಥಾವಸ್ತುವಿನೊಂದಿಗೆ ಬೆರೆಯದ ಗಟ್ಟಿಗಳಂತೆ ಎಂದೂ ಕಾಣುವುದಿಲ್ಲ. ಅಲ್ಲಿ ಚರ್ಚೆಯಾಗಲಿ, ಉಪದೇಶವಾಗಲಿ ಇಲ್ಲವೆ ಚಿಂತನವಾಗಲಿ ಯಾವುದಾದರೊಂದು ಸನ್ನಿವೇಶದ ಸ್ವಾಭಾವಿಕವಾದ ಪರಿಣಾಮವಾಗಿಯೆ ಬರುತ್ತದೆ. ಈ ಚಿಂತನಪರ ಭಾಗಗಳು ಹೆಚ್ಚಾಗಿ ರಾಜ್ಯಗಳು, ಕಾಮ ಮತ್ತು ಪ್ರೇಮ, ಯಜ್ಞ, ಕರ್ತವ್ಯ, ಶಿಕ್ಷಣ ಮತ್ತು ಆತ್ಮಸಾಕ್ಷಾತ್ಕಾರ ಮೊದಲಾದ ವಿಷಯಗಳನ್ನೆ ಕುರಿತವುಗಳಾಗಿವೆ. ಗೋವರ್ಧನರಾಮ ಅವರು ಸಾಂಪ್ರದಾಯಕ ಮತ್ತು ಪ್ರಗತಿಪರ ವಿಚಾರಧಾರೆಗಳ ಅಡ್ಡರಸ್ತೆಯಲ್ಲಿ ನಿಂತಿದ್ದು ಪೌರ್ವಾತ್ಯ ಮತ್ತು ಪಾಶ್ಚಿಮಾತ್ಯ ಸಂಸ್ಕೃತಿಗಳಲ್ಲಿಯ ಅತ್ಯುತ್ತಮ ಅಂಶಗಳನ್ನು ಸಮರಸಗೊಳಿಸಬೇಕೆಂದು ಹೆಣಗಿದರು.

ಗೋವರ್ಧನರಾಮ ಅವರು ಭಾರತೀಯ ಕುಟುಂಬದ ಸಮಸ್ಯೆಗಳನ್ನು ಚಿತ್ರಿಸಿದುದು ಗಮನಾರ್ಹವಾಗಿದೆ. ಇದೇ **ಸರಸ್ವತಿಚಂದ್ರ** ಕಾದಂಬರಿಯ ಎರಡನೆಯ ಭಾಗದ ವಿಷಯವಾಗಿದೆ. ಈ ಕಾದಂಬರಿಯ ಪಾತ್ರಗಳು ಮಾದರಿಗಳಾಗಿರದಿದ್ದರೂ ಇಲ್ಲಿಯ ಕುಟುಂಬಗಳು ಮಾದರಿಯವಾಗಿದ್ದು ನೈಜವಾದ ರೀತಿಯಲ್ಲಿ ಚಿತ್ರಿಸಲ್ಪಟ್ಟಿವೆ. ಲಕ್ಷ್ಮಿನಂದನ, ಬುದ್ಧಿಧನ ಮತ್ತು ವಿದ್ಯಾಚತುರ ಇವರ ಕುಟುಂಬ ಜೀವನದ ಚಿತ್ರಣಕ್ಕೆ ಸಾಕಷ್ಟು ಸಮಾಜ ವೈಜ್ಞಾನಿಕ ಮಹತ್ವವಿದೆ. ಇಲ್ಲಿ ಭಾರತೀಯ ಕುಟುಂಬದಲ್ಲಿ ಸಾಮರಸ್ಯವನ್ನು ಹೇಗೆ ಸಾಧಿಸಬೇಕೆಂಬ ಸಮಸ್ಯೆಯ ಕಡೆಗೆ ನಮ್ಮ ಗಮನವನ್ನು ಸೆಳೆಯುತ್ತಾರೆ ಗೋವರ್ಧನರಾಮ. ಗೋವರ್ಧನರಾಮ ಅವರ ವಿಮರ್ಶಕರ ಪೈಕಿ ಉತ್ತಮಲಾಲ ತ್ರಿವೇದಿ ಎಂಬ ವಿಮರ್ಶಕರು ಕಾದಂಬರಿಯ ಈ ಅಂಶವನ್ನು ಸುದೀರ್ಘವಾಗಿ ಚರ್ಚಿಸಿದ್ದಾರೆ.

ಗೋವರ್ಧನರಾಮ ಅವರು ಮನೆ, ಕುಟುಂಬ, ದೇಶ ಮತ್ತು ಧರ್ಮಗಳನ್ನು ಅವುಗಳ ವಿಕಾಸದ ಗತಿಯಲ್ಲಿಯೆ ಚಿತ್ರಿಸುತ್ತಾರೆ. ಇಲ್ಲಿ ಗೋವರ್ಧನರಾಮ ಅವರು ಆತ್ಮ ಸಾಕ್ಷಾತ್ಕಾರದ ಮೂರು ವಿಧಗಳನ್ನು ಮುಪ್ಪುರಿಗೊಳಿಸಿದ್ದಾರೆ. ಜ್ಞಾನ, ಕರ್ತವ್ಯ ಮತ್ತು ಭಕ್ತಿಗಳೆಲ್ಲ ಬೆರೆತುಕೊಂಡಾಗ ಮಾತ್ರ ಮಾನವ ಕಲ್ಯಾಣ ಸಾಧ್ಯ. ವೇದಾಂತದ ಭಾಷೆಯ ಜೀವ, ಈಶ್ವರ ಮತ್ತು ಬ್ರಹ್ಮದ ಕಲ್ಪನೆಗಳ ಬದಲಾಗಿ ಗೋವರ್ಧನರಾಮ ಅವರು ತಮ್ಮವೆ ಆದ 'ಲಕ್ಷ್ಯ' ಮತ್ತು 'ಅಲಕ್ಷ್ಯ' ವೆಂಬ ಕಲ್ಪನೆಗಳನ್ನು ಸಾದರಪಡಿಸುತ್ತಾರೆ. ಇವೆರಡರ ಮಿಲನದ ಸಹಾಯದಿಂದಲೆ ಅವರು ಸಾಮಾಜಿಕ ಮತ್ತು ರಾಜಕೀಯ ಸಮಸ್ಯೆಗಳನ್ನು ನಿರ್ಣಯಿಸುತ್ತಾರೆ. ಈ ಮಿಲನದ ಗುರಿ ಕರ್ತವ್ಯ ಮತ್ತು ಪ್ರಾಯೋಗಿಕ ವೈರಾಗ್ಯಗಳನ್ನು ಸಮರಸಗೊಳಿಸುವುದೆ ಆಗಿತ್ತು.

ಪ್ರೀತಿಯಲ್ಲಿರುವ ಕಾಮವನ್ನು ತೆಗಳುವುದಾಗಲಿ ಅಥವಾ ಹೊಗಳುವುದಾಗಲಿ ಗೋವರ್ಧನರಾಮ ಅವರು ಮಾಡುವುದಿಲ್ಲ. ಕಾಮವೆಂಬುದು ದೈಹಿಕ ಅವಶ್ಯಕತೆ ಯಾಗಿದೆ ಎಂಬುದನ್ನು ಅವರು ಒಪ್ಪಿಕೊಳ್ಳುತ್ತಾರೆ. ಕಾಮವನ್ನು ತ್ಯಜಿಸುವು ದಕ್ಕಿಂತ ಕಾಮವನ್ನು ಪರಿಶುದ್ಧಗೊಳಿಸುವುದು ಮತ್ತು ಉದಾತ್ತೀಕರಿಸುವುದು ಅವರ ಅತೀಂದ್ರಿಯ ತತ್ವದ ಮೂಲಗುರಿ. ಅವರ ಪ್ರಕಾರ ಪ್ರೇಮವೆನ್ನುವುದು ನಿಜವಾದ ತಿಳುವಳಿಕೆಯಿಲ್ಲದೆ ಸಾಧ್ಯವಾಗಲಾರದು. ಅವರ ಅಭಿಪ್ರಾಯದಲ್ಲಿ ಪ್ರೇಮಿಗಳು ಮದುವೆಯ ಬಂಧನಕ್ಕೊಳಗಾಗುವ ಮೊದಲು ಸಾಕಷ್ಟು ಕಾಲ ಒಬ್ಬರನ್ನೊಬ್ಬರು ಭೇಟಿಯಾಗುತ್ತಿರಬೇಕು. ಏಕೆಂದರೆ ಅವರ ಪ್ರಕಾರ, ಮದುವೆಯೆಂದರೆ ಕೇವಲ ಎರದು ದೇಹಗಳ ಕೂಟವಾಗಿರದೆ ಎರಡು ಪ್ರಜ್ಞೆಗಳ ಮಿಲನವಾಗಿದೆ.

ಈ ಮೊದಲು ಭಾರತದಲ್ಲಿದ್ದ ನೂರಾರು ರಾಜ್ಯಗಳೆಲ್ಲ ಒಂದಾನೊಂದು ದಿನ ಒಂದುಗೂಡುವವೆಂದು ಅವರು ಹೇಳಿದ ಭವಿಷ್ಯ ಇಂದು ನಿಜವಾದ ಐತಿಹಾಸಿಕ ಸಂಗತಿ ಯಾಗಿದೆ. ಬ್ರಿಟಿಶ್ ಜನರೆಂದರೆ ದೇವರಿಚ್ಛೆಯಂತೆ ಬಂದ ಸಾಮ್ರಾಜ್ಯಶಾಹಿಗಳೆಂದು ಗೋವರ್ಧನರಾಮ ಅವರು ನಂಬಿದ್ದರು. ಭಾರತದಲ್ಲಿ ಬ್ರಿಟಿಶ್ ಆಳಿಕೆ ಇದ್ದುದರಿಂದ ನಮಗಾದಂತೆ ಅವರಿಗೆಷ್ಟೂ ಕಸಿವಿಸಿಯಾಗಿರಲಿಲ್ಲ. ಅನೇಕ ಸಮಕಾಲೀನ ವಿಚಾರ ವಾದಿಗಳಂತೆ ಅವರೂ ಬ್ರಿಟಿಶ್‌ರು ದೇವರಿಚ್ಛೆಯ ಮೇರೆಗೆ ಭಾರತಕ್ಕೆ ಬಂದು ನಮ್ಮನ್ನಾಳುತ್ತಿದ್ದರು ಮತ್ತು ಅದರಿಂದ ಭಾರತೀಯರಿಗೆಲ್ಲ ಸಾಕಷ್ಟು ಕಲ್ಯಾಣ ವಾಗಿತ್ತೆಂದು ತಿಳಿದಿದ್ದರು. ಈ ತರಹದ ವಿಚಾರಧಾರೆ **ಸರಸ್ವತಿಚಂದ್ರ** ಕಾದಂಬರಿ ಯಲ್ಲಿಯೂ ಮತ್ತು ಅವರ ಇತರ ಲೇಖನಗಳಲ್ಲಿಯೂ ಕಂಡುಬರುತ್ತದೆ.

ಗೋವರ್ಧನರಾಮ ಅವರ ಗದ್ಯಶೈಲಿಯನ್ನು ಅಭ್ಯಸಿಸುವುದು ಬಹಳ ಲಾಭ ದಾಯಕವಾದುದು. ಅವರ ನಿರೂಪಣಾಶಕ್ತಿ ನಿಸ್ಸಂಶಯವಾದುದು. **ಸರಸ್ವತಿ ಚಂದ್ರ**ದ ಮೊದಲನೆಯ ಅಧ್ಯಾಯವೇ ಇದಕ್ಕೆ ಸಾಕ್ಷಿ. ಅವರು ಅಲಂಕಾರಿಕ ಶೈಲಿಯೊಡನೆ ಸರಳ ನಿರೂಪಣೆಯನ್ನು ಬೆರೆಸಿ ಉದ್ದುದ್ದವಾದ ವಾಕ್ಯಗಳನ್ನು ಮತ್ತು ಚಿಕ್ಕ ಚಿಕ್ಕ ವಾಕ್ಯಗಳನ್ನು ಅನುಕ್ರಮವಾಗಿ ಬಳಸಿ ಕಥೆಯನ್ನು ಹೇಳುತ್ತಾರೆ.

ಇವರ ಗದ್ಯಶೈಲಿಯಮೇಲೆ ಬಾಣಕವಿಯ ಮತ್ತು ಎಡ್ಮಂಡ್ ಬರ್ಕ್‌ನ ಪ್ರಭಾವವಾಗಿರಬೇಕೆಂದು ನಮಗನಿಸದಿರದು. ಗೋವರ್ಧನರಾಮ ಅವರಿಗೆ ಗದ್ಯಲಯದ ಸೂಕ್ಷ್ಮ ಪ್ರಜ್ಞೆಯಿದೆ. ಅಲ್ಲದೆ ಅವರು ನಾನಾ ವಿಧವಾದ ಗದ್ಯಮಾಧುರ್ಯಗಳನ್ನು ಸೃಜಿಸಬಲ್ಲವರಾಗಿದ್ದರು. **ಸರಸ್ವತಿಚಂದ್ರ** ಕಾದಂಬರಿ ಗುಜರಾಥಿ ಭಾಷೆಯಲ್ಲಿಯೆ ಅತ್ಯಂತ ಪರಿಪಕ್ವವಾದ ಗದ್ಯಶೈಲಿಯ ಮಾದರಿಯಾಗಿದೆ. ಗುಜರಾಥಿ ಭಾಷೆಗೆ ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಯ ಶಬ್ದಗಳನ್ನುಪಯೋಗಿಸಿರುವುದರಿಂದ ಅವರ ಗದ್ಯಕ್ಕೆ ಒಂದು ವಿಚಿತ್ರವಾದ ಮತ್ತು ಮನೋರಂಜಕವಾದ ಮೆರುಗು ಬಂದಿದೆ.

ಅದಲ್ಲದೆ ಕಾದಂಬರಿಯಲ್ಲಿ ಸ್ವತಂತ್ರ ಮತ್ತು ಅನುವಾದಿತ ಕವಿತೆಗಳೂ ಇರುವುದರಿಂದ ಅದು ಅತ್ಯಂತ ಜನಪ್ರಿಯವಾಗಿದೆ.

**ಸರಸ್ವತಿಚಂದ್ರ** ಕಾದಂಬರಿಯಲ್ಲಿ ಸಮಕಾಲೀನ ಸಮಸ್ಯೆಗಳಾದಂಥ ರಾಜ್ಯಗಳು, ಬ್ರಿಟಿಶ್ ಆಡಳಿತ, ಪಾಶ್ಚಾತ್ಯ ಸಂಸ್ಕೃತಿಯ ಸಂಬಂಧದಿಂದುಂಟಾದ ಸಾಮಾಜಿಕ ಹಾಗೂ ರಾಜಕೀಯ ಸ್ಥಿತ್ಯಂತರಗಳು, ಭಾರತೀಯ ಅವಿಭಕ್ತ ಕುಟುಂಬದಲ್ಲುಂಟಾದ ಬದಲಾವಣೆಗಳು ನಿರೂಪಿಸಲ್ಪಟ್ಟಿದ್ದರೂ ಇದನ್ನು ಕೇವಲ ಒಂದು ಕಾಲದ ಕಾದಂಬರಿಯೆಂದು ಕರೆಯುವುದು ತಪ್ಪಾಗುತ್ತದೆ. ಏಕೆಂದರೆ ಗೋವರ್ಧನರಾಮ ಅವರು ಈ ಸಮಕಾಲೀನ ಸಮಸ್ಯೆಗಳನ್ನು ಕೆಲವು ತಾತ್ವಿಕ, ಮಾನವೀಯ, ಹಾಗೂ ಧಾರ್ಮಿಕ ಕಾಲಾತೀತ ಸಿದ್ಧಾಂತಗಳ ಹಿನ್ನೆಲೆಯಲ್ಲಿ ಚಿತ್ರಿಸಿದ್ದಾರೆ. ಪ್ರೀತಿಯೆಂಬುದು ಕೊನೆಯಲ್ಲಿ ನಿರಾಶೆಯನ್ನು ಅಲ್ಲದೆ ದುರಂತ ಪ್ರಜ್ಞೆಯನ್ನು ಸಹಿತ ಮೀರಿ ಆನಂದದಲ್ಲಿ ಪರ್ಯವಸಾನಗೊಳ್ಳುವ ಚಿತ್ರ ಕಾದಂಬರಿಯಲ್ಲಿ ಕೇಂದ್ರೀಯ ಮಹತ್ವವನ್ನು ಹೊಂದಿದೆ. ಆದುದರಿಂದ ವಿಜಯರಾಯ್ ವೈದ್ಯ ಅವರು ಪ್ರೇಮಕಥೆಯ ಮುಖವಾಡ ಧರಿಸಿದ ಸಂಸ್ಕೃತಿಯ ಕಥೆಯೆಂದು ವರ್ಣಿಸಿದುದು ಉಚಿತವಾಗಿದೆ. ಏಕೆಂದರೆ ಈ ಕಾದಂಬರಿಯಲ್ಲಿ ಗೋವರ್ಧನರಾಮ ಅವರು ಎಲ್ಲ ವಿಷಯಗಳನ್ನು ಪ್ರೀತಿಯ ಮೇಲೆಯೆ ಕೇಂದ್ರಿಕೃತವಾಗುವಂತೆ ಮಾಡಿದ್ದರು. ಪ್ರೀತಿಯ ನೋವು ಮತ್ತು ತೊಂದರೆಗಳು ಜೀವನದ ಉಳಿದ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುತ್ತವೆ. ಆದುದರಿಂದಲೆ ವಿಷ್ಣುಪ್ರಸಾದ ತ್ರಿವೇದಿ ಅವರು ಈ ಗದ್ಯಮಹಾಕಾವ್ಯವನ್ನು ಅತಿಶಯವಾಗಿ ಹೊಗಳಿದ್ದಾರೆ.

# V ಸ್ನೇಹಮುದ್ರೆ ಮತ್ತಿತರ ಕವಿತೆಗಳು

ತಮ್ಮ ಮೊದಲನೆಯ ಧರ್ಮಪತ್ನಿ ಹರಿಲಕ್ಷ್ಮಿ ತೀರಿಕೊಂಡ ಮೇಲೆ ಗೋವರ್ಧನರಾಮ ಅವರು ಅವಳನ್ನು ತಮ್ಮ **ಸ್ನೇಹಮುದ್ರೆ** ಎಂಬ ಕವಿತೆಯಲ್ಲಿ ಚಿತ್ರಿಸಿದರು. ಅದೇ ಮಾನಸಿಕ ಒತ್ತಡದಲ್ಲಿ **ವಿಧಿಕುಂಠಿತಮ್** ಎಂಬ ಕಥೆಯನ್ನು

ಬರೆದರು. ಅಲ್ಲದೆ ಸಂಸ್ಕೃತದಲ್ಲಿ **ಹೃದಯ ಖುದಿತ ಶತಕಂ** ಎಂಬ ೧೧೧ ಪದ್ಯಗಳ ಕವಿತೆಯನ್ನು ಬರೆದರು.

ಈ ಸಂಸ್ಕೃತ ಪದ್ಯಗಳಲ್ಲಿ ಹೆಂಡತಿಯನ್ನು ಕಳೆದುಕೊಂಡ ದುಃಖವನ್ನು ಲೇಖಕರು ತೋಡಿಕೊಂಡಿದ್ದಾರೆ. ಅಲ್ಲದೆ ಅದನ್ನು ಅಭಿವ್ಯಕ್ತಿಸುವ ರೀತಿ ಅಷ್ಟೊಂದು ನಾಜೂಕಾಗಿಲ್ಲ. ಪದ್ಯಗಳು ಅತಿ ವೈಯಕ್ತಿಕವಾಗಿರುತ್ತವೆ. ಐತಿಹಾಸಿಕವಾಗಿ **ಸ್ನೇಹ ಮುದ್ರೆ** ಅವರ ಮೊದಲ ಕೃತಿಯಾಗಿದೆ. ಅದನ್ನು ಅವರು ೧೮೭೭ ರಷ್ಟು ಮೊದಲೆ ಪ್ರಾರಂಭಿಸಿ ೧೮೭೭ ರಲ್ಲಿ ಮುಗಿಸಿದರು—ಅದೆ ವರುಷ **ಸರಸ್ವತಿಚಂದ್ರ** ಕಾದಂ ಬರಿಯ ಮೊದಲ ಭಾಗ ಪ್ರಕಟವಾಯಿತು-–ನಂತರ ಎರಡು ವರುಷಗಳ ನಂತರ ಅದನ್ನು ಪ್ರಕಟಿಸಿದರು. ಈ **ಸ್ನೇಹಮುದ್ರೆ** ಯಲ್ಲಿ ಮಾತ್ರ ಅವರು ತಮ್ಮ ದುಃಖ ವನ್ನು ಕಲಾಕೃತಿಯಲ್ಲಿ ಪರಿವರ್ತಿಸಲು ಸಮರ್ಥರಾದರು.

ಈ ಕೃತಿಯನ್ನು ಬರೆಯುವಾಗ ಗೋವರ್ಧನರಾಮ ಅವರು ಇನ್ನೂ ತರುಣ ರಾಗಿದ್ದರೂ ಅವರು ಒಂದು ಪರಿಪಕ್ವವಾದ ಮತ್ತು ಚಿಂತನ ಪರವಾದ ನಿರೂಪಣಾ ಶೈಲಿಯನ್ನು ರೂಢಿಸಿಕೊಂಡಿದ್ದರು. ಗೋವರ್ಧನರಾಮ ಅವರು ಸ್ವತಃ ಚಿಂತನ ಶೀಲ ವ್ಯಕ್ತಿಯಾಗಿದ್ದರು. ಈ ಪದ್ಯದಲ್ಲಿ ಕಥಾನಾಯಕ, ಕಥಾನಾಯಕಿ, ಕಥಾ ನಾಯಕನ ಗೆಳೆಯ ಮತ್ತು ಗೆಳೆಯನ ಹೆಂಡತಿ — ಇವರೆ ಪ್ರಮುಖ ಪಾತ್ರಗಳು. ಒಬ್ಬ ಹಿಂದೂ ವಿಧವೆ, ಅವಳ ತಂದೆ ಮತ್ತು ಕೆಲವು ಗೆಳೆಯರು — ಇವರೆ ಅಪ್ರಧಾನ ಪಾತ್ರಗಳು. ದಾಂಪತ್ಯ ಸುಖವನ್ನೆ ಆರಿಸಿಕೊಂಡು ಗೋವರ್ಧನರಾಮ ಅವರು ಕುಟುಂಬ ಮತ್ತು ಸಮಾಜ ಜೀವನಗಳನ್ನು ಸಮರಸಗೊಳಿಸಲೆತ್ನಿಸಿದ್ದಾರೆ. ಅದನ್ನು ತಮ್ಮ ಸಮಗ್ರ ಜೀವನದರ್ಶನದಲ್ಲಿ ಅಳವಡಿಸಿದ್ದಾರೆ. ಕಥಾನಾಯಕ ಮತ್ತು ಕಥಾ ನಾಯಕಿಯರು ಭಾವನಾಜೀವಿಗಳಾಗಿದ್ದು ಸಾಮಾಜಿಕ ಪ್ರಜ್ಞೆಯನ್ನು ಹೊಂದಿದವ ರಾಗಿದ್ದಾರೆ. ಗೆಳೆಯ ಮತ್ತು ಗೆಳೆಯನ ಹೆಂಡತಿಯೂ ಇದೇ ರೀತಿ ಇರುತ್ತಾರೆ. 'ಹಿಂಬೆಳಕಿ 'ನಲ್ಲಿ ತೋರಿಸಿದ ಹಿಂದೂವಿಧವೆಯ ಕಥೆ ದಾಂಪತ್ಯ ಸುಖಕ್ಕೆ ವಿರುದ್ಧವಾದ ಹಿನ್ನೆಲೆಯನ್ನು ಒದಗಿಸ.ತ್ತದೆ. ಲೇಖಕರ ಜೀವನ ದರ್ಶನ ತೀವ್ರತರವಾದ ಪ್ರೀತಿ ಯನ್ನು ಸಾಮಾಜಿಕ ಕಾಳಜಿಗಳೊಂದಿಗೆ ಬೆರೆಸುತ್ತದೆ. ವ್ಯಕ್ತಿಯಜೀವನದಲ್ಲಿ ಅಡ್ಡ ಬರುತ್ತಿರುವ ಆ ಕಾಲದ ಸಂಪ್ರದಾಯದ ಹಿನ್ನೆಲೆಯಲ್ಲಿ ನಾವಿದನ್ನು ನೋಡಬೇಕು. ಬಾಲ್ಯವಿವಾಹ ಮತ್ತು ತಂದೆತಾಯಿಗಳ ಅಧಿಕಾರದಿಂದ ಹದಗೆಟ್ಟ ಭಾರತೀಯ ಕುಟುಂಬವು ವಿರೋಧಾತ್ಮಕ ಅಭಿರುಚಿಗಳ ಯುದ್ಧಭೂಮಿಯಾಗಿತ್ತು. ಗೋವರ್ಧನ ರಾಮ ಅವರಿಗೆ ಪ್ರೀತಿಯೆ ಸುಖದ ತಳಹದಿಯಾಗಿತ್ತು. ಪ್ರೀತಿಯಲ್ಲಿ ದುರಂತ ದನುಭವ ತಪ್ಪಿಸಲಾರದ್ದಾಗಿದೆ. ಅದು ಕಡ್ಡಾಯವಾಗಿ ಪ್ರಕೃತಿ ಮತ್ತು ಸಮಾಜ ದೊಂದಿಗೆ ಸಾಮರಸ್ಯವನ್ನು ಹೊಂದಲು ಸಹಾಯಕವಾಗುತ್ತದೆ. ಗೋವರ್ಧನರಾಮ ಅವರು ಇನ್ನೂಮುಂದೆ ಹೋಗಿ ಪ್ರೀತಿಯ ತೀವ್ರತೆ ಸಾವಿನ ನಂತರವೂ ಅಮರವಾಗಿ ಉಳಿಯುತ್ತದೆ ಎಂದು ಹೇಳುತ್ತಾರೆ. ಈ ಕವಿತೆ ಲೇಖಕರು ವೈಯಕ್ತಿಕವಾಗಿ ಅನುಭವಿಸಿದ ಆಘಾತ, ದುಃಖ, ಹಾನಿಗಳ ಮೇಲೆಯೆ ಆಧರಿಸಿದೆ. ಈ ಅನುಭವ

ದಿಂದಲೆ ಅವರು ತಮ್ಮ ಪ್ರೀತಿಯ ಸಿದ್ಧಾಂತವನ್ನು ರೂಪಿಸಿಕೊಳ್ಳುತ್ತಾರೆ. ಅದನ್ನು ಸಾಮಾಜಿಕ ಪರಿಸರದ ಹಿನ್ನೆಲೆಯಲ್ಲಿ ಚರ್ಚಿಸುತ್ತಾರೆ. ಈ ದಿಶೆಯಲ್ಲಿ ಅವರ ಸಾಹಿತ್ಯದ ಮೇಲೆ ಸಂಸ್ಕೃತ ಕವಿ ಭವಭೂತಿಯ ಪ್ರಭಾವ ಸಾಕಷ್ಟಾಗಿದೆ.

**ಸ್ನೇಹಮುದ್ರೆ**ಯ ಕಥಾನಾಯಕ ಮತ್ತು ಕಥಾನಾಯಕಿ ಇಬ್ಬರೂ ಪರ ದೇಶದವರಾಗಿದ್ದಾರೆ. ಅವರನ್ನು ಭಾರತೀಯರನ್ನಾಗಿ ಚಿತ್ರಿಸಿದ್ದರೆ ಅವರು ನೈಜವಾದ ಪಾತ್ರಗಳಾಗುತ್ತಿರಲಿಲ್ಲ. ಸಮಾಜ ಕಲ್ಯಾಣ ಸಾಧಿಸಬೇಕೆಂಬ ಆಶೆಯಿಂದ ಅವರು ಭಾರತಕ್ಕೆ ಬರುತ್ತಾರೆ.

**ಸ್ನೇಹಮುದ್ರೆ**ಯಲ್ಲಿ ಕುಟುಂಬ, ಸಮಾಜ, ಧರ್ಮಗಳ ಬಗೆಗೆ ಬರುವ ಅನೇಕ ಚಿಂತನಪರ ಭಾಗಗಳು ಸಾವಯವವಾಗಿ ಕವಿತೆಯೊಂದಿಗೆ ಬೆರೆತು ಕೊಂಡಿಲ್ಲ ವೆಂದು ಅನೇಕ ವಿಮರ್ಶಕರು ಆಕ್ಷೇಪವೆತ್ತಿದ್ದಾರೆ. ಚಿಂತನೆಯನ್ನು ಪರಿಸರದಲ್ಲಿ ಬೆಸೆದು ತೋರಿಸುವುದರಲ್ಲಿ ಗೋವರ್ಧನರಾವು ಅವರು ಅಯಶಸ್ವಿಯಾಗಿದ್ದಾರೆ. ಹೀಗಾಗಿ ಅವೆಲ್ಲ ಸ್ವತಂತ್ರವಾಗಿ ನೇತಾಡುತ್ತಿರುವಂತೆ ಕಾಣಿಸುತ್ತದೆ. ರಚನೆಯ ದೃಷ್ಟಿಯಿಂದಲೂ **ಸ್ನೇಹಮುದ್ರೆ** ಅಷ್ಟೊಂದು ಯಶಸ್ವಿಯಾಗಿಲ್ಲ.

ವೈಯಕ್ತಿಕ ಅನುಭವವನ್ನು ಉದ್ದೇಶಪೂರ್ವಕವಾಗಿ ಸಾಮಾನ್ಯೀಕರಿಸುವುದ ರಿಂದ ಅದು ಲೇಖಕರ ದುಃಖ ಮತ್ತು ಹಾನಿಯ ಪ್ರಜ್ಞೆಯನ್ನೇ ಅಳುಕಿಸಿಬಿಡುತ್ತದೆ. ಉಮಾಶಂಕರ ಜೋಶಿಯವರು ಹೇಳುವಂತೆ **ಸ್ನೇಹಮುದ್ರೆ**ಯಲ್ಲಿ ನಿಜವಾದ ಭಾವನೆ ಗಳು ಅತಿ ವಿರಳವಾಗಿವೆ. ಅವರು ಹೀಗೆ ಹೇಳುತ್ತಾರೆ: 'ಒಂದು ವೇಳೆ ಲೇಖಕರ ದಿವಂಗತ ಪತ್ನಿ ಮತ್ತೆ ಜೀವಧರಿಸಿ ಬಂದು ಈ ಕವಿತೆಯನ್ನೋದಿದರೆ 'ನಾನು ಸತ್ತಾಗ ನಿಮಗೇನು ಬಹಳ ದುಃಖವಾಗಿಲ್ಲವೆಂದು ಹೇಳುತ್ತಿದ್ದರು'.

'ಸತಿ' ಪದ್ಧತಿಯ ಬಗೆಗೆ ಈ ಲೇಖಕರು ಬರೆದಿದ್ದ ಚಿಂತನಪರ ಭಾಗ ಈ ಕವಿತೆಯೊಂದಿಗೆ ಸಂಬಂಧಿಸಿರದಿದ್ದರೂ, ಅದು ಅತ್ಯಂತ ಕಾವ್ಯಮಯವಾಗಿದೆ. **ಸ್ನೇಹ ಮುದ್ರೆ** ಒಂದು ಕಲಾಕೃತಿಯಾಗಿ ಅಯಶಸ್ವಿಯಾಗಿದ್ದರೂ ಅದರಲ್ಲಿ ಅನೇಕ ಮನೋ ರಂಜಕ ಭಾಗಗಳಿದ್ದು ಲೇಖಕರ ಕಾವ್ಯ ಪ್ರಜ್ಞೆಗೆ ಸಾಕ್ಷಿಯಾಗಿವೆ. ಅವರು ಪ್ರಕೃತಿ ಯನ್ನು ವರ್ಣಿಸುವಾಗ ಅವರ ಕಾವ್ಯಪ್ರತಿಭೆ ಎತ್ತರಕ್ಕೆ ಏರುತ್ತದೆ. ತಮ್ಮ ಹೆಂಡತಿ ತೀರಿಹೋದ ನಂತರ ಕಥಾನಾಯಕ ಪರ್ವತವೊಂದರ ಮೇಲೆ ನಿಂತುಕೊಂಡು ತೇಲು ತ್ತಿರುವ ಮೋಡಗಳನ್ನು ವರ್ಣಿಸಿದುದು ಅತ್ಯಂತ ಮನೋಹರವಾಗಿದೆ. **ಸ್ನೇಹಮುದ್ರೆ**ಯ ಅತ್ಯಂತ ಮಹತ್ವದ ಅಂಶವೆಂದರೆ ಅದರ ಕಾವ್ಯ ಸೌಂದರ್ಯ. ಈ ಕಾವ್ಯದಲ್ಲಿ ನಾನಾವಿಧವಾದ ಛಂಧಸ್ಸುಗಳಿದ್ದರೂ ಛಂಧಸ್ಸುಗಳ ಆಯ್ಕೆ ಅಷ್ಟೊಂದು ಸರಿಯಾಗಿಲ್ಲವೆಂದೆ ಹೇಳಬೇಕು. ಅವರು ಈ ಕಾವ್ಯದಲ್ಲಿ 'ಶಾರ್ದೂಲ ವಿಕ್ರೀಡಿತ', 'ಶಿಖಾರಿಣಿ', 'ಮಂದಕ್ರಾಂತ', 'ಶಗ್ಧರಾ', 'ಮಾಲಿನಿ', 'ದಿಂಡಿ' 'ಹರಿಗೀತ', 'ಚೋಪಾಯಿ', 'ತೋಟಕ', 'ಲಾವಣಿ', 'ಕಾಟವ', ಮತ್ತು 'ದೊಹರಾ' ಮುಂತಾದ ಛಂದಸ್ಸುಗಳನ್ನುಪಯೋಗಿಸಿದ್ದಾರೆ. ಇದಲ್ಲದೆ ಅವರು

ವ್ರಾಜ ಭಾಷೆಯ 'ಭಜನ'ವನ್ನೂ, ಭಾರತೀಯ ಶಾಸ್ತ್ರೀಯ ಸಂಗೀತದ 'ರಾಗ' ಗಳನ್ನೂ ಉಪಯೋಗಿಸಿದ್ದಾರೆ. 'ಕಾಟವ' ಛಂದಸ್ಸನ್ನು ಪಯೋಗಿಸುವಲ್ಲಿ ಗೋವರ್ಧನ ರಾಮ ಅವರದು ಎತ್ತಿದ ಕೈ.

**ಸ್ನೇಹಮುದ್ರೆ**ಯ ಅಸ್ಪಷ್ಟತೆಗೆ ಅದರ ಶಬ್ದಭಂಢಾರವೆ ಕಾರಣವಾಗಿದೆ. ಈ ಲೇಖಕರಿಗೆ ಅಪ್ರಚಲಿತ ಸಂಸ್ಕೃತ ಶಬ್ದಗಳನ್ನೂ, ಅದರಲ್ಲಿಯೂ ಅಪ್ರಚಲಿತಾರ್ಥ ಗಳನ್ನು ಹೊಂದಿರುವ ಶಬ್ದಗಳನ್ನೂ ಉಪಯೋಗಿಸುವುದೆಂದರೆ ಬಹಳ ಪ್ರೀತಿ. ಇದಲ್ಲದೆ ಆಡುಮಾತಿನ ಲಯವನ್ನೂ ಅದರಲ್ಲಿ ಬೆರೆಯಿಸಿ ಭಾಷೆಯನ್ನು ತಾವು ವರ್ಣಿ ಸುವ ಘಟನೆಗಳಿಗೆ ಹೊಂದುವಂತೆ ಮಾಡಬಲ್ಲವರಾಗಿದ್ದರು.

**ಸ್ನೇಹಮುದ್ರೆ** ಒಂದು ಶೋಕ ಗೀತೆಯಾಗಿದೆಯೊ ಹೇಗೆ ಎಂದು ಕೆಲವು ವಿಮರ್ಶಕರು ಸಂಶಯಪಟ್ಟಿದ್ದಾರೆ. ನಾನಾಲಾಲ ಅದನ್ನು ಶೋಕಕಾವ್ಯವೆಂದೆ ಹೇಳು ತ್ತಾರೆ. ಮಾಸ್ತಕವಿ ತ್ರಿಭುವನ ಪ್ರೇಮಶಂಕರ ಅವರ **ಕಲಪಿನೊ ವಿರಹ** ಎಂಬ ಕೃತಿಯ 'ವಿರಹಪಂಚಯಾತನಾ' ಎಂಬ ಮುನ್ನುಡಿಯಲ್ಲಿ ನಾನಾಲಾಲ ಅವರು ದಲಪತ್‌ರಾಮ ಅವರ **ಫೊರ್ಬೆಸ್-ವಿರಹ**, ಪ್ರೇಮಶಂಕರ ಅವರ **ಕಲಪಿನೊ ವಿರಹ** ಮತ್ತು ಗೋವರ್ಧನರಾಮ ಅವರ **ಸ್ನೇಹಮುದ್ರೆ** ಈ ಮೂರೂ ಕೃತಿ ಗಳನ್ನು ಶೆಲ್ಲಿಯ **ಆ್ಯಡೊನಿಸ್** ಮತ್ತು ಟೆನಿಸನ್‌ನ **ಇನ್ ಮೆಮೊರಿಯಂ** ಪದ್ಯ ಗಳೊಂದಿಗೆ ಹೋಲಿಸುತ್ತಾರೆ. ಈ ಹೋಲಿಕೆ ಅಷ್ಟೊಂದು ಸರಿಯಾದುದಲ್ಲ. ಇವು ಗಳಲ್ಲಿ **ಫೊರ್ಬೆಸ್-ವಿರಹ** ಮಾತ್ರ ಪ್ರಜ್ಞಾಪೂರ್ವಕವಾಗಿ ಬರೆದ ಶೋಕಕಾವ್ಯ ವೆಂದು ಹೇಳಬಹುದು. ಉಳಿದೆರಡು ಪದ್ಯಗಳು ಆತ್ಮೀಯ ಸ್ನೇಹಿತನೊಬ್ಬ ತೀರಿ ಹೋದ ಮೇಲೆ ದುಃಖದಿಂದ ಚಿಂತನಗೈಯುವಂಥ ಶೋಕಕಾವ್ಯದ ಮಾರ್ಗವನ್ನನು ಸರಿಸಿದರೂ ಸಂಪೂರ್ಣವಾಗಿ ಶೋಕಕಾವ್ಯದ ಯಶಸ್ಸನ್ನು ಸಾಧಿಸುವುದಿಲ್ಲ. **ಸ್ನೇಹ ಮುದ್ರೆ** ಕವಿತೆಯ ಪಾತ್ರಗಳು ಸಾವಿನಲ್ಲಿ ಮರೆಯಾಗಿ ಮತ್ತೆ ಭೂಮಿಗೆ ಬಂದು ಜೀವಂತವಿರುವವರೊಂದಿಗೂ, ಸತ್ತವರೊಂದಿಗೂ ಒಂದೇತರದ ಸಲೀಸಾದ ರೀತಿಯಲ್ಲಿ ಮಾತನಾಡುತ್ತವೆ. ಹೀಗಾಗಿ ಶೋಕಕಾವ್ಯದ ಪ್ರೇರಕಶಕ್ತಿಯಾದ ಜೀವಹಾನಿ ಇಲ್ಲಿ ಕಂಡುಬರುವುದಿಲ್ಲ, ಇಲ್ಲಿ ಕವಿಯೂ ಪ್ರಜ್ಞಾಪೂರ್ವಕವಾಗಿ ಶೋಕಕಾವ್ಯವನ್ನು ಬರೆಯುವ ಪ್ರಯತ್ನ ಮಾಡುವುದಿಲ್ಲ. ಗೋವರ್ಧನರಾಮ ಅವರು ಟೆನಿಸನ್‌ನ **ಇನ್ ಮೆಮೊರಿಯಂ** ಕವಿತೆಯನ್ನು ಮಾದರಿಯನ್ನಾಗಿರಿಸಿ ಕೊಂಡಿದ್ದರೆಂದು ಕಾಣುತ್ತದೆ. ಆಧ್ಯಾತ್ಮಿಕ ಜೀವನ, ಪ್ರಕೃತಿಪ್ರೇಮ, ಸಾಮಾಜಿಕ ಕಾಳಜಿ ಮತ್ತು ಚಿಂತನೆ ಇವೆಲ್ಲ ಗುಣಗಳು **ಸ್ನೇಹಮುದ್ರೆ**ಯ ಕವಿಗೂ, ಟೆನಿಸನ್ನನಿಗೂ ಸಾಮಾನ್ಯ ವಾಗಿವೆ.

**ಸ್ನೇಹಮುದ್ರೆ** ಮತ್ತು **ಸರಸ್ವತಿಚಂದ್ರ** ದಲ್ಲಿ ಬರುವ ಕೆಲವು ಬಿಡಿಕವನ ಗಳಲ್ಲದೆ ಗೋವರ್ಧನರಾಮ ಅವರು ಇತರ ಕೆಲವು ಕವನಗಳನ್ನೂ ಬರೆದಿದ್ದಾರೆ. **ಕವಿಭೋಗ್ಯ ಕವಿತಾ, ಆಧ್ಯಾತ್ಮಿಕ ಕವಿ ಅನೆ ತೆಣಿ ಕವಿತಾ, ಅನುಪಮ ತಿಮಿರ** ಮತ್ತು **ಅನುಪಮ ತೇಜ** ಇವೆಲ್ಲ ಕವನಗಳು ೧೯೦೪ರಲ್ಲಿ ಪ್ರಕಟ

ಗೊಂಡವು. ಇವುಗಳಲ್ಲಿ ಯಾವುದೂ ಹೇಳಿಕೊಳ್ಳುವಷ್ಟು ಚೆನ್ನಾಗಿಲ್ಲ. ಇದರ ಮರುವರ್ಷ ಪ್ರಕಟವಾದ **ಪ್ರಣಪಪುರುಷ** ಮತ್ತು **ಕುರುಕ್ಷೇತ್ರ** ಕವನಗಳೂ ಪ್ರಾರಂಭದ ಸಾಲುಗಳ ನಂತರ ಬೆಳೆಯುವುದೇ ಇಲ್ಲ. **ಸಂಸಾರಪ್ರತಿಬಿಂಬ** ವೆಂಬ ಕವಿತೆ ಕವಿಯ ಸುತ್ತಲಿನ ಜಗತ್ತಿನ ವರ್ಣನೆ ಮಾತ್ರವಾಗಿದೆ. **ರಸಸುಂದರಿ ಆನೆ ತತ್ವಾನಂದಸ್ವಾಮಿ** ಕವಿತೆ ತತ್ವಾನಂದಸ್ವಾಮಿ ಎಂಬ ಸನ್ಯಾಸಿಯ ಅನುಭವವನ್ನನುಭವಿಸಿ ಪರಮಾನಂದದಿಂದ ಪುಳಕಿತನಾದುದರ ಚಿತ್ರವನ್ನೊಳಗೊಂಡಿದೆ, 'ತತ್ವಾನಂದ' ವೆಂದರೆ ಪರಬ್ರಹ್ಮನನ್ನು ಸಾಕ್ಷಾತ್ಕರಿಸಿಕೊಂಡ ಮೇಲೆ ಆಗುವ ಸಂತೋಷ. ಈ ಸನ್ಯಾಸಿ ಈ ಬ್ರಹ್ಮಾನಂದವನ್ನನುಭವಿಸಿದ ನಂತರ ರಸಸುಂದರಿ ಅಂದರೆ ಸಂತೋಷದ ರಾಣಿ ಎಂಬ ಸ್ತ್ರೀಯನ್ನು ಭೇಟಿಯಾಗುತ್ತಾನೆ. ಇವರಿಬ್ಬರ ನಡುವೆ ನಡೆಯುವ ಸಂಭಾಷಣೆಯೇ ಈ ಕವಿತೆ. ಪ್ರಕೃತಿವರ್ಣನೆ, ಸಂಭಾಷಣೆಯನ್ನು ಹೆಣೆಯುವ ಕಾವ್ಯಕುಶಲತೆ, ಪ್ರಾಸಬದ್ಧತೆ—ಇವೆಲ್ಲ ಈ ಕವಿತೆಯ ಗಮನಾರ್ಹವಾದ ಅಂಶಗಳು. ಅಂದರೆ ಪದ್ಯವನ್ನು ಇಡಿಯಾಗಿ ನೋಡಿದಾಗ ಅದೊಂದು ಸಾಮಾನ್ಯ ಮಟ್ಟದ ಕವಿತೆಯೆಂದೆನಿಸುವುದು.

ನಾಟಕಗಳನ್ನು ಬರೆಯುವುದರಲ್ಲಿಯೂ ಗೋವರ್ಧನರಾಮ ಅವರು ಪ್ರಯತ್ನಿಸಿದ್ದರು. ಆದರೆ ಅವರು ಅದರಲ್ಲಿ ಯಶಸ್ವಿಯಾಗಲಿಲ್ಲ. ಅವರ **ಚೂನಿಸತಿ** ಎಂಬ ಇಂಗ್ಲಿಷಿನಲ್ಲಿ ಬರೆದ ಕೃತಿ ಒಬ್ಬ ಸಭ್ಯಸ್ತ್ರೀಯನ್ನು ಕುರಿತ ತಾತ್ವಿಕ ಕಥೆಯಾಗಿದೆ.

## VI ಲೀಲಾವತಿ ಜೀವನಕಲೆ

ಗೋವರ್ಧನ ಅವರ ಜ್ಯೇಷ್ಠಪುತ್ರಿಯಾದ ಲೀಲಾವತಿ ೧೯೦೨ನೆಯ ಇಸ್ವಿ ಜನೆವರಿ ೮ ರಂದು ತೀರಿಕೊಂಡಳು. ಆದರ ಮರುವರುಷವೆ ಅವರು ತಮ್ಮ ಮಗಳ ಸ್ಮರಣಾರ್ಥ **ಲೀಲಾವತಿ ಜೀವನಕಲೆ** ಎಂಬ ಕೃತಿಯನ್ನು ಬರೆಯಲಾರಂಭಿಸಿದರು. ಅದರ ಮೊದಲ ಭಾಗ ೧೯೦೫ ರಲ್ಲಿಯೂ, ಎರಡನೆಯ ಭಾಗ ೧೯೦೮ ರಲ್ಲಿಯೂ, ಮೂರನೆಯ ಭಾಗ ೧೯೨೬ ರಲ್ಲಿಯೂ ಪ್ರಕಟವಾದವು. **ಲೀಲಾವತಿ ಜೀವನಕಲೆ** ಜೀವನ ಚರಿತ್ರೆಯಾಗಿದ್ದು ಅದು ಅವರ ಇತರ ಕೃತಿಗಳಾದ **ಚೂನಿ ಸತಿ, ಮಾಧವ ರಾಮ ಸ್ಮಾರಿಕಾ** ಎಂಬ ಮುನ್ನುಡಿ, **ಸ್ವರ್ಗಸ್ಥ ಸಾಕ್ಷರ ನವಲರಾಮ ಲಕ್ಷ್ಮೀರಾಮನುನ್ ಜೀವನ ವೃತ್ತಾಂತ** ಮತ್ತು ಕವಿ **ದಯಾರಾಮನೊ ಅಕ್ಷರದೇಹ** ವೆಂಬ ಕೃತಿಗಳೊಂದಿಗೆ ನಿಲ್ಲುತ್ತದೆ. **ಮಾಧವರಾಮ ಸ್ಮಾರಿಕಾದ** ಭಾಗಗಳು ಗೋವರ್ಧನರಾಮ ಅವರ ವರ್ಣನಾ ಸಾಮರ್ಥ್ಯಕ್ಕೆ ಸಾಕ್ಷಿಯಾಗಿವೆ. ಅದರಲ್ಲಿಯೂ ನವಲ್‌ರಾಮನ ಕೊನೆಯ ದಿನಗಳ ವೃತ್ತಾಂತ ಅತ್ಯಂತ ಸುಂದರವಾಗಿದೆ. ಅವರಿಗೆ ತಮ್ಮ ಕಥಾವಸ್ತುವಿನ ಅಂತರಂಗದ ಬಗೆಗೆ ಬಹಳ ಕಾಳಜಿ. ದಯಾರಾಮ ಅವರ ವಿಷಯದಲ್ಲಿಯೂ ಅವರು ಬಹಿರಂಗ ಸಂಗತಿಗಳನ್ನು ಕೊಡು

ವುದು ಬಿಟ್ಟು ಅಂತರಂಗದ ಚಿತ್ರಣಕ್ಕೆ ಬಹಳಷ್ಟು ಪ್ರಾಧಾನ್ಯ ಕೊಟ್ಟಿದ್ದಾರೆ. **ಲೀಲಾವತಿ ಜೀವನಕಲೆ** ಯೆಂಬ ಅವರ ಮಗಳ ಜೀವನ ಚರಿತ್ರೆಯಲ್ಲಿಯೂ ಅವರು ಅವಳ ಚಾರಿತ್ರ್ಯ, ಅವಳ ಸದ್ಗುಣಗಳು ಮತ್ತು ಅವಳ ಮಾನಸಿಕ ಸ್ವಭಾವ —ಇವುಗಳ ಬಗೆಗೆ ಹೆಚ್ಚು ವಿವರಿಸುತ್ತಾರೆ. ಅವರು ಅವಳ ಜೀವನದ ಸಂಗತಿಗಳ ಮೇಲೆ ಗಮನ ಹರಿಸದಿರುವುದರಿಂದ ಈ ಕೃತಿಯನ್ನು ಜೀವನಚರಿತ್ರೆಯೆಂದು ಕರೆಯು ವುದು ಸರಿಯಾಗುವುದಿಲ್ಲ. ಅದು ವಾತ್ಸಲ್ಯಮಯಿಯಾದ ತಂದೆ ತನ್ನ ಸದ್ಗುಣಿಯಾದ ಮಗಳೊಂದಿಗೆ ನಡೆಸಿದ ಸಂಭಾಷಣೆಯ ರೂಪದಲ್ಲಿದೆ.

ಬಲವಂತರಾಯ್ ಠಾಕೂರ ಅವರ ಅಭಿಪ್ರಾಯವನ್ನು ನಾನು ಒಪ್ಪಿಕೊಳ್ಳುವು ದಿಲ್ಲ. ಗೋವರ್ಧನರಾಮ ಅವರು ತಮ್ಮ ಮಗಳಚಿತ್ರವನ್ನು ಕೊಟ್ಟಿದ್ದಾರೆಂದೂ ಅಥವಾ ಅವಳ ಮಗಳ ಪಾತ್ರ ಈ ಕೃತಿಯಲ್ಲಿ ಕೇಂದ್ರೀಯ ಸ್ಥಾನವನ್ನು ಹೊಂದಿದೆಯೆಂದೂ ನಾನು ಹೇಳಲಾರೆ. ಉದಾಹರಣೆಗೆ ಈ ಕೃತಿಯಲ್ಲಿ ಅವರ ಮಗಳ ದೈಹಿಕ ರೂಪದ ಉಲ್ಲೇಖವಿದೆ. ಅಲ್ಲದೆ ಈ ಪಾತ್ರವನ್ನು ಅತಿಯಾಗಿ ಸಾಮಾನ್ಯೀಕರಿಸಿದ್ದರಿಂದ ಅದೊಂದು ಆದರ್ಶ ಭಾರತೀಯ ಮಹಿಳೆಯ ಚಿತ್ರವಾಗಿ ಕಾಣಿಸುತ್ತದೆ. ಇಲ್ಲಿ ಸತ್ಯದಿಂದ ಬೇರ್ಪಟ್ಟ ಆದರ್ಶವನ್ನು ತೋರಿಸದೆ ಸಾಮಾನ್ಯ ಸ್ತ್ರೀಯೊಬ್ಬಳ ಅಳವಿ ನಲ್ಲಿದ್ದ ಆದರ್ಶವನ್ನು ತೋರಿಸುವುದೆ ಲೇಖಕರ ಉದ್ದೇಶವಾಗಿದೆ.

ಆದುದರಿಂದ **ಲೀಲಾವತಿ ಜೀವನಕಲೆ**ಯಲ್ಲಿ ಕೇಂದ್ರೀಯ ನಿರೂಪಣಾ ಸೂತ್ರ ದೊಂದಿಗೆ ಹೊಂದಿಕೊಳ್ಳದ ಒಂದು ಐತಿಹಾಸಿಕ ಉಲ್ಲೇಖ ನಮಗೆ ಸಿಗುತ್ತದೆ. ಮೊದಲನೆಯ ಉದಾಹರಣೆಯೆಂದರೆ ಹತ್ತು ಅಥವಾ ಹನ್ನೊಂದು ವರುಷದ ಹುಡುಗಿ ಯೊಬ್ಬಳು ಜನರು ಮದುವೆ ಮಾಡಿಕೊಳ್ಳದಿದ್ದರೆ ಸರಿಯಲ್ಲವೊ ಹೇಗೆ ಎಂದು ತನ್ನ ತಂದೆ ಯನ್ನು ಕೇಳುವುದು. ಅಂದಿನ ಕಾಲದ ಭಾರತೀಯರಲ್ಲಿ ಹೆಣ್ಣುಮಕ್ಕಳಿಗೆ ಮದುವೆ ಕಡ್ಡಾಯವಾಗಿತ್ತು. **ಸರಸ್ವತಿಚರಿತ ನಾಟಕ** ವೆಂಬ ಪುಸ್ತಕದಲ್ಲಿ ಮಗಳು ತಂದೆ ಬರೆದ ಉಪದೇಶದ ಪತ್ರಗಳಿಂದಾಯ್ದು ವಾಕ್ಯಗಳನ್ನು ಬರೆದಿಡುವುದು ಎರಡನೆಯ ಉದಾಹರಣೆ. ಅತ್ತೆ ಮಾವಂದಿರ ಮನೆಯಲ್ಲಿರುವ ಆರ್ಥಿಕ ತೊಂದರೆಯಿಂದಾಗಿ ಹಾಲು ತುಪ್ಪಗಳನ್ನುಣ್ಣುವುದನ್ನು ಕಡಿಮೆ ಮಾಡುವುದು ಮೂರನೆಯ ಉದಾಹರಣೆ. ಅವಳು ಅರಿಷಿಣಪುಡಿಯನ್ನು ಸಹ ಮಿತ ವ್ಯಯದಿಂದ ಉಪಯೋಗಿಸುತ್ತಾಳೆ. ತನ್ನ ತಾಯಿಯು ತನ್ನ ಅತ್ತೆಯನ್ನು ಹಳಿಯುವುದು, ಬೇರೆಯವರು ತನ್ನ ಗಂಡನನ್ನು ಹೀಗಳೆದರೂ ಆತನ ಬೆನ್ನುಕಟ್ಟುವುದು (' ಗಂಡನನ್ನು ಹೀಗಳೆಯುವ ಹೆಂಡತಿಯನ್ನು ಗಲ್ಲಿಗೇರಿಸಬೇಕು '). ಕ್ಷಯದಿಂದ ನರಳುವ ಗಂಡನ ಉಪಚಾರಮಾಡಿ ತಾನೇ ಕ್ಷಯವನ್ನು ಅಂಟಿಸಿಕೊಳ್ಳುವುದು, ತನ್ನ ಸಹೋದರಿಯ ಭವಿಷ್ಯದ ಬಗೆಗೆ ಚಿಂತಿಸು ತ್ತಿರುವ ತನ್ನ ತಾಯಿಯನ್ನು ಸಾಂತ್ವನಗೊಳಿಸುವುದು, ಮತ್ತು ಕಠಿಣವಾದ ಧಾರ್ಮಿಕ ಗ್ರಂಥದ ಭಾಗವನ್ನು ತಿಳಿಸಿಹೇಳೆಂದು ತನ್ನ ತಂದೆಯನ್ನು ಕೇಳುವುದು — ಇವೆಲ್ಲ ಕೆಲವು ಉದಾಹರಣೆಗಳು. ಲೀಲಾವತಿ ತೀರಿಹೋದಮೇಲೆ ಕೆಲಸಮಯದಲ್ಲಿಯೆ ಗೋವರ್ಧನರಾಮ ಈ ವಿವರಗಳನ್ನೆಲ್ಲ ಬರೆದಿಟ್ಟರು. ಬಲವಂತರಾಯ್ ಠಾಕೂರ ಅವರು ಹೇಳಿದಂತೆ ಗೋವರ್ಧನರಾಮ ಅವರಿಗೆ ತಮ್ಮ ಮಗಳಮೇಲೆ ಎಷ್ಟೊಂದು

ತೀವ್ರವಾದ ವಾತ್ಸಲ್ಯವಿತ್ತೆಂದರೆ ಅವರು ಅವಳ ಬಗೆಗಿನ ನೆನಪುಗಳನ್ನು ಬರೆಯುವಾಗ ಆಗಲಿ ಅಥವಾ ಬರೆದ ನೆನಪುಗಳನ್ನು ಇತರರಿಗೆ ಓದಿಹೇಳುವಾಗಲಾಗಲಿ ದುಃಖವನ್ನು ತಡೆಯಲಾರದೆ ಕಣ್ಣೀರು ಸುರಿಸುತ್ತಿದ್ದರು. ಇಂಥ ಆಳವಾದ ನೆನಪುಗಳನ್ನು ಅತ್ಯಂತ ಪ್ರಾಮಾಣಿಕವಾಗಿ ಬರೆದಿರುವುದರಿಂದ ಅವು ಇಂದಿಗೂ ಓದುಗರ ಹೃದಯವನ್ನು ತಟ್ಟುತ್ತವೆ.

ಈ ಪುಸ್ತಕದ ನಾಲ್ಕನೆಯ ಭಾಗದಲ್ಲಿ ಲೀಲಾವತಿಯ ಶಿಕ್ಷಣದ ಬಗೆಗೆ ಕೆಲವು ವಿವರಗಳು ಬಂದಿವೆ. ಅವಳ ಶಿಕ್ಷಣವನ್ನು ನಿರ್ಧರಿಸಿದವರು ಅವರ ತಂದೆಯೆ. ಅವಳಿಗೆ ಇಂಗ್ಲಿಷ್ ಭಾಷೆ ಬರುತ್ತಿರಲಿಲ್ಲ. ಅಲ್ಲದೆ ಇಂಗ್ಲಿಷ್ ಮೇರುಕೃತಿಗಳು ಗುಜರಾಥಿ ಅನುವಾದದಲ್ಲಿ ಲಭ್ಯವಿಲ್ಲದುದರಿಂದ ಅವಳ ತಂದೆ ಅವಳಿಗೆ ಇಂಗ್ಲೆಂಡ್ ದೇಶದ ಬಗೆಗೆ ಬರೆದ ಪ್ರವಾಸ ಲೇಖನವೊಂದನ್ನು ಓದ ಹಚ್ಚಿದರು. ಇದಲ್ಲದೆ ಅವಳು ಗುಜರಾಥಿ ದಿನಪತ್ರಿಕೆಯೊಂದನ್ನೂ, ಪ್ರಾರ್ಥನಾ ಪುಸ್ತಕವನ್ನೂ, ಸದ್ಗುಣಿ ಸ್ತ್ರೀಯನ್ನು ಕುರಿತ ತಾತ್ವಿಕ ಗ್ರಂಥವಾದ **ಭಾಮಿನೀಭೂಷಣ**ವನ್ನೂ ಓದುತ್ತಿದ್ದಳು. ತನ್ನ ಮಗಳ ಶಿಕ್ಷಣದ ಬಗೆಗೆ ವಿಚಾರಿಸಿದ ಗೋವರ್ಧನರಾಮು ಅವರು ಸ್ತ್ರೀಶಿಕ್ಷಣದ ಬಗೆಗೆ ಆಳವಾಗಿ ವಿಚಾರಿಸ ಹತ್ತಿದರು. ಆನುಷಂಗಿಕವಾಗಿ ಅವರು ಅವಳಿಗೆ ಸಂಸ್ಕೃತ ಮತ್ತು ಇಂಗ್ಲಿಷ್ ಸಾಹಿತ್ಯದ ತಿರುಳನ್ನೂ ಬೋಧಿಸಿದರು.

ಈ ಪುಸ್ತಕದ ಐದನೆಯ ಭಾಗದಲ್ಲಿ ತಂದೆ ಮತ್ತು ಮಗಳ ನಡುವಿನ ಸಂಬಂಧದ ನಿರೂಪಣೆಯಿದೆ. ತನ್ನ ತಂದೆ ಒಬ್ಬ ನಾಸ್ತಿಕವೆಂದು ಅವಳಿಂದೂ ತಿಳಿಯಲು ಸಾಧ್ಯವಿರಲಿಲ್ಲ. ಅವಳಿಗೆ ಆಭರಣಗಳು ಮತ್ತು ಸೌಂದರ್ಯ ವರ್ಧಕ ವಸ್ತುಗಳ ಬಗೆಗೆ ಎಳ್ಳಷ್ಟೂ ಮೋಹವಿರಲಿಲ್ಲ. ಬೇರೆಯವರು ಸುಂದರವಾದ ಉಡುಗೆಗಳನ್ನು ಹಾಕಿಕೊಂಡುದನ್ನು ನೋಡುವುದೆ ಅವಳಿಗೆ ಸಂತೋಷ. ಪೆಟ್ಲಾಡದಲ್ಲಿರುವ ಅವಳ ಗಂಡ ಮತ್ತು ಇತರ ಸಂಬಂಧಿಕರು ಯಾವಾಗಲೂ ಅವಳ ಔದಾರ್ಯವನ್ನು ಕೊಂಡಾಡುತ್ತಿದ್ದರು. ತಿಳುವಳಿಕೆ, ತಾಳ್ಮೆ, ದಯೆ, ದೇವರಲ್ಲಿ ಭಕ್ತಿ, ನೈತಿಕ ಮತ್ತು ಧಾರ್ಮಿಕಸ್ವಭಾವ —ಇವೆಲ್ಲ ಅವಳ ವ್ಯಕ್ತಿತ್ವದಲ್ಲಿ ಎದ್ದುಕಾಣುವ ಅಂಶಗಳಾಗಿದ್ದವು. ಗೋವರ್ಧನರಾಮು ಅವರು ಇವೆಲ್ಲವುಗಳ ಬಗೆಗೆ ವಿವರವಾಗಿ ಬರೆದಿದ್ದಾರೆ. ಇವೆಲ್ಲ ಗುಣಗಳು ಅವಳಲ್ಲಿ ಸುಯೋಜಿತ ಶಿಕ್ಷಣದ ಪರಿಣಾಮವಾಗಿ ಬಂದಿದ್ದರೂ, ಅವಳಿಗೆ ತನ್ನದೆ ಆದ ವೈಶಿಷ್ಟ್ಯ ಪೂರ್ಣವಾದ ಚಾರಿತ್ರ್ಯ, ನೈತಿಕ ಬಲಗಳಿದ್ದವೆಂಬುದು ಗೋವರ್ಧನರಾಮು ಅವರಿಗೆ ಚೆನ್ನಾಗಿ ಗೊತ್ತಿತ್ತು. ಆದ್ದರಿಂದಲೆ ಒಮ್ಮೆ ಅವರು ಕೃಷ್ಣಲಾಲ ಝವೇರಿ ಅವರಿಗೆ ಬರೆದ ಪತ್ರದಲ್ಲಿ ಹೀಗೆ ಹೇಳಿದ್ದಾರೆ: ‘ಅವಳ ತಾಯಿಯಲ್ಲಿ ಅಥವಾ ತಂದೆಯಾದ ನನ್ನಲ್ಲಿರುವ ಅತ್ಯುತ್ತಮ ಗುಣಗಳನ್ನು ಆನುವಂಶಿಕವಾಗಿ ಪಡೆದಿರುವುದಲ್ಲದೆ ತನ್ನ ಸ್ವಂತ ಗುಣಗಳಾದ ಬುದ್ಧಿಮತ್ತೆ ಮತ್ತು ನೈತಿಕಶಕ್ತಿಯನ್ನೂ ಆಕೆ ಹೊಂದಿದ್ದಳು’.

ಲೀಲಾವತಿ ಒಂದು ಆದರ್ಶಪ್ರಾಯವಾದ ಜೀವನ ನಡೆಸಿದಳೆಂದು ನಿಸ್ಸಂದೇಹವಾಗಿ ಹೇಳಬಹುದು. ತನ್ನ ಜೀವನದುದ್ದಕ್ಕೂ ಆಕೆ ಬಡತನದ ವಿರುದ್ಧ ಧೈರ್ಯ

ದಿಂದ ಹೋರಾಡಿದಳು. ಒಂದು ರೀತಿಯಲ್ಲಿ ಅವಳು ಬಡತನಕ್ಕೆ ತನ್ನನ್ನೆ ಆಹುತಿ ಕೊಟ್ಟಳು. ಹೀಗಾಗಿ ಅವಳು 'ಸತ್ಕ್ರಿಯಾ ಮೂರ್ತಿ' ಯಾಗಿದ್ದಳು. ಅವಳಿಗೆ ಉಚಿತವಾದ ರೀತಿಯಲ್ಲಿ ಗೌರವ ಸಲ್ಲಿಸಲು ಅಸಮರ್ಥನೆಂದು ಗೋವರ್ಧನರಾಮ ಅವರು ಒಪ್ಪಿಕೊಳ್ಳುತ್ತಾರೆ. ಅವಳ ಹುಟ್ಟು, ಜೀವನ, ಮತ್ತು ಸಾವುಗಳೆಲ್ಲವೂ ಯಾರೊಬ್ಬರ ಮುಂದೂ ಬಾಯಿತೆರೆದು ಹೇಳಲಾರದ ಮೂಕನನುಭವಿಸಿದ ಕನಸಿನಂತಿದ್ದವೆಂದು ಅವರು ಹೇಳುತ್ತಾರೆ. ಆದರೂ ಲೀಲಾವತಿ ಜೀವಿಸಿದ ಕಲೆಯನ್ನು ನಿರೂಪಿಸುವ ಲೀಲಾವತಿ ಜೀವನಕಲೆಯು ಅವಳ ಪಾತ್ರದ ನಿಜವಾದ ಚಿತ್ರವನ್ನು ಕೊಡುತ್ತದೆ.

## VII ವಿಮರ್ಶಾ ಕೃತಿಗಳು

ಸೃಜನಾತ್ಮಕ ಲೇಖಕರಾಗಿ ಗೋವರ್ಧನರಾಮ ಅವರು ಜೀವನವನ್ನು ವಿಮರ್ಶಿಸಿದರೆ, ವಿಮರ್ಶಕರಾಗಿ ಅವರು ಅನುಭವವನ್ನು ಪರೀಕ್ಷಿಸುತ್ತಾರೆ. ಸೃಜನಾತ್ಮಕ ಬರಹಗಾರರಾಗಿ ಅವರು ಜೀವನದ ವಾಹಿನಿಗಳನ್ನು ಪರೀಕ್ಷಿಸಿದರೆ, ವಿಮರ್ಶಕರಾಗಿ ಅವರು ಸಾಹಿತ್ಯವನ್ನು ಜೀವನಪರಿಸರದ ಹಿನ್ನೆಲೆಯಲ್ಲಿ ಪರೀಕ್ಷಿಸುತ್ತಾರೆ. ಹೀಗಾಗಿ ಅವರು ಇತರ ವಿಮರ್ಶಕರಿಗಿಂತ ಭಿನ್ನರಾಗಿದ್ದಾರೆ. ಅವರು ಆಸಕ್ತಿ ತೋರಿಸುವ ಪರಿಸರಗಳೆಂದರೆ ಸಾಮಾಜಿಕ, ಶೈಕ್ಷಣಿಕ ಮತ್ತು ಧಾರ್ಮಿಕ ಪರಿಸರಗಳೆ ಆಗಿವೆ. ಈ ಪರಿಸರಗಳನ್ನು ಪರೀಕ್ಷಿಸುವಾಗ ಅವರು ಅವುಗಳಿಗಷ್ಟೆ ಸೀಮಿತವಾಗಿರದೆ ಇಡೀ ಜೀವನದ ಮೇಲೆಯೆ ಬೆಳಕು ಚೆಲ್ಲುತ್ತಾರೆ. ಸಾಹಿತ್ಯ ವಿಮರ್ಶೆಯ ಕಾರ್ಯ 'ನಿಜವಾದ ಮತ್ತು ಹೊಸ ವಿಚಾರವಾಹಿನಿಗಳನ್ನು ಸೃಜಿಸಿ, ಅತ್ಯುತ್ತಮ ವಿಚಾರಗಳು ಉಳಿಯುವಂತೆ ಮಾಡುವುದು' ಎಂದು ಮಾಥ್ಯೂ ಆರ್ನಲ್ಡರು ಹೇಳಿದ ಆದರ್ಶವನ್ನೆ ಗೋವರ್ಧನರಾಮ ಅವರು ಪಾಲಿಸುತ್ತಿದ್ದರು.

ಸಾಕ್ಷರ ಜೀವನದಲ್ಲಿ ಗೋವರ್ಧನರಾಮ ಅವರು ಒಬ್ಬ ಸಾಹಿತ್ಯಾಭ್ಯಾಸಿಯ ಆದರ್ಶವನ್ನು ನಿರೂಪಿಸಿದ್ದಾರೆ. ವಿಚಾರವಾದಿಯಾಗಲಿ, ತತ್ವಜ್ಞಾನಿಯಾಗಲಿ ಇಲ್ಲವೆ ಲೇಖಕನಾಗಲಿ ಜೀವನವಾಹಿನಿಯ ದಂಡೆಯ ಮೇಲೆ ನಿಂತು ಅದರ ಏರಿಳಿತಗಳನ್ನು ಕುರಿತು ಚಿಂತನ ನಡೆಸುತ್ತಾನೆ. ಅಲ್ಲದೆ ಆತ ಇಂಥ ಚಿಂತನಪರ ಜೀವನವನ್ನು ನಡೆಸುವವರ ಬಗೆಗೆ ಸಹಿತ ಆಳವಾಗಿ ವಿಚಾರಿಸುತ್ತಾನೆ. ಆದುದರಿಂದ ವಿಮರ್ಶಕನೆಂದರೆ 'ಲಕ್ಷಣದೃಷ್ಟಾ' ಅಥವಾ 'ಲಕ್ಷಗಣಳನ್ನೂ ನಮೂನೆಗಳನ್ನೂ ಶೋಧಿಸುವ ದೃಷ್ಟಾರನಾಗಿರುತ್ತಾನೆ. ಗೋವರ್ಧನರಾಮ ಇಂಥ ಸಾಹಿತ್ಯ ವಿದ್ವಾಂಸರ ವಿಶಾಲವಾದ ಅಭಿರುಚಿಗಳ ಸಮಗ್ರ ವಿಶ್ಲೇಷಣೆಯನ್ನು ಕೊಡುತ್ತಾರೆ. ಅವರು ಕವಿ, ಪಂಡಿತ, ಜ್ಞಾನಿ—ಮುಂತಾದವರ ಜೀವನದ ಸಂಪೂರ್ಣ ಚಿತ್ರವನ್ನು ಕೊಡಲು ಪ್ರಯತ್ನಿಸಿದ್ದಾರೆ. ಇದು ಗೋವರ್ಧನರಾಮ ಅವರ ತೀಕ್ಷ್ಣಮತಿಗೆ ಮತ್ತು ವಿಶ್ಲೇಷಣಾತ್ಮಕ ಶಕ್ತಿಗೆ ಸಾಕ್ಷಿ.

ನವಲರಾಮ ಅವರ ಜೀವನಚರಿತ್ರೆಗೆ ಬರೆದ ಮುನ್ನುಡಿಯಲ್ಲಿ ಗೋವರ್ಧನರಾಮ ಅವರ ಸಾಹಿತ್ಯವಿಮರ್ಶೆಯ ಕಲ್ಪನೆ ಕಾಣಸಿಗುತ್ತದೆ. ವಿಮರ್ಶೆ ಕೇವಲ ತಪ್ಪುಗಳನ್ನೆಣಿಸುವುದಾದರೆ ಅದು ಸಾಹಿತ್ಯ ಸೃಷ್ಟಿಗಿಂತ ಎಷ್ಟೋಪಾಲು ಸರಳವೆಂದು ಹೇಳುತ್ತಾರೆ ಗೋವರ್ಧನರಾಮ. ವಿಮರ್ಶಕನಾದವನು ಅತ್ಯುತ್ತಮವಾದುದನ್ನೆ ಶೋಧಿಸಿ ಅದರ ಮುಖ್ಯನಿರ್ಣಯ ಮಾಡಬೇಕೆಂದು ಅವರು ಹೇಳುತ್ತಾರೆ. ಕಳಪೆಯಾದುದನ್ನು, ದೋಷಮುಕ್ತವಾದುದನ್ನೂ ವಿಮರ್ಶಕ ನಿರ್ಲಕ್ಷಿಸಬೇಕು. ಅದಲ್ಲದೆ ಅವರು ಹೇಳಿದಂತೆ 'ಸಂತೋಷದ ಭೋಜನ' ವನ್ನು ವ್ಯವಸ್ಥೆಗೊಳಿಸುವುದೆ ವಿಮರ್ಶಕನ ಗುರಿಯಾಗಿದೆ. ಇದಕ್ಕಾಗಿ ವಿಮರ್ಶಕನಾದವನು ಸೃಜನಾತ್ಮಕ ಕ್ರಿಯೆಯ ಜ್ಞಾನವನ್ನೂ, ರಸಾನುಭವ ಸಿದ್ಧಾಂತದ ಜ್ಞಾನವನ್ನೂ ಹೊಂದಿರಲೇಬೇಕು. ಅಂದರೆ ಮಾತ್ರ ಆತ ನಿಜವಾಗಿಯೂ ರಸಭರಿತವಾದುದನ್ನು ಮತ್ತು ನಿಜವಾಗಿಯೂ ಮಹತ್ತಾದುದನ್ನು ಶೋಧಿಸಿ, 'ಸಂತೋಷ ಭೋಜನ' ವನ್ನು ವ್ಯವಸ್ಥೆಪಡಿಸಿ ಇತರರನ್ನು ಇದರಲ್ಲಿ ಪಾಲ್ಗೊಳ್ಳಲು ಆಮಂತ್ರಿಸಬಲ್ಲ.

೧೮೯೬-೯೭ ರಲ್ಲಿ 'ಆಕಲ್ ನಾನ್ ಅಪನಮ್ ಆದಿ ನಾಟಕ' ಎಂಬ ತಮ್ಮ ಕಾಲದ ಮೊದಲ ನಾಟಕಗಳನ್ನು ಕುರಿತು ಗೋವರ್ಧನರಾಮ ಅವರು ಬರೆದರು. ಅದರಲ್ಲಿ ಅವರು ಒಬ್ಬ ಬರಹಗಾರನಲ್ಲಿ ಅತ್ಯುತ್ತಮವಾದುದನ್ನು ಕಂಡುಹಿಡಿಯುವುದೆ ವಿಮರ್ಶಕನ ಕರ್ತವ್ಯವೆಂದು ತಮ್ಮ ನಂಬುಗೆಯನ್ನು ಪುನಃ ಹೇಳುತ್ತಾರೆ. ಒಂದು ಸಾಹಿತ್ಯಕೃತಿಯಲ್ಲಿ ದೋಷಗಳು ಕಂಡುಬಂದರೂ ಅವುಗಳನ್ನು ವಿಚಾರಣೆಯ ದೃಷ್ಟಿಯಿಂದಮಾತ್ರ ನೋಡಬೇಕು. ಒಂದು ವೇಳೆ ಸಾಹಿತ್ಯಕೃತಿ ಸಂಪೂರ್ಣವಾಗಿ ಕಳಪೆಯಾಗಿದ್ದರೆ ಅದನ್ನು ವಿಮರ್ಶಿಸುವ ಗೋಜಿಗೆ ಹೋಗದೆ ಅದನ್ನು ಅದರಷ್ಟಕ್ಕೆ ಬಿಟ್ಟುಬಿಡಬೇಕು.

ಗೋವರ್ಧನರಾಮ ಅವರ ಕಲ್ಪನೆಯ ವಿಮರ್ಶಕರಾಗಿ ನಡೆಯುವುದು ಬಹಳ ದುಸ್ತರವಾದ ಕೆಲಸ. ಅವರೇ ಹೇಳುವಂತೆ ವಯಕ್ತಿಕ ಪಕ್ಷಪಾತಗಳು ಪ್ರಾಮಾಣಿಕ ವಿಮರ್ಶೆಯ ಮಾರ್ಗದಲ್ಲಿ ಅಡ್ಡಿಯಾಗುತ್ತವೆ. ವಿಮರ್ಶಕನಾದವನು ಕೇವಲ ಅಂತರ್ದೃಷ್ಟಿಯನ್ನು ಹೊಂದಿದ್ದರೆ ಸಾಲದು. ಅದರೊಂದಿಗೆ ಆತ ಬರಹಗಾರನ ಬಗೆಗೆ ಅಲ್ಲದೆ ಆತನ ಕೃತಿಯ ಬಗೆಗೂ ಅನುಕಂಪವುಳ್ಳವನಾಗಿರಬೇಕು. ಹೀಗಾದಾಗ ಮಾತ್ರ ಆತ ಆ ಕೃತಿಯಲ್ಲಿ ಅತ್ಯುತ್ತಮವಾದುದನ್ನು ಗುರುತಿಸಲು ಸಾಧ್ಯ. ವಿಮರ್ಶಕನಿಗೆ ಸಾಹಿತ್ಯಕ ಅಂತರ್ದೃಷ್ಟಿ ಮತ್ತು ಸಮಗ್ರವಾದ ಅಭಿರುಚಿ ಅತ್ಯಂತ ಅವಶ್ಯಕವಾಗಿದೆ.

ಒಂದು ಕೃತಿಯ ಕಥಾವಸ್ತುವನ್ನು ಸಂಗ್ರಹಿಸಿ ಹೇಳುವುದರ ಜೊತೆಗೆ ಆ ಕೃತಿಯಮೇಲೆ ಅವರೆಗೆ ಬಂದ ವಿಮರ್ಶೆಯನ್ನೂ ಅವಲೋಕಿಸುವುದು ವಿಮರ್ಶಕನ ಕರ್ತವ್ಯವಾಗಿದೆ ಎಂದು ಗೋವರ್ಧನರಾಮ ಅವರು ಹೇಳುತ್ತಾರೆ. ಅದಲ್ಲದೆ ಅವರ ಅಭಿಪ್ರಾಯದಲ್ಲಿ ವಿಮರ್ಶಕನ ಜೀವನಾನುಭವ ಆತನ ವಿಮರ್ಶಾ ದೃಷ್ಟಿಯನ್ನು ರೂಪಿಸುತ್ತದೆ. ಹೊಸ ಲೇಖಕರನ್ನು ಉತ್ತೇಜಿಸುವ ನವಲರಾಮ ಅವರ ಮನೋ

ಭಾವವನ್ನು ಅವರು ಇದಕ್ಕೆ ಉದಾಹರಣೆಯಾಗಿ ಕೊಡುತ್ತಾರೆ. ಸ್ವತಃ ನವಲರಾಮ ಅವರೆ ತಮ್ಮ ತಾರುಣ್ಯದಲ್ಲಿ ನಿರಾಶೆಗೊಂಡಿದ್ದರು. ಸ್ಥಳ ಬದಲಾವಣೆಯಾದಂತೆ ಇಲ್ಲವೆ ಅನುಭವ ಹೆಚ್ಚಿದಂತೆ ವಿಮರ್ಶಾ ಪ್ರಜ್ಞೆ ಹೆಚ್ಚೆಚ್ಚು ಬೆಳೆಯಬಲ್ಲುದೆಂದು ಅವರು ಹೇಳುತ್ತಾರೆ. ನವಲರಾಮ ಅವರು ಸೂರತ್ ಬಿಟ್ಟು ಅಹಮದಾಬಾದಿಗೆ ಹೋದಾಗ ನರ್ಮದ್ ಅವರ ಬಗೆಗಿದ್ದ ತಮ್ಮ ಅಭಿಪ್ರಾಯವನ್ನು ಬದಲಾಯಿಸಿದರು. ಹೀಗಾಗಿ ನರ್ಮದ ಅವರಿಗಿಂತ ಪ್ರೇಮಾನಂದರು ಹೆಚ್ಚು ಪ್ರತಿಭಾಶಾಲಿಯಾದ ಕವಿ ಯೆಂದು ಅರಿತರು. ೧೮೭೮ ರಲ್ಲಿ ಅವರು ರಾಜಕೋಟಕ್ಕೆ ಬಂದಾಗ ಅವರು ನರ್ಮದ ಅವರ ಬಗೆಗೆ ತಮಗಿದ್ದ ಅಭಿಪ್ರಾಯವನ್ನು ಬದಲಾಯಿಸಿ ಅವರನ್ನು 'ಮುಂದೆಯ ಕವಿ' ಯೆಂದು ಕರೆದರು. ೧೮೮೭ ರಲ್ಲಿ ನರ್ಮದ ಅವರನ್ನು 'ಯುಗ ಕವಿ' ಯೆಂದು ಕರೆದುದನ್ನು ಉದ್ಧರಿಸಿ ಗೋವರ್ಧನರಾಮ ಅವರು ಹೇಳುವುದೇನೆಂದರೆ ನವಲರಾಮ ಅವರು ನರ್ಮದ ಅವರಲ್ಲಿಯ ಉತ್ತಮ ಗುಣಗಳನ್ನು ರಸುತ್ತಿದ್ದರೂ ಅವರ ವಿಮರ್ಶಾ ಪ್ರಜ್ಞೆ ಪರಿಪಕ್ವವಾದುದಾಗಿದ್ದುದರಿಂದ ಅದು ಅತಿಶಯೋಕ್ತಿಯಿಂದ ಮುಕ್ತವಾಗಿತ್ತು ಎಂದು. ನರ್ಮದ ಅವರ ಬಗೆಗೆ ಬರೆಯುವ ರೀತಿಯಲ್ಲಿಯೆ ನವಲರಾಮ ಅವರಿಗೆ ಕವಿಯ ಬಗೆಗಿದ್ದ ಪ್ರೀತಿ ಒಡೆದು ಕಾಣುತ್ತಿತ್ತೆಂದು ಗೋವರ್ಧನರಾಮ ಹೇಳುತ್ತಾರೆ. ಕವಿಯ ಬಗೆಗಿದ್ದ ಈ ಅಪಾರ ಪ್ರೀತಿಯೊಂದನ್ನು ಬಿಟ್ಟರೆ, ಉಳಿದೆಲ್ಲ ವಿಷಯದಲ್ಲಿ ನವಲರಾಮ ಅವರು ನರ್ಮದ ಅವರ ನಿಜವಾದ ವಿಮರ್ಶಕರಾಗಿದ್ದರು. ಹೀಗೆ ವಿಮರ್ಶೆಯ ವಿಮರ್ಶೆ ಮಾಡುವುದು ಗೋವರ್ಧನರಾಮ ಅವರ ವಿಶಾಲವಾದ ಜೀವನದೃಷ್ಟಿ, ಪಾಂಡಿತ್ಯ, ಪರಿಪಕ್ವತೆ ಮತ್ತು ಅಂತರ್ದೃಷ್ಟಿಗೆ ಸಾಕ್ಷಿ.

ಈ ಮೊದಲೆ ನೋಡಿದಂತೆ ಗೋವರ್ಧನರಾಮ ಅವರು ಯಾವಾಗಲೂ ಸಾಹಿತ್ಯವನ್ನು ಜೀವನ, ಸಮಾಜ ಮತ್ತು ಸಂಸ್ಕೃತಿಗಳ ಹಿನ್ನೆಲೆಯಲ್ಲಿಯೆ ನೋಡಲು ಪ್ರಯತ್ನಿಸಿದರು. ಈ ತರಹದ ದೃಷ್ಟಿಯನ್ನು ಕವಿ **ದಯಾರಾಮನೊ ಅಕ್ಷರ ದೇಹ, ದಿ ಕ್ಲಾಸಿಕಲ್ ಪೊಯೆಟ್ಸ್ ಆಫ್ ಗುಜರಾಥ್ ಅ್ಯಂಡ್ ದೆರ್ ಇನ್ ಫ್ಲುಯೆನ್ಸ್ ಆನ್ ಸೊಸೈಟಿ ಅಂಡ್ ಮಾರಲ್ಸ್** ಮತ್ತು **ಗುಜರಾಥನಾ ಪ್ರಾಚೀನ ಸಾಹಿತ್ಯನಾ ಇತಿಹಾಸ್ನು ದಿಗ್ದರ್ಶನ್** ಎಂಬ ಪುಸ್ತಕದಲ್ಲಿ ವಿಶೇಷವಾಗಿ ಕಂಡುಬರುತ್ತದೆ. ಗೋವರ್ಧನರಾಮ ಅವರ ವಿಮರ್ಶಾವಲೋಕನ ನಂತರದ ವಿಮರ್ಶಕರಿಗೆ ಸಾಕಷ್ಟು ಸಂಶೋಧನ ಸಾಮಗ್ರಿಯನ್ನೊದಗಿಸಿತು. ಅವರ ಪ್ರಕಾರ ಸಾಹಿತ್ಯ, ಚರಿತ್ರೆ, ಅಥವಾ ಸಂಸ್ಕೃತಿ ಚರಿತ್ರೆ ಅಥವಾ ಚರಿತ್ರೆಯೆಂದರೆ ಅದು ಮೂಲತಃ ವಿಚಾರಗಳ ಚರಿತ್ರೆಯೆ ಆಗಿತ್ತು. ಅವರ ನಂತರ ಬಂದ ವಿಮರ್ಶಕರು ಗೋವರ್ಧನರಾಮ ಅವರ ದೃಷ್ಟಿಯನ್ನು ಯಾವಾಗಲೂ ಅನುಸರಿಸಲಿಲ್ಲ. ನರಸಿಂಹ ಮೀರಾ, ಅಖೊ. ಪ್ರೇಮಾನಂದ, ಶ್ಯಾಮಲ ಮತ್ತು ದಯಾರಾಮ ಇವರೆಲ್ಲರ ಸಾಹಿತ್ಯದ ಬಗೆಗೆ ಅವರ ಲೇಖನಗಳು ಅವರೊಬ್ಬ ಶ್ರೇಷ್ಠಮಟ್ಟದ ವಿಮರ್ಶಕರೆಂಬುದನ್ನು ಸಿದ್ಧಮಾಡಿ ತೋರಿಸುತ್ತವೆ. ಅದರಲ್ಲಿಯೂ ಶ್ಯಾಮಲ ಅವರನ್ನು ಕುರಿತ ಲೇಖನ ಈ ಎಲ್ಲ ವಿಮರ್ಶಾ ಲೇಖನಗಳಲ್ಲಿಯೇ ಶ್ರೇಷ್ಠವಾದದ್ದು.

ಗೋವರ್ಧನರಾಮ ಅವರು ಹೇಳಿದಂತೆ, ದಯಾರಾಮ ಅವರು ಬೇರೆ ಬೇರೆ ಧರ್ಮಗಳ ಸಂಪ್ರದಾಯಗಳನ್ನನುಸರಿಸುವ ಕವಿಗಳು ಮತ್ತು ಪಂಡಿತರ ಯುಗದಲ್ಲಿ ಜೀವಿಸಿದ್ದುದರಿಂದ ಇವೆಲ್ಲವುಗಳ ಕಡೆಗೆ ಅವರ ಲಕ್ಷ್ಯ ಹರಿಯುತ್ತಿತ್ತು. ಆದರೆ ವೇದಾಂತ, ಯೋಗಮಾರ್ಗ ಮತ್ತು ಶಾಕ್ತಪಂಥ ಮುಂತಾದುವುಗಳನ್ನನುಸರಿಸುವ ಕವಿಗಳು ಮತ್ತು ಧಾರ್ಮಿಕ ಮುಖಂಡರ ಮಧ್ಯದಲ್ಲಿದ್ದರೂ ವೈಷ್ಣವ ಕವಿಯಾದ ದಯಾರಾಮ ಅವರು ಸಾಧ್ಯವಾದಷ್ಟು ವಸ್ತುನಿಷ್ಠರಾಗಿರಲಿಕ್ಕೆ ಪ್ರಯತ್ನಿಸಿದರು. ಹೀಗಾಗಿ ಅವರ ಪ್ರಾಮಾಣಿಕತೆ ಅತ್ಯಂತ ಗಮನಾರ್ಹವಾಗಿದೆ. ಅವರ ಕೃತಿಗಳೆಲ್ಲ ಪ್ರೇಮಮಯ ಭಕ್ತಿಯಿಂದ ಪ್ರೇರಿತವಾಗಿವೆ. ಅವೆಲ್ಲ ಆ ಕಾಲದ ಮತೀಯ ಕಲಹಗಳನ್ನು ಮೀರಿನಿಂತಿದ್ದವು. ದಯಾರಾಮ ಅವರ ಕೃತಿಗಳ ಮೇಲೆ ಗಮನವನ್ನು ಕೇಂದ್ರೀಕರಿಸಿದ ಗೋವರ್ಧನರಾಮ ಅವರ ಅಂತರ್ದೃಷ್ಟಿ ಅಭಿನಂದನಾರ್ಹವಾದದ್ದು.

**ದಯಾರಾಮನೊ ಅಕ್ಷರ ದೇಹದಲ್ಲಿ** ದಯಾರಾಮ ಅವರ ಕೃತಿಗಳ ರಸಾನುಭವಕ್ಕೆ ಅಡ್ಡಿಯಾಗುವ ಅವರ ಜೀವನದ ಅನೇಕ ಘಟನೆಗಳನ್ನು ಹಾರಿಸಿ ಅವರ ಕೃತಿಗಳ ಮೇಲೆಯೇ ಹೆಚ್ಚು ಗಮನ ಹರಿಸುತ್ತಾರೆ. ಅದರಂತೆ ನರಸಿಂಹ ರಾವ್ ಅವರ **ಕುಸುಮಮಾಲಾ** ಎಂಬ ಪುಸ್ತಕದ ತಮ್ಮ ಖಾಸಗಿ ಪ್ರತಿಯ ಪುಟಗಳ ಬದಿಯಲ್ಲಿ ಬರೆದ ಟಿಪ್ಪಣಿಗಳು ಗೋವರ್ಧನರಾಮ ಅವರ ಪಾಂಡಿತ್ಯ ಮತ್ತು ಅಂತರ್ದೃಷ್ಟಿಗೆ ಸಾಕ್ಷಿಯಾಗಿವೆ. ಅವರು ತಮ್ಮ **ಸರಸ್ವತಿಚಂದ್ರ** ಕಾದಂಬರಿಯಲ್ಲಿ ನರಸಿಂಹರಾವ್ ಅವರ 'ಚಂದಾ' ಎಂಬ ಕವಿತೆಯನ್ನು ಉದ್ಧರಿಸುತ್ತಾರೆ. ಆ ಪದ್ಯದಲ್ಲಿ ಅವರು ಅನೇಕ ಮನೋರಂಜಕ ಕಲ್ಪನೆಗಳನ್ನು ಕಂಡರು. ಒಂದು ಕೃತಿಯಲ್ಲಿ ಶ್ರೇಷ್ಠವಾದುದನ್ನು ಹೇಗೆ ಕಂಡುಹಿಡಿಯಬೇಕು ಮತ್ತು ಅವರ ಆಳಕ್ಕೆ ಹೇಗೆ ಇಳಿಯಬೇಕೆಂಬುದಕ್ಕೆ ಅವರ ಟಿಪ್ಪಣಿಗಳು ಉದಾಃಹರಣೆಗಳಾಗಿವೆ. ಆದರೆ ಅವರು ಇಂಥ ಪದ್ಯಗಳ ವಿವರವಾದ ವಿಶ್ಲೇಷಣೆ ಮಾಡದಿದ್ದುದು ದುರ್ದೈವದ ಸಂಗತಿ. ಒಂದು ವೇಳೆ ಅವರು ಇದನ್ನು ಮಾಡಿದ್ದರೆ ತೊಂಭತ್ತು ವರುಷಗಳ ಹಿಂದೆಯೆ ಗುಜರಾಥಿ ಸಾಹಿತ್ಯದಲ್ಲಿ ಪ್ರಾಯೋಗಿಕ ವಿಮರ್ಶೆ ಮತ್ತು ಪಥ್ಯ ವಿಮರ್ಶೆ ಪ್ರಾರಂಭವಾಗುತ್ತಿತ್ತು.

ಹಳೆಯ ಮತ್ತು ನವ್ಯ ವಿಮರ್ಶಕರ ನಡುವೆ ಬೆಳೆಯುತ್ತಿರುವ ಬಿರುಕನ್ನು ಗೋವರ್ಧನರಾಮ ಅವರು ಗಮನಿಸಿದ್ದರು. ನರಸಿಂಹರಾವ್ ಅವರು ರೂಪಾಂತರಿಸಿದ ಶೆಲ್ಲಿಯ 'To a Cloud' ಎಂಬ ಕವಿತೆಯನ್ನು ಓದಿ ಅದರ ರಸಾಸ್ವಾದನೆಯನ್ನು ಮಾಡಿಕೊಳ್ಳಲು ಮತ್ತು ಅದನ್ನು ಅರ್ಥಮಾಡಿಕೊಳ್ಳಲು ಅಸಮರ್ಥರಾಗಿದ್ದರು. ಅವರ ಕಾಲದ ಬರಹಗಾರರೆಲ್ಲ ಪ್ರಾಚೀನ ಗುಜರಾಥಿ ಸಾಹಿತ್ಯದ ಮೇರುಕೃತಿಗಳನ್ನೆಲ್ಲ ಅತ್ಯಂತ ಆಳವಾಗಿ ಅಭ್ಯಸಿಸಬೇಕೆಂದು ಗೋವರ್ಧನರಾಮ ಹೇಳುತ್ತಿದ್ದರು. ಇದಕ್ಕೆ ಅವರು ಮೆಕಾಲೆ Paradise Lost ಕಾವ್ಯದ ಹನ್ನೊಂದು ಸಾವಿರ ಸಾಲುಗಳನ್ನು ಕಂಠಪಾಠ ಮಾಡಿದ್ದುದನ್ನು ಉದಾಹರಣೆಯಾಗಿ ಕೊಡುತ್ತಿದ್ದರು. ಇಂಥ ಶ್ರದ್ಧಾಪೂರ್ವಕ ಮಾಡಿದ ಅಧ್ಯಯನದಿಂದಲೆ ಹಳೆಯದು ಮತ್ತು ಹೊಸದರ ನಡುವಿದ್ದ ಅಂತರವನ್ನು ತುಂಬಲು ಸಾಧ್ಯವಾಗುತ್ತಿತ್ತು. ೧೯೦೫ ರಲ್ಲಿ ನಡೆದ

ಗುಜರಾಥಿ ಸಾಹಿತ್ಯ ಸಮ್ಮೇಲನದ ಪ್ರಥಮ ಸಭೆಯಲ್ಲಿ ಅಧ್ಯಕ್ಷಸ್ಥಾನದಿಂದ ಮಾತನಾಡುತ್ತ ಹೇಳಿದುದೇನೆಂದರೆ ಗುಜರಾಥಿ ಬರಹಗಾರರಲ್ಲಿ ಕೆಲವರು ಮಾತ್ರ ಶೆಲ್ಲಿ ಮತ್ತು ವರ್ಡ್ಸ್‌ವರ್ಥ ಅವರ ಕವನಗಳನ್ನು ರಸಾಸ್ವಾದಿಸಬಲ್ಲವರಾಗಿದ್ದರು. ಗುಜರಾಥಿ ಸಾಹಿತ್ಯ ನಿಜವಾಗಿ ಶ್ರೀಮಂತವಾಗಬೇಕಾದರೆ ಶೆಲ್ಲಿ ಮತ್ತು ವರ್ಡ್ಸ್‌ವರ್ಥ ಅವರ ಕಾವ್ಯವನ್ನು ಗುಜರಾಥಿಗೆ ಅನುವಾದಿಸಬೇಕು. ಈ ಕಾರ್ಯಕ್ಕೆ ಅವಶ್ಯವಿರುವ ಭಾಷಾ ಸಾಮಗ್ರಿಯನ್ನು ಅಖೊ ಮತ್ತು ನರಸಿಂಹ ಮೆಹತಾ ಅವರಿಂದ ಪಡೆದುಕೊಳ್ಳಬೇಕು. ಪ್ರಾಚೀನ ಗುಜರಾಥಿ ಕಾವ್ಯ ಮತ್ತು ಶೆಲ್ಲಿ ಮತ್ತು ವರ್ಡ್ಸ್‌ವರ್ಥರಂಥ ರಮ್ಯಕವಿಗಳ ಬಗೆಗೆ ಆಧುನಿಕ ಗುಜರಾಥಿಗಳಿಗಿರುವ ಪ್ರೀತಿ—ಇವುಗಳ ನಡುವೆ ಸಂಬಂಧವನ್ನು ಸ್ಥಾಪಿಸಿ ನೋಡುವ ರೀತಿ ಗೋವರ್ಧನರಾಮ ಅವರ ದೃಷ್ಟಿವೈಶಾಲ್ಯಕ್ಕೆ ಸಾಕ್ಷಿಯಾಗಿದೆ. ಅದೇ ಉಪನ್ಯಾಸದಲ್ಲಿ ಅವರು ಪ್ರಾಯೋಗಿಕತೆಯ ಹುಮ್ಮಸ್ಸಿನಲ್ಲಿ ಸಾಹಿತ್ಯ ಸಂಪ್ರದಾಯದ ಮಹತ್ವವನ್ನು ಮರೆಯಬಾರದೆಂದು ಒತ್ತಿಹೇಳಿದರು.

ಗೋವರ್ಧನರಾಮ ಅವರು ತಮ್ಮ ಹಿಂದಿನ ಮತ್ತು ಸಮಕಾಲೀನ ಸಾಹಿತಿಗಳ ಬಗೆಗೆ ಬರೆದ ವಿಮರ್ಶೆ ಅವರ ಅಭಿರುಚಿಯ ಸಮಗ್ರತೆ, ಮೌಲ್ಯನಿರ್ಣಯ ಸಾಮರ್ಥ್ಯ, ಒಂದು ಕೃತಿಯಲ್ಲಿರುವ ನಿಜವಾದ ಕಲಾತ್ಮಕತೆಯನ್ನು ಗುರುತಿಸುವ ಜಾಣ್ಮೆ—ಇವೆಲ್ಲವುಗಳಿಗೆ ನಿದರ್ಶನವಾಗಿದೆ. ಅಲ್ಲದೆ ಪ್ರಾಚೀನ ಸಾಹಿತ್ಯದ ಮೇಲಿರುವ ಪ್ರೇಮ ಮತ್ತು ಅಭಿವ್ಯಕ್ತಿಯ ಸರಳತೆಗಳಿಗೂ ಕನ್ನಡಿಯಾಗಿದೆ. ಇದು ಅವರು ನರ್ಮದ ಮತ್ತು ದಲಪತ್‌ರಾಮ ಅವರ ಕಾವ್ಯವನ್ನು ಕುರಿತು ಬರೆದ ವಿಮರ್ಶೆಯಲ್ಲಿ ವ್ಯಕ್ತವಾಗುತ್ತದೆ. ಅವರು ನರ್ಮದ ಅವರ ಕಾವ್ಯದಲ್ಲಿರುವ ಶಕ್ತಿ ಮತ್ತು ತೀವ್ರತೆಗಳನ್ನು ಗುರುತಿಸಿದ್ದಾರೆ. ಆದರೆ ಇವೆರಡೂ ಲಕ್ಷಣಗಳು ಕವಿಯ ಉತ್ಸಾಹದಿಂದ ಹೊರಹೊಮ್ಮುದುವೆ ಹೊರತು ಕಲಾತ್ಮಕ ಪ್ರಜ್ಞೆಯಿಂದುಂಟಾದುವಲ್ಲ. ಅವರು ನರ್ಮದ ಅವರ ಕಾವ್ಯದಲ್ಲಿ ನಿರೀಕ್ಷಣೆ ಮತ್ತು ವಿಚಿತ್ರ ಕಲ್ಪಕತೆಯ ಲಯವನ್ನು ಕಂಡುಹಿಡಿದಿದ್ದಾರೆ. ಈ ಕಾವ್ಯದ ಯಶಸ್ಸಿಗೆ ಕಾರಣ ಅದರ ಸಮಕಾಲೀನತೆಯೆ ಆಗಿದೆ. ಗೋರ್ಧನರಾಮ ಅವರು ನರ್ಮದ ಅವರ ನಂತರದ ಕಾವ್ಯವನ್ನು ಅನೌಚಿತ್ಯವೆಂದು ತಳ್ಳಿಹಾಕುತ್ತಾರೆ. ಅವರು ದಲಪತ್‌ರಾಮ ಅವರ ಕಾವ್ಯದಲ್ಲಿ ತಿಳಿಯಾದ ಶೈಲಿ ಮತ್ತು ಅಭಿವ್ಯಕ್ತಿಯನ್ನು ಗುರುತಿಸಿದ್ದಾರೆ. ದಲಪತ್‌ರಾಮ ಅವರ ಕಾವ್ಯದ ಯಶಸ್ಸಿಗೆ ಕಲ್ಪನೆ ಮತ್ತು ಆಶ್ಚರ್ಯಗಳೆ ಕಾರಣವಾಗಿದ್ದು ಅವು ಅದರ ಮಿತಿಯನ್ನೂ ಸೂಚಿಸುತ್ತವೆ. ಏಕೆಂದರೆ ಈ ಕಾವ್ಯವನ್ನಾಸ್ವಾದಿಸಬೇಕಾದರೆ ಓದುಗರಿಗೆ ಅದ್ಭುತ ರಸಾನುಭವದ ಅಭಿರುಚಿ ಇರಬೇಕಾಗುತ್ತದೆ. ಆದರೆ ಅದು ಕೊನೆಯವರೆಗೆ ಉಳಿಯುವುದಿಲ್ಲವೆಂದು ಗೋವರ್ಧನರಾಮ್ ಹೇಳುತ್ತಾರೆ.

ನವಲ್‌ರಾಮ ಅವರು ಕಾವ್ಯವನ್ನು ಬರೆದಿದ್ದರೆ ಸಾಕಷ್ಟು ಜನಪ್ರಿಯರಾಗುತ್ತಿದ್ದರೆಂದು ಗೋವರ್ಧನರಾಮ ನಂಬಿದ್ದರು. ಅವರು ಕಾವ್ಯ ಮತ್ತು ವಿಮರ್ಶೆಗಳು ಎರಡು ವಿಭಿನ್ನವಾದ ಶಕ್ತಿಗಳಾಗಿದ್ದು ಎರಡೂ ಸಮಪ್ರಮಾಣದಲ್ಲಿ ಕೂಡಿರಲಾರವೆಂಬುದಕ್ಕೆ ನರ್ಮದ ಮತ್ತು ನವಲರಾಮ ಅವರ ಉದಾಹರಣೆಗಳನ್ನು ಕೊಡುತ್ತಾರೆ.

ಗೋವರ್ಧನರಾಮ ಅವರು ಗುಜರಾಥಿ ನಾಟಕವನ್ನು ಸಂಸ್ಕೃತ ಮತ್ತು ಇಂಗ್ಲಿಷ್ ನಾಟಕ ಸಾಹಿತ್ಯಗಳ ಹಿನ್ನೆಲೆಯಲ್ಲಿ ವಿವೇಚಿಸಿದ್ದಾರೆ. ಅವರ ಪ್ರಕಾರ ರಾಂಛೋದಭಾಯಿ ಅವರ ನಾಟಕಗಳ ಹಿಂದಿನ ಪ್ರೇರಕಶಕ್ತಿ ರಂಗಭೂಮಿಯಾಗಿದ್ದಿತೆ ಹೊರತು ನಾಟಕ ಸಾಹಿತ್ಯವಾಗಿರಲಿಲ್ಲ. ಪ್ರೇಕ್ಷಕರನ್ನೂ ವಿಮರ್ಶಕರನ್ನೂ ಒಟ್ಟಿಗೆ ಸಮಾಧಾನಪಡಿಸುವ ನಾಟಕ ಒಂದೂ ಬಂದಿಲ್ಲವೆಂದು ಗೋವರ್ಧನರಾಮ ಅವರು ವಿಷಾದಿಸಿದರು.

ಹಾಸ್ಯದ ಬಗೆಗೆ ಗೋವರ್ಧನರಾಮ ಅವರು ಹೇಳಿರುವ ಮಾತುಗಳು ನವಲರಾಮ ಅವರ **ಭಾತನುನ್ ಭೋಪಾಲುನ್** ಎಂಬ ಕೃತಿಯನ್ನಾಧರಿಸಿದವಾಗಿವೆ. ಅವರ ಪ್ರಕಾರ ಹಾಸ್ಯ ಉದಾತ್ತವಾದ ರಸಗಳಲ್ಲಿ ಒಂದಲ್ಲ. ಮತ್ತು ಅದು ಶ್ರೇಷ್ಠ ಮಟ್ಟದ ಕವಿಗಳಲ್ಲಿ ಕಂಡುಬರುವುದಿಲ್ಲ. ಅತ್ಯಂತ ಉತ್ತಮಮಟ್ಟದ ಹಾಸ್ಯವನ್ನುಂಟು ಮಾಡುವುದು ಅತೀ ಕಠಿಣವಾದ ಕೆಲಸವೆಂದೂ ಅದರಲ್ಲಿ ಯಶಸ್ವಿಯಾಗಬೇಕಾದರೆ ಬುದ್ಧಿ, ಹಾಸ್ಯಪ್ರವೃತ್ತಿ ಮತ್ತು ವಿಶಾಲವಾದ ಜೀವನಾನುಭವಗಳನ್ನು ಸಮರಸಗೊಳಿಸಿಕೊಂಡಿರಬೇಕಾಗುತ್ತದೆ ಎಂದೂ ಗೋವರ್ಧನರಾಮ ಅವರು ನಂಬಿದ್ದರು. ಕೆಳವರ್ಗದ ಪಾತ್ರಗಳನ್ನು ಕಲಾತ್ಮಕವಾಗಿ ಸಾಹಿತ್ಯಕೃತಿಗಳಲ್ಲಿ ಚಿತ್ರಿಸಿದುದಕ್ಕಾಗಿ ಅವರು ನವಲರಾಮ ಅವರನ್ನು ಮೆಚ್ಚಿಕೊಳ್ಳುತ್ತಾರೆ. ಆದರೆ ನವಲರಾಮ ಅವರು ಇನ್ನೂ ಪರಿಶ್ರಮಪಟ್ಟಿದ್ದರೆ ಚೆನ್ನಾಗಿರುತ್ತಿತ್ತೆಂದು ಹೇಳುತ್ತಾರೆ, ನವಲರಾಮ ಅವರು ತಮ್ಮಲ್ಲಿ ಹುದುಗಿದ್ದ ಶಕ್ತಿಯನ್ನೆಲ್ಲ ಉಪಯೋಗಿಸಿಕೊಳ್ಳಲಿಲ್ಲವೆಂದು ಗೋವರ್ಧನರಾಮ ವಿಷಾದಿಸುತ್ತಾರೆ. **ಭಾತನುನ್ ಭೋಪಾಲುನ್** ಕೃತಿಯಲ್ಲಿ ದಕ್ಷಿಣ ಗುಜರಾಥಿನ ಸೂರತ್ ಜಿಲ್ಲೆಯ ಪರಿಸರವನ್ನುಪಯೋಗಿಸಿದ್ದು ಅತ್ಯಂತ ಉಚಿತವಾದದ್ದೆಂದು ಗೋವರ್ಧನರಾಮ ಹೇಳುತ್ತಾರೆ. ಏಕೆಂದರೆ ಅವರ ಅಭಿಪ್ರಾಯದಲ್ಲಿ ಉತ್ತರ ಗುಜರಾಥಿನ ಜನರಿಗೆ ದಕ್ಷಿಣದವರಷ್ಟು ಹಾಸ್ಯಪ್ರಜ್ಞೆಯಿಲ್ಲವಂತೆ. ಅಲ್ಲದೆ ಅವರು ನಾಟಕದ ರೂಪಾಂತರ ಮಾಡಿದುದರ ತಂತ್ರ ಮತ್ತು ಔಚಿತ್ಯಗಳನ್ನೂ ಚರ್ಚಿಸುತ್ತಾರೆ. ಮೋಲಿಯರ್‌ನ ನಾಟಕದ ಮೇಲೆ ಆಧಾರಿತವಾದ **ಭಾತನುನ್ ಭೋಪಾಲುನ್** ನಾಟಕ ಮಹಿಪತರಾಮ ಅವರು ಮಾಡಿದ ವಾಶಿಂಗ್ಟನ್ ಐರ್ವಿಂಗ್‌ನ **ರಿಪ್ ವ್ಯಾನ್ ವಿಂಕಲ್** ಮತ್ತು ಗೋಲ್ಡ್‌ಸ್ಮಿತ್‌ನ **ಹರ್ಮಿಟ್** ನಾಟಕಗಳ ರೂಪಾಂತರಗಳಿಗಿಂತ ಹೆಚ್ಚು ಜೀವಂತವಾಗಿವೆ.

ಉತ್ತರ ಗುಜರಾಥಿನಲ್ಲಿ ಹಾಸ್ಯದ ಅಭಾವವಿದೆಯೆಂದು ಗೋವರ್ಧನರಾಮ ಅವರು ಹೇಳುವುದು ಅಷ್ಟೊಂದು ಸರಿಯೆನಿಸುವುದಿಲ್ಲ. ಪ್ರೇಮಾನಂದದಲ್ಲಾಗಲಿ ಅಥವಾ ಪ್ರಾಚೀನ ಸಾಹಿತ್ಯದಲ್ಲಾಗಲಿ ಇರುವ ಹಾಸ್ಯವನ್ನು ಗುರುತಿಸದೆ ಹೋದದ್ದು ಗೋವರ್ಧನರಾಮ ಅವರಲ್ಲಿಯೆ ಹಾಸ್ಯ ಪ್ರಜ್ಞೆಯ ಅಭಾವವನ್ನು ಸೂಚಿಸುತ್ತದೆ. **ಭಾತನುನ್ ಭೋಪಾಲುನ್** ದಂಥ ರೂಪಾಂತರ ನಾಟಕದ ಬಗೆಗೆ ಗೋವರ್ಧನರಾಮ ಬರೆದುದು ಹೊಸ ಪ್ರತಿಭಾವಂತ ಲೇಖಕರು ಬರಲೆಂಬ ಅವರ ಆಶೆಯನ್ನು ತೋರಿಸುತ್ತದೆ. ಉದಯೋನ್ಮುಖ ಲೇಖಕರಿಗೆ ಅನುವಾದ ಮಾಡುವ ಅನುಭವ ಅತ್ಯವಶ್ಯಕವಾದ ಸಾಧನೆಯೆಂದು ಅವರು ಹೇಳುತ್ತಾರೆ.

ಗೋವರ್ಧನರಾಮ ಅವರು ಗುಜರಾಥಿ ಅಕ್ಷರ ಸಮಸ್ಯೆ ಮತ್ತಿತರ ವಿಷಯಗಳನ್ನು ಕುರಿತು ಲೇಖನಗಳನ್ನು ಬರೆದಿದ್ದಾರೆ. ಅವರು ಒಂದು ಭಾಷಾಚರಿತ್ರೆ ಹಾಗೂ ಭಾಷೆಯ ವ್ಯಾಕರಣಗಳೆರಡೂ ಒಂದರಿಂದೊಂದು ಭಿನ್ನವಾಗಿವೆಯೆಂದು ಹೇಳುತ್ತಾರೆ. ಭಾಷೆ ಗಟ್ಟಿಕೊಳ್ಳುವಿಕೆ ಒಂದು ಕಲೆಯಾಗಿದೆಯೆ ಹೊರತು ಭಾಷಾವಿಜ್ಞಾನದೊಂದಿಗೆ ಆದರ ಸಂಬಂಧವೇನೂ ಇಲ್ಲವೆಂದು ಅವರ ನಂಬುಗೆ. ಈ ವಿಷಯುವನ್ನು ಕುರಿತ ಆವರ ಲೇಖನಗಳು ಅಪೂರ್ಣವಾದುದರಿಂದ ಅವರ ವಿಚಾರಗಳ ಸಮಗ್ರ ವಿಮರ್ಶೆ ಮಾಡುವುದು ಸಾಧ್ಯವಿಲ್ಲ.

ಯಾವುದೆ ಒಬ್ಬ ಬರಹಗಾರನ ಜೀವನ ಮತ್ತು ಸಾಹಿತ್ಯ ಒಂದರಿಂದೊಂದು ಬೇರೆಯಾಗಿರಲಿಕ್ಕೆ ಸಾಧ್ಯವೆಂದು ಗೋವರ್ಧನರಾಮ ಅವರು ನಂಬಿದ್ದರು. ಸಾಹಿತಿ ಚಿಂತನೆಗೈದುದು ಮತ್ತು ಅಭಿವ್ಯಕ್ತಿಸಿದುದು ಮಾತ್ರ ನಿಜವಾಗಿ ಮಹತ್ವಪೂರ್ಣವಾದದ್ದೆಂದು ಅವರು ಹೇಳುತ್ತಾರೆ. ಉದಾಹರಣೆಗೆ ದಯಾರಾಮ ತಮ್ಮ ಜೀವನ ನಡೆಸಿದ ರೀತಿಗಿಂತ ಭಿನ್ನವಾದ ರೀತಿಯಲ್ಲಿ ಚಿಂತನಗೈದು ತಮ್ಮ ಸಾಹಿತ್ಯವನ್ನು ರಚಿಸಿದರು.

ಕಾದಂಬರಿ ಎಂಬ ಸಾಹಿತ್ಯ ಪ್ರಕಾರವನ್ನು ಕುರಿತು ಬರೆಯುತ್ತ ಆವರು ಹೇಳುವ ಸಿದ್ಧಾಂತವೇನೆಂದರೆ ಕಾದಂಬರಿಯು ಚರಿತ್ರೆಯ ಕಲ್ಪನೆಯನ್ನುಂಟುಮಾಡಬೇಕೆಂಬುದು. ಹೊಸ ಅಂಶಗಳ ಮೊತ್ತವನ್ನು ಹೊಂದಿರುವುದರಿಂದ ಕವನವು ಕಥೆಗಿಂತ ಭಿನ್ನವಾಗುತ್ತದೆ. ಗಪದ್ಯವಿರಲಿಕ್ಕೆ ಸಾಧ್ಯವೆಂದು ಹೇಳಿದರೂ ಗೋವರ್ಧನರಾಮ ಅವರು ಪದ್ಯ ಮತ್ತು ಚರಣಗಳ ಮಧ್ಯದಲ್ಲಿರುವ ಅಂತರವನ್ನು ಮರೆತಿರಲಿಲ್ಲ. ಕಥೆ ಮತ್ತು ಕಾವ್ಯ, ಅವರ ಅಭಿಪ್ರಾಯದಲ್ಲಿ ಮೌಖಿಕ ಸಾಹಿತ್ಯ ಪ್ರಕಾರಗಳಾಗಿವೆ. ಇವುಗಳಿಗೆ ದೃಶ್ಯದ ಅಂಶವನ್ನು ಸೇರಿಸಿದರೆ ಅವು ನಾಟಕವೆಂಬ ಸಾಹಿತ್ಯ ಪ್ರಕಾರವಾಗುತ್ತವೆ. ಕಾವ್ಯವು ಎಲ್ಲರಿಗೂ ಸೇರುತ್ತದೆಯೊ ಅಥವಾ ಪಂಡಿತರಾದ ಕೆಲವರಿಗೆ ಮಾತ್ರ ಸೇರುತ್ತದೆಯೊ ಎಂಬ ಆಧಾರದ ಮೇಲೆ ಗೋವರ್ಧನರಾಮ ಅವರು ಕಾವ್ಯವನ್ನು ಎರಡು ಭಾಗಗಳಲ್ಲಿ ವಿಂಗಡಿಸುತ್ತಾರೆ. ನೈತಿಕ ಬೋಧನೆ ಸಾಹಿತಿಯ ಆದ್ಯ ಕರ್ತವ್ಯವೆಂದು ನಂಬಿದ ಗೋವರ್ಧನರಾಮ ಅವರು ಎಲ್ಲರಿಗೂ ಹಿಡಿಸುವ ಕಾವ್ಯವನ್ನು ಮೆಚ್ಚಿಕೊಂಡಿದ್ದರು. ನಾಟಕ ಸಾಹಿತ್ಯದಲ್ಲಿ ನೈತಿಕ ಬೋಧನೆ ನೇರವಾಗಿರಬಾರದೆಂದು ಹೇಳಿ ನೀತಿಯನ್ನು ಕಲೆಯ ಆವರಣದಿಂದ ಮುಚ್ಚಿತೋರಿಸಿರುವ **ಪ್ರಬೋಧ ಚಂದ್ರೋದಯ**ವೆಂಬ ನಾಟಕವನ್ನು ಉದಾಹರಣೆಯಾಗಿ ಕೊಡುತ್ತಾರೆ. ಪ್ರೇಕ್ಷಕರ ಗಮನವನ್ನು ಹಿಡಿದಿಡುವುದು ನಾಟಕಕಾರನ ಕರ್ತವ್ಯವಾದುದರಿಂದ ನಾಟಕದಲ್ಲಿ ಕುತೂಹಲಕಾರಕವಾದ ಅಂಶವನ್ನು ಸ್ವಲ್ಪಮಟ್ಟಿಗೆ ತರುವುದು ಅವಶ್ಯವೆಂದು ಗೋವರ್ಧನರಾಮ ಹೇಳುತ್ತಾರೆ. ನಾಟಕದಲ್ಲಿ ಕಾವ್ಯಾಂಶವನ್ನು ತಂದರೂ ಅದು ಎಲ್ಲರಿಗೂ ತಿಳಿಯುವಂಥದ್ದಾಗಿರಬೇಕು. ಪ್ರೇಕ್ಷಕರ ಅಭಿರುಚಿಗೆ ತಕ್ಕಂಥ ನಾಟಕಗಳನ್ನೊದಗಿಸುವುದರಿಂದ ನಾಟಕ ಕೆಳದರ್ಜೆಯದಾಗಬಾರದೆಂದು ಅವರು ಆಶಿಸಿದರು. ಏಕೆಂದರೆ ರಂಗಭೂಮಿಗಳು ವಿದ್ಯಾವಂತರೊಂದಿಗಿನ ಸಂಬಂಧ

ವನ್ನು ಸಂಪೂರ್ಣವಾಗಿ ಕಡಿದುಕೊಂಡಿರಲಿಲ್ಲ. ಅವರ ಅಭಿಪ್ರಾಯದಲ್ಲಿ ಆಧ್ಯಾತ್ಮಿಕ ದ್ವಂದ್ವವನ್ನು ಚಿತ್ರಿಸುವ ನಾಟಕಗಳೆ ಅತ್ಯುತ್ತಮ ನಾಟಕಗಳಾಗಿರುತ್ತವೆ.

ಕಾವ್ಯದಲ್ಲಿ ರಸದ ಅವಶ್ಯಕತೆಯನ್ನು ಗೋವರ್ಧನರಾಮು ಅವರು ಒಪ್ಪಿಕೊಂಡರೂ ಪಾಂಡಿತ್ಯಕ್ಕೆ ಸಮನಾದ ನಿರೀಕ್ಷಣೆಯೆ ಆ ರಸ ಅಥವಾ ಭಾವದ ಆತ್ಮವೆಂದು ಅವರು ಹೇಳುತ್ತಿದ್ದರು. ಅವರು ಇಂಥ 'ಜೀವನಾನುಭವ ನಿರೀಕ್ಷಣೆ'ಯನ್ನು ಶೇಕ್ಸಪಿಯರ್ ಮತ್ತು ಕಾಳಿದಾಸರಲ್ಲಿ ಕಾಣುತ್ತಾರೆ. ಕಾವ್ಯಕ್ಕೆ ಇನ್ನೊಂದು ಅವಶ್ಯವಾದ ಅಂಶವೆಂದರೆ ಛಂದಸ್ಸು. ಗುಜರಾಥಿ ಕಾವ್ಯದ ಭವಿಷ್ಯ ಕುರಿತ ಒಂದು ಉಪನ್ಯಾಸದಲ್ಲಿ ಅವರು ಮುಕ್ತಕಾವ್ಯವನ್ನು ಮೆಚ್ಚಿಕೊಂಡು ಗುಜರಾಥಿ ಭಾಷೆಯಲ್ಲಿರುವ 'ಕಾಟವ' ವೆಂಬ ಕಾವ್ಯಪ್ರಕಾರ ಅದನ್ನು ಹೋಲುವುದೆಂದು ಹೇಳುತ್ತಾರೆ. ಛಂದಸ್ಸು ಕವಿಯ ಅಭಿವ್ಯಕ್ತಿಯನ್ನು ಮೊಟಕುಗೊಳಿಸಿದರೂ ಕಾವ್ಯ ಮಾಧ್ಯಮಕ್ಕೆ ಅದು ಅತ್ಯವಶ್ಯವಾಗಿದೆ. ಅದೇ ಉಪನ್ಯಾಸದಲ್ಲಿ ಅವರು 'ವಸ್ತುನಿಷ್ಠ ಕವಿತೆ' ಗಳನ್ನು ಕವಿಗಳು ಬರೆಯಬೇಕೆಂದು ಹೇಳುತ್ತಾರೆ.

ಭಾವನೆಗಳ ವರ್ಣನೆಗಳಿಗಿಂತ ತಾತ್ವಿಕ ನಿರೀಕ್ಷಣೆಗಳು ಮಹತ್ವವಾದುವು ಎಂದು ಗೋವರ್ಧನರಾಮು ಅವರು ಹೇಳಿರುವುದನ್ನು ನರಸಿಂಹರಾವ್ ಅವರು ವಿರೋಧಿಸುತ್ತಾರೆ. ನರಸಿಂಹರಾವ್ ಅವರು ಈ ವಿಚಾರವನ್ನು ಪ್ರಕಟಿಸದಿದ್ದರೂ 'ಭಾವ' ವೇ ಕಾವ್ಯದ ಆತ್ಮವೆಂದು ತಮ್ಮ ದಿನವಹಿಯಲ್ಲಿ ಬರೆದಿದ್ದಾರೆ. ನಿಜವಾಗಿ ನೋಡಿದರೆ ಗೋವರ್ಧನರಾಮು ಅವರ ಕಾವ್ಯಕಲ್ಪನೆ ತಾತ್ವಿಕ ನಿರೀಕ್ಷಣೆಯನ್ನು ಎತ್ತಿಹಿಡಿದರೂ ಮೂಲತಃ ಆರ್ನಲ್ಡ ಅವರ ಕಾವ್ಯಕಲ್ಪನೆಯಂತೆಯೆ ಇದೆ. ಚಿಂತನ ಮತ್ತು ನಿರೀಕ್ಷಣೆಗಳನ್ನೆ ಕಾವ್ಯಕೇಂದ್ರವನ್ನಾಗಿ ಪರಿಗಣಿಸುವ ಈ ಕಾವ್ಯಕಲ್ಪನೆ ಆಧುನಿಕವಾದುದೆ ಆಗಿದೆ.

ಗೋವರ್ಧನರಾಮು ಅವರು ಕಾದಂಬರಿ ಕುರಿತು ಬರೆದ ವಿಮರ್ಶಾತ್ಮಕ ನಿರೀಕ್ಷಣೆಗಳು ಹೆಚ್ಚಾಗಿ **ಸರಸ್ವತಿಚಂದ್ರ**ದ ನಾಲ್ಕು ಭಾಗಗಳಿಗೆ ಬರೆದ ಇಂಗ್ಲಿಷ್ ಮತ್ತು ಗುಜರಾಥಿ ಮುನ್ನುಡಿಗಳಲ್ಲಿ ಸಿಗುತ್ತವೆ. ಮೊದಲ ಭಾಗದ ಗುಜರಾಥಿ ಮುನ್ನುಡಿಯಲ್ಲಿ ಕಾದಂಬರಿಯ ಉದ್ದೇಶವನ್ನು ಕುರಿತು ಬರೆದಿದ್ದಾರೆ. 'ಮಾಯೆ' ಚಿತ್ರಣದ ಮೂಲಕ, ಅಂದರೆ ಸೌಂದರ್ಯದ ಮೂಲಕ ಸತ್ಯಶೋಧನೆ ಮಾಡುವುದೆ ಅವರ ಪ್ರಕಾರ ಕಾದಂಬರಿಯ ಉದ್ದೇಶವಾಗಿದೆ. ನಾನಾವಿಧವಾದ ಸುಂದರವಾದ ವಸ್ತುಗಳನ್ನೊಳಗೊಂಡ ಜಗತ್ತೆ 'ಮಾಯೆ' ಯಾಗಿದೆ. ಇದನ್ನು ಚಿತ್ರಿಸುವುದು ಸತ್ಯಶೋಧನೆಗೆ ಮಾಧ್ಯಮವಾಗಬೇಕು ಇದೇ ಭಾಗದ ಇಂಗ್ಲಿಷ್ ಮುನ್ನುಡಿಯಲ್ಲಿ ಅವರು ಜನರ ತಾತ್ವಿಕ ಹಾಗೂ ಆಧ್ಯಾತ್ಮಿಕ ಕಲ್ಯಾಣಕ್ಕಾಗಿ ತಾವು ಹೇಳಬೇಕಾದುದನ್ನೆಲ್ಲ ಅಭಿವ್ಯಕ್ತಿಸಲು ಕಾದಂಬರಿಯನ್ನು ಮಾಧ್ಯಮವನ್ನಾಗಿ ಆರಿಸಿಕೊಂಡರೆಂದು ಗೋವರ್ಧನರಾಮು ಹೇಳಿದ್ದಾರೆ. ಈ ಕಾರ್ಯಕ್ಕಾಗಿ ಅವರು ಪ್ರಬಂಧಗಳನ್ನಾಗಲಿ, ಚರ್ಚೆಗಳನ್ನಾಗಲಿ ಬರೆಯ ಬಹುದಾಗಿತ್ತು. ಆದರೆ ಅವನ್ನೆಲ್ಲ ಬಿಟ್ಟು ತಾವು ಹೇಳುವುದನ್ನೆಲ್ಲ ಜನರು ಓದಬೇಕೆಂಬ ಆಶೆಯಿಂದ ಕಾದಂಬರಿಯನ್ನಾರಿಸಿಕೊಂಡರು

ಆದರೂ ಓದುಗರಿಗೆ ಅರ್ಥವಾಗುವ ಮಟ್ಟದಲ್ಲಿ ಕಾದಂಬರಿಯನ್ನು ಪ್ರಾರಂಭಿಸಿ ಕ್ರಮೇಣ ಅವರನ್ನು ಉದಾತ್ತ ವಿಚಾರಗಳತ್ತ ಒಯ್ಯಬೇಕೆಂಬುದು ಗೋವರ್ಧನ ರಾಮ ಅವರಿಗೆ ಗೊತ್ತಿತ್ತು. ಕಾದಂಬರಿಯನ್ನು ಕೆಲವರು ಅದರಲ್ಲಿಯ ಸೌಂದರ್ಯ ಕ್ಕಾಗಿ ಓದಿದರೆ, ಇನ್ನು ಕೆಲವರು ನೈತಿಕ ಹಾಗೂ ಆಧ್ಯಾತ್ಮಿಕ ಉಪದೇಶಕ್ಕಾಗಿ ಓದುತ್ತಾರೆ. ಮತ್ತೆ ಕೆಲವರು ಕೇವಲ ಕಥೆಗಾಗಿ ಓದುತ್ತಾರೆ. ಇವೆಲ್ಲ ತರಹದ ಅಂಶಗಳನ್ನೊಳಗೊಂಡಿದ್ದರೂ ಕಾದಂಬರಿಕಾರ ತನ್ನ ಉತ್ತಮ ಸಾಹಿತ್ಯಾಭಿರುಚಿಗನು ಗುಣವಾಗಿಯೆ ಬರೆಯಬೇಕು. ಕಾದಂಬರಿಯಲ್ಲಿ ಕಥಾವಸ್ತು ಅತ್ಯವಶ್ಯ. ನಾಟಕ ಕುರಿತು ಬರೆದ ಲೇಖನಗಳಲ್ಲಿ ಗೋವರ್ಧನರಾಮ ಅವರು ಹೇಳಿರುವುದೇನೆಂದರೆ ಸಾಮಾನ್ಯ ಓದುಗ ಸಾಹಿತ್ಯ ಕೃತಿಯ ಎಲ್ಲಾ ಅಂಶಗಳನ್ನು ನಿರ್ಲಕ್ಷಿಸಿ ಕೇವಲ 'ಕಥೆ' ಯಲ್ಲಿ ಮಾತ್ರ ಅಭಿರುಚಿ ತೋರಿಸುತ್ತಾನೆ.

ತನ್ನ ಓದುಗರ ನೈತಿಕ ಹಾಗೂ ಆಧ್ಯಾತ್ಮಿಕ ಉನ್ನತಿಗಾಗಿ ಹಂಬಲಿಸುವ ಸಾಹಿತಿ ತನ್ನ ಸಾಹಿತ್ಯದಲ್ಲಿ ಕಥಾವಸ್ತುವಿಗೆ ಪ್ರಾಮುಖ್ಯವಾದ ಸ್ಥಾನವನ್ನು ಕೊಡ ಬೇಕು. **ಸರಸ್ವತಿಚಂದ್ರ**ದ ಕೇಂದ್ರಸ್ಥಾನದಲ್ಲಿ ಇಂತಹ ಕುತೂಹಲ ಮಾಧ್ಯಮದ ಮೂಲಕ ಒಂದು ಸ್ವಯಂನಿಯಂತ್ರಿತ ಜಗತ್ತನ್ನುಂಟುಮಾಡಿ ಸತ್ಯದ ಕಲ್ಪನೆಯ ನ್ನುಂಟುಮಾಡುವ ಬಣ್ಣಬಳೆದು ಆದರ್ಶಗಳಿಂದ ಅದನ್ನು ಬೆಳಗಿಸುತ್ತಾನೆ. ಕಾದಂಬರಿಯಲ್ಲಿಯ ಸಮಕಾಲೀನ ಅಂಶ ಅದರಲ್ಲಿಯ ನೈತಿಕ ಮತ್ತು ಆಧ್ಯಾತ್ಮಿಕ ಅಂಶಗಳೊಡನೆ ಹೊಂದಾಣಿಕೆಯಾಗಿರಬೇಕು.

ಮೂರನೇ ಭಾಗದ ಮುನ್ನುಡಿಯಲ್ಲಿ ಗೋವರ್ಧನರಾಮ ಅವರು ಹೇಳುವುದೇ ನೆಂದರೆ ವರ್ತಮಾನದಲ್ಲಿ ನೆಲೆನಿಂತು, ಭವಿಷ್ಯಕ್ಕೆ ಚಾಚಿರುವಂಥ ಸತ್ಯದ ಅನೇಕ ಸ್ತರಗಳನ್ನು ಕೂಡಿಸಿದ ಮಿಶ್ರರೂಪವನ್ನು ಚಿತ್ರಿಸುವುದೆ ಅವರ ಉದ್ದೇಶವಂತೆ. ಇಂಗ್ಲಿಷ್ ಮುನ್ನುಡಿಯಲ್ಲಿ ಈ ಭವಿಷ್ಯದ ಬಗೆಗಿರುವ ಕಾಳಜಿಗೆ ಹೆಚ್ಚು ಒತ್ತು ಕೊಟ್ಟಿದ್ದಾರೆ. ಭವಿಷ್ಯದ ಬಗೆಗೆ ಬರೆಯುವ ಸ್ವಾತಂತ್ರ್ಯ ಸಾಹಿತಿಗೆ ಇರಬೇಕೆಂದು ಅವರು ಆ ಮುನ್ನುಡಿಯಲ್ಲಿ ಹೇಳುತ್ತಾರೆ. ಅವರ ಪ್ರಕಾರ "ಸಾಹಿತಿಯ ಕನಸು ಗಳೆಲ್ಲವೂ ಕಾಲಜ್ಞಾನಗಳಾಗಿರಬೇಕಿಲ್ಲ. ಆದರೆ ಆ ಕನಸುಗಳು ಓದುಗರಿಗೆ ಭವಿಷ್ಯದ ಬಗೆಗೆ ಒಂದು ತರದ ಅತೀಂದ್ರಿಯ ಸೂಚನೆ ಕೆಟ್ಟು ಕತ್ತಲಲ್ಲಿ ತಡಕಾ ಡುತ್ತಿದ್ದ ಅವರಿಗೆ ಬೆಳಕನ್ನು ಪ್ರವೇಶಿಸಲು ಸಹಾಯಕವಾಗುತ್ತವೆ".

**ಸರಸ್ವತಿಚಂದ್ರ**ದಂಥ ಮಹಾನ್ ಕೃತಿಯ ಸಂಕೀರ್ಣತೆಯ ಪ್ರಜ್ಞೆ ಗೋವರ್ಧನರಾಮ ಅವರಿಗಿತ್ತು. ಅದರ ಆಕಾರದ ಐಕ್ಯತೆ ಆಗಾಗ ಶಿಥಿಲವಾಗು ತ್ತಿತ್ತೆಂಬುದೂ ಅವರಿಗೆ ಗೊತ್ತಿತ್ತು. ಯುರೋಪಿಯನ್ ಮಾದರಿಗಳನ್ನು ಆಗಿಂದಾಗ ಅವರು ತ್ಯಜಿಸಬೇಕಾಗುವುದೆಂಬುದೂ ಅವರಿಗೆ ಗೊತ್ತಿತ್ತು. ಉದಾಹರಣೆಗೆ ಮೊದಲ ಭಾಗದಲ್ಲಿ ಕಥಾನಾಯಕ ಕಥಾಕೇಂದ್ರವಾಗಿಯೆ ಇಲ್ಲ. ಇಲ್ಲಿ ಗೋವರ್ಧನ ರಾಮ ಅವರು ಪ್ರಾಚೀನ ಭಾರತದ ಮಹಾಕಾವ್ಯಗಳ ಮಾದರಿಯನ್ನನುಸರಿಸುತ್ತಾರೆ. ಅವರ ಪ್ರಕಾರ, ಮಹಾಕಾವ್ಯಗಳು ಅಸಂಖ್ಯಾತ ಉಪಾಖ್ಯಾನಗಳನ್ನು ಹೆಣೆಯುತ್ತ

ಮುಂದೆ ಸಾಗುತ್ತವೆ. ಗೋವರ್ಧನರಾಮು ಅವರು ಕೂಡ ಅನೇಕ ತರಹದ ಕಥೆಗಳನ್ನು ಹೆಣೆದರೂ ಅವುಗಳ ಮೂಲಕ ಒಂದು ಕಲಾತ್ಮಕ ಹಾಗೂ ಏಕಪ್ರಕಾರವಾದ ಆಶಯವನ್ನು ಸಾಧಿಸಿದ್ದಾರೆ. ಕಾದಂಬರಿಕಾರನು ಸಿದ್ಧವಾದ ಸೂತ್ರಗಳನ್ನು ಕೊಡಬೇಕೆಂಬ ನಿಯಮವಿಲ್ಲ. ಕಥಾವಸ್ತುವಿನ ಸಂಕೀರ್ಣತೆಯ ಪ್ರಜ್ಞೆ ಕಾದಂಬರಿಕಾರನಿಗಿದ್ದರೆ ಅದು ಎಲ್ಲ ಸಮಸ್ಯೆಗಳನ್ನು ಸ್ಪಷ್ಟವಾಗಿ ತೋರಿಸುತ್ತದೆ.

ತಮ್ಮ ಪಾತ್ರಗಳನ್ನು ಕುರಿತು ಗೋವರ್ಧನರಾಮು ಅವರು ಹೇಳುವುದೇನೆಂದರೆ ಅವುಗಳೆಲ್ಲ ನಿಜವಾಗಿರದಷ್ಟು ಆದರ್ಶೀಕರಿಸಲ್ಪಟ್ಟಿಲ್ಲ ಎಂದು. ಕೆಳವರ್ಗದ ಪಾತ್ರಗಳು ಮೇಲಿನ ವರ್ಗದ ಪಾತ್ರಗಳನ್ನು ತಿಳಿದುಕೊಳ್ಳುವುದಕ್ಕೆ ಸಹಾಯಕವಾಗುತ್ತವೆ. **ಸರಸ್ವತಿಚಂದ್ರ** ಮೂಲತಃ ಅನೇಕಸ್ತರಗಳಲ್ಲಿ ಮತ್ತು ಅನೇಕ ಸಂದರ್ಭಗಳಲ್ಲಿ ಮಾನವನ ಸಂಕಟವನ್ನೆ ತೋರಿಸುತ್ತದೆ.

ಗೋವರ್ಧನರಾಮು ಅವರು ಜೀವನದ ವಿಮರ್ಶಕರಾಗಿದ್ದು ತಮ್ಮೆಲ್ಲ ನಿರೀಕ್ಷಣೆಗಳನ್ನು ಜೀವನದ ಮೇಲೆಯೆ ಆಧರಿಸುತ್ತಾರೆ. ಎಲ್ಲದರ ಔಚಿತ್ಯ ಮತ್ತು ಎಲ್ಲದರ ಅರ್ಥಕ್ಕೆ ಜೀವನವೇ ತಳಹದಿಯಾಗಿರಬೇಕು ಎಂದು ನಂಬಿದ್ದರು.

## VIII ಮಿಶ್ರಲೇಖನಗಳು

ಗೋವರ್ಧನರಾಮು ಅವರ ಮಿಶ್ರಲೇಖನಗಳು ನಾನಾವಿಧವಾದ ವಿಷಯಗಳಿಗೆ ಸಂಬಂಧಿಸಿದವಾಗಿವೆ. ಉದಾಹರಣೆಗೆ, ಭಾಷೆ, ಅಕ್ಷರ, ದಿಂದ ಹಿಡಿದು ಕಾನೂನು, ರಾಜಕೀಯ, ಸಮಾಜ, ಹಣಕಾಸು, ಧರ್ಮ ಮತ್ತು ಆಧ್ಯಾತ್ಮಗಳ ವರೆಗೆ ಎಲ್ಲ ತರಹದ ವಿಷಯಗಳನ್ನವರು ಚರ್ಚಿಸುತ್ತಾರೆ. ಇವೆಲ್ಲದರ ಚರ್ಚೆಯಲ್ಲಿ ಅವರ ವಸ್ತುನಿಷ್ಠತೆ ಮತ್ತು ದೇಶಪ್ರೇಮಗಳು ತುಂಬಿತುಳುಕುತ್ತವೆ. **ಆಧ್ಯಾತ್ಮ ಜೀವನ**ವೆಂಬ ಅವರ ತಾತ್ವಿಕ ಪ್ರಬಂಧ ಅಸಂಪೂರ್ಣವಾಗಿಯೆ ಉಳಿದಿದೆ. ಅವರ 'ಜೀವನ್ಮುಕ್ತ'ನ ಕಲ್ಪನೆಯನ್ನು ನಾವು ಈಗಾಗಲೆ ಚರ್ಚಿಸಿದ್ದೇವೆ. ಗೋವರ್ಧನರಾಮು ಅವರ ಕಲ್ಪನೆಯ 'ತ್ರಿಯೋಗ ಯೋಗ'ವು ಶ್ರೀ ಅರವಿಂದರ 'ಪೂರ್ಣಯೋಗ'ದ ಕಲ್ಪನೆಯನ್ನು ಮುನ್ಸೂಚಿಸಿತ್ತೆಂದು ವಿಷ್ಣುಪ್ರಸಾದ ತ್ರಿವೇದಿ ಅವರು ಹೇಳುತ್ತಾರೆ. ಆದರೆ ಅಂಬಾಲಾಲ ಪುರಾಣಿಯವರ ಅಭಿಪ್ರಾಯದಲ್ಲಿ ಗೋವರ್ಧನರಾಮು ಅವರು ತಮ್ಮ **ಆಧ್ಯಾತ್ಮ ಜೀವನ**ದಲ್ಲಿ ಭೌತಿಕವಿಜ್ಞಾನಗಳನ್ನೂ ಆಧ್ಯಾತ್ಮಿಕ ಶಾಸ್ತ್ರಗಳನ್ನೂ ಸಮರಸಗೊಳಿಸಲೆತ್ನಿಸಿದರು.

ಗೋವರ್ಧನರಾಮು ಅವರ **ಖಾಸಗಿ ಪುಸ್ತಕ**ಕ್ಕೆ ನಾವು ವಿಶೇಷವಾದ ಲಕ್ಷ್ಯ ಕೊಡಬೇಕು. ಅವರು ೧೮೮೫ ರಲ್ಲಿ ತಾವು ಮುಂಬಯಿ ಹಾಯಕೋರ್ಟಿನ ವಕೀಲರಾಗಿರುವಾಗಲೆ ಅದನ್ನು ಬರೆಯಲಿಕ್ಕೆ ಪ್ರಾರಂಭಿಸಿ ೧೯೦೬ ನೆಯ ಇಸ್ವಿ, ನವ್ಹೆಂಬರ್ ಮೂರನೆಯ ತಾರೀಖಿನ ವರೆಗೂ ಬರೆದರು. ಆಗ ಅವರು ಸಾಯುವು

ದಕ್ಕೆ ಇನ್ನೂ ಕೆಲವು ತಿಂಗಳುಗಳು ಮಾತ್ರ ಉಳಿದಿದ್ದವು. ಬಲವಂತರಾಯ್ ಠಾಕೂರ ಮತ್ತಿತರರು ಅವುಗಳನ್ನು ಓದಿದ್ದರು. ಗೋವರ್ಧನರಾಮ ಅವರ ತತ್ತ್ವಗಳನ್ನು ವಿವರಿಸುವಾಗ ಬಲವಂತರಾಯ್ ಠಾಕೂರ್ ಅವರು **ಖಾಸಗಿ ಪುಸ್ತಕ**ಗಳಲ್ಲಿಯ ಮಾತುಗಳನ್ನು ಉದ್ಧರಿಸುತ್ತಿದ್ದರು. ಗೋವರ್ಧನರಾಮ ಅವರ ಬಗೆಗೆ ಬರೆಯುವಾಗ ಉತ್ತಮಲಾಲ ತ್ರಿವೇದಿಯವರೂ ಕೂಡ **ಖಾಸಗಿ ಪುಸ್ತಕ**ಗಳನ್ನು ಉಪಯೋಗಿಸಿ ಕೊಂಡಿದ್ದಾರೆ. **ಖಾಸಗಿ ಪುಸ್ತಕ**ಗಳನ್ನು ಈಗ ನಾಲ್ಕು ವಿಭಾಗದಲ್ಲಿ ಇಂಗ್ಲಿಷಿನಲ್ಲಿ ಪ್ರಕಟಿಸಲಾಗಿದೆ. ರಾಮಪ್ರಸಾದ ಬಾಕ್ಷಿಯವರು ಅದರ ಸಂಕ್ಷಿಪ್ತ ರೂಪವನ್ನು ಗುಜರಾಥಿ ಭಾಷೆಯಲ್ಲಿಯೂ ಪ್ರಕಟಿಸಿದ್ದಾರೆ. ( ಗೋವರ್ಧನರಾಮ್ ನಿ ಮುನನ್ಸೊಂಥ್.) **ಖಾಸಗಿ ಪುಸ್ತಕ**ದಲ್ಲಿಯ ಟಿಪ್ಪಣಿಗಳು ವಿವಿಧ ವಿಷಯಗಳನ್ನು ಕುರಿತ ಅವರ ವಯಕ್ತಿಕ ಅಭಿಪ್ರಾಯಗಳೆ ಆಗಿವೆ. ಆ ವಿಷಯಗಳಾವವೆಂದರೆ ವೈಯಕ್ತಿಕ ಸಮಸ್ಯೆಗಳು, ತಮ್ಮ ಸ್ವಭಾವ, ಭಾವನೆಗಳು, ಆದರ್ಶಗಳು, ನಿವೃತ್ತ ಜೀವನದ ಸಮಸ್ಯೆಗಳು, ಸನ್ಯಾಸ, ಕುಟುಂಬ ಜೀವನ ಹಾಗೂ ಅದರ ಸಮಸ್ಯೆಗಳು, ಆತ್ಮಧ್ಯಾನ, ದೇವರು, ಪುನರ್ಜನ್ಮ, ಸದ್ಗುಣ, ದುರ್ಗುಣ, ಪರಮಾನಂದ, ಖಗೋಲಶಾಸ್ತ್ರ, ಸ್ವಂತ ಲೇಖನ, ಮತ್ತು ಸಮಕಾಲೀನ ಘಟನೆಗಳು. **ಖಾಸಗಿ ಪುಸ್ತಕ**ಗಳ ಅತ್ಯುತ್ತಮ ಭಾಗಗಳೆಂದರೆ ಅವರು ತಮ್ಮ ಜೀವನ, ತಮ್ಮ ಅಭ್ಯಾಸ ಹಾಗೂ ಚಿಂತನಗಳನ್ನು ಕುರಿತು ಬರೆದವುಗಳೆ ಆಗಿವೆ. ಅವುಗಳನ್ನು ನೋಡಿದರೆ ಗೋವರ್ಧನರಾಮ ಅವರು ಎಂಥ ಚಿಂತನಪರ ಜೀವನವನ್ನು ಸಾಗಿಸಿದರು, ಎಷ್ಟೊಂದು ಆಧ್ಯಾತ್ಮಿಕ ಶ್ರೀಮಂತಿಕೆಯನ್ನು ಹೊಂದಿದ್ದರೆಂಬುದು ತಿಳಿಯದೆ ಇರದು (ಪರಿಶಿಷ್ಟವನ್ನು ನೋಡಿರಿ).

## IX ಮುಕ್ತಾಯ

ಗೋವರ್ಧನರಾಮ ಅವರು ಪಾಶ್ಚಾತ್ಯ ರೀತಿಯಲ್ಲಿ ಅಲ್ಲ ಆದರೆ ಭಾರತೀಯ ರೀತಿಯಲ್ಲಿ ತುಂಬು ಜೀವನ ನಡೆಸಿದರೆಂದು ಹೇಳಬಹುದು. ಅವರು ಮಹಾ ಕಲಾಕಾರನೊಬ್ಬನ ಜೀವನ ಸಾಗಿಸಿದರು. ಅವರಿಗೆ ತಮ್ಮ ಶಕ್ತಿಗಳ ಹಾಗೂ ಮಿತಿಗಳ ಬಗೆಗೆ ಆಳವಾದ ಪ್ರಜ್ಞೆಯಿತ್ತು. ಒಬ್ಬ ಸಾಮಾನ್ಯ ಮನುಷ್ಯನಂತೆ ಅವರೂ ಎಲ್ಲಾ ದುಃಖವನ್ನೂ ಹಾನಿಯನ್ನೂ ಅನುಭವಿಸಿದರು. ಆದರೆ ಒಬ್ಬ ಮನುಷ್ಯನಾಗಿ ಮತ್ತು ಒಬ್ಬ ಕಲಾಕಾರನಾಗಿ ಅವರು ಸತತವಾಗಿ ಆತ್ಮಪ್ರಜ್ಞೆಯ ಮೆಟ್ಟಿಲುಗಳನ್ನು ಏರುತ್ತ ನಡೆದರು. ಇದೇ ಅವರ ಘನತೆಯನ್ನು ತೋರಿಸುತ್ತದೆ.

ಗೋವರ್ಧನರಾಮ ಅವರು ತಮ್ಮ ಕೊನೆಯ ಹಂತವನ್ನು ಅಂದರೆ **ಸರಸ್ವತಿಚಂದ್ರ**ವನ್ನು ಬರೆದ ಹಂತವನ್ನು ಮುಟ್ಟಿದಾಗ ಅವರು ತಮ್ಮಲ್ಲಿರುವ ಮತ್ತು ಲೇಖಕರ ಮಧ್ಯದಲ್ಲಿರುವ ಅಂತರವನ್ನು ಅಳಿಸಿಹಾಕಿ ಹೊಸತರದ ಸಮರಸವನ್ನು ಸಾಧಿಸಿದರು. ಕಲಾಕಾರನ ಅನ್ವೇಷಣಾ ಜೀವನವನ್ನು ಸಾಗಿಸುವುದಕ್ಕೆ ಧಕ್ಕೆತರು

ವಂತ ಅನೇಕ ಅಂಶಗಳೂ ಗೋವರ್ಧನರಾಮ ಅವರಲ್ಲಿದ್ದವು. ಅವರು ಸ್ವದೇಶ ಪ್ರೇಮಿಯಾಗಿದ್ದರು; ತತ್ವಜ್ಞಾನಿಯಾಗಿದ್ದರು ಅಲ್ಲದೆ ಸಾಮಾಜಿಕ ವಿಚಾರವಾದಿಗಳೂ ಆಗಿದ್ದರು. ಇವೆಲ್ಲ ಅಂಶಗಳನ್ನು ತಮ್ಮ ಕಲಾಸಾಧನೆಗೆ ನೆರವಾಗುವ ರೀತಿಯಲ್ಲಿ ಉಪಯೋಗಿಸಿಕೊಂಡದ್ದು ಅವರ ಪ್ರಾಮಾಣಿಕತೆಗೆ ಸಾಕ್ಷಿ. ತಮ್ಮ ಈ ತರಹದ ವ್ಯಕ್ತಿತ್ವ ವನ್ನು ಇಷ್ಟೊಂದು ಯಶಸ್ವಿಯಾಗಿ ಬೆಳೆಯಿಸಿಕೊಳ್ಳುವುದಕ್ಕೆ ಗೋವರ್ಧನರಾಮ ಅವರಿಗಿದ್ದ ಪಾಶ್ಚಾತ್ಯ ಸಂಸ್ಕೃತಿಯ ಪರಿಚಯವೂ ಸಹಾಯಕವಾಗಿರಬಹುದು.

ಗೋವರ್ಧನರಾಮ ಅವರು ಅಡ್ಡರಸ್ತೆಯಲ್ಲಿ ನಿಂತಿದ್ದುದರಿಂದ ಅದರಿಂದಾಗುವ ಲಾಭಗಳನ್ನೆಲ್ಲ ಸಂಪೂರ್ಣವಾಗಿ ಉಪಯೋಗಿಸಿಕೊಂಡರು. ಅವರ ಮಹಾನ್‌ಕೃತಿ **ಸರಸ್ವತಿಚಂದ್ರ** ಇಂಥ ಪರಿಸ್ಥಿತಿಯ ಸಂಕೇತವಾಗಿಯೆ ನಿಂತಿದೆ ಈ ಕೃತಿಯು ಗೋವರ್ಧನರಾಮ ಅವರು ಮತ್ತು ಅವರ ಸಮಕಾಲೀನರು ಹಿಂದಿನಿಂದ ಕಲಿತು ಕೊಂಡುಬಂದ ಸಹಜೀವನದ ಸೂತ್ರಗಳನ್ನೆ ಸಂಗ್ರಹವಾಗಿ ಹೇಳುತ್ತದೆ ಅಲ್ಲದೆ ದಿನದಿಂದ ದಿನಕ್ಕೆ ವೇಗವಾಗಿಯೂ ಸಂಕೀರ್ಣವಾಗಿಯೂ ಬೆಳೆಯುತ್ತಿರುವ ಸಮಾಜ ವನ್ನು ಮುನ್ಸೂಚಿಸುತ್ತದೆ.

## ಪರಿಶಿಷ್ಟ ೧

## ಖಾಸಗಿ ಪುಸ್ತಕಗಳಿಂದ ಅವತರಣಿಕೆಗಳು

### (೧) ಖಾಸಗಿ ಪುಸ್ತಕ — ನನ್ನ ಗೆಳೆಯ

ಇಂಥ ಪುಸ್ತಕಗಳಲ್ಲಿ ಒಂದೇ ಸವನೆ ಬರೆಯುತ್ತಿದುವುದರ ಅರ್ಥವಾದರೂ ಏನು? ನನಗೆ ಮರೆತು ಹೋಗಬಹುದಾದ ವಿಚಾರಗಳನ್ನು ನಾನಿಲ್ಲಿ ಬರೆದಿಡುತ್ತೇನೆ. ಹೀಗೆ ಬರೆಯುವುದರಿಂದ ನನ್ನ ವಿಚಾರಗಳು ನನಗೆ ಸ್ಪಷ್ಟವಾಗುತ್ತವೆ. ನನ್ನನ್ನು ಬಿಟ್ಟರೆ ನನಗೆ ಮಾತನಾಡಲು ಯಾರೂ ಗೆಳೆಯರಿಲ್ಲ. ನಾನು ಈ ಪುಸ್ತಕದ ಪುಟ ಗಳನ್ನು ತಿರುವಿಹಾಕಿದಾಗ ನನ್ನ ವಿಚಾರಗಳೆಲ್ಲ ನೆನಪಾಗುತ್ತವೆ ಅಲ್ಲದೆ ನನಗೆ ಸಮಾಧಾನವನ್ನು ನೀಡುತ್ತವೆ. ಇಲ್ಲಿ ಉಲ್ಲೇಖಿಸಿದ ನನ್ನ ಜೀವನದ ಅಸ್ವಸ್ಥ ಗಳಿಗೆ ಗಳನ್ನು ನೋಡಿ ನಾಚಿಕೊಳ್ಳುತ್ತೇನೆ. ನಾನು ಇಲ್ಲಿಂದಲೆ ನನ್ನ ಧೈರ್ಯವನ್ನೂ ಶಕ್ತಿಯನ್ನೂ ಪಡೆಯುತ್ತೇನೆ. ಒಮ್ಮೊಮ್ಮೆ ಹಿಂದಕ್ಕೆ ಮತ್ತೊಮ್ಮೆ ಮುಂದಕ್ಕೆ ಹರಿಯುವ ನನ್ನ ಜೀವನಪ್ರವಾಹವನ್ನಿಲ್ಲಿ ಸರಳವಾಗಿ ಗುರುತಿಸಬಹುದು. ನನ್ನ ಶಕ್ತಿ ಮತ್ತು ಅಶಕ್ತಿಗಳಿಲ್ಲಿವೆ. ಇವೆರಡರ ಪೈಕಿ ನಾನು ಒಂದರಿಂದ ಹತಾಶನಾದಾಗ ಇನ್ನೊಂದರಿಂದ ಸ್ಫೂರ್ತಿ ಪಡೆಯುತ್ತೇನೆ. ಭವಿಷ್ಯದಲ್ಲಿ ಈ ಪುಸ್ತಕ ಯಾರ ಕೈ ಸೇರುತ್ತದೆಯೊ ಅವರು ಏನು ಬೇಕಾದುದನ್ನು ಅಂದರೂ ನಾನೇನು ಹೆದರುವ ಅಥವಾ ನಾಚಿಕೊಳ್ಳುವ ಅವಶ್ಯಕತೆಯಿಲ್ಲ. ಅವರೇನು ಹೇಳುವರೆಂಬುದನ್ನು ನಾನು ಕೇಳಬೇಕಾದುದಿಲ್ಲ. ತಾತ್ವಿಕವಾಗಿ ಹೇಳಬೇಕೆಂದರೆ ನನ್ನಂಥವನ ಅಂತರಂಗ ಜೀವನವನ್ನೋದಿ ಅವರು ಲಾಭ ಪಡೆದುಕೊಳ್ಳಬಹುದು. ಒಂದು ವೇಳೆ ಅವರು

ತಮಗೇನಾದರೂ ಹಾನಿ ಮಾಡಿಕೊಂಡರೆ ನಾನೇನು ಮಾಡಲಿ?—ಇದರಿಂದ ಹಾನಿ ಯಾಗುವುದೆಂದು ನಾನೇನು ತಿಳಿದಿಲ್ಲ—ಎಲ್ಲ ವಸ್ತುಗಳನ್ನೂ ದುರುಪಯೋಗಪಡಿಸಿ ಕೊಳ್ಳಲಿಕ್ಕೆ ಬಂದೇ ಬರುತ್ತದೆ. ಇಂಥ ದುರುಪಯೋಗವನ್ನು ತಪ್ಪಿಸದಿದ್ದರೆ ಅದು ಖಂಡನಾರ್ಹ. ಏನೇ ಇರಲಿ ಇದು ನನ್ನ ಖಾಸಗಿ ಸಮಸ್ಯೆ. ಒಂದು ವೇಳೆ ನನ್ನ ಖಾಸಗಿ ಜೀವನವೆ ಇತರರಿಗೆ ಸುಲಭಸಾಧ್ಯವಾಗಿ ನೋಡಲಿಕ್ಕೆ ಸಿಕ್ಕರೆ ಅವರು ತಮ್ಮ ವಿವೇಕಶಕ್ತಿಗನುಸಾರವಾಗಿ ಇದನ್ನುಪಯೋಗಿಸಿಕೊಂಡು ಅವಶ್ಯವೆನಿಸಿದರೆ ಇದನ್ನು ನಾಶಪಡಿಸಿಬಿಡಲಿ. ನಾನಿದನ್ನು ಬರೆಯಬೇಕೆಂಬ ಸಂಕಲ್ಪಮಾಡಿದ್ದು ಆ ಮಹಾ ದೇವನ ಸಂಕಲ್ಪವೆ ಆಗಿದೆ. ನನಗೆ ಸರಿತೋರಿದುದನ್ನು ನನ್ನ ಕ್ಷಿತಿಜದ ವಿಸ್ತಾರಕ್ಕನು ಗುಣವಾಗಿ ನಾನಿವುಗಳನ್ನು ಬರೆದಿದ್ದೇನೆ. ಅಲ್ಲಿಗೆ ನನ್ನ ಕರ್ತವ್ಯ ಮುಗಿಯಿತು.

—ಖಾಸಗಿ ಪುಸ್ತಕ—೨

೧೦—೭—೧೯೯೧

## (೨) ನಾನು ೪೫ ದಾಟಿದ್ದೇನೆ.

ಈಗ ನನಗೆ ನಾಲ್ವತ್ತೈದು ವರುಷ ವಯಸ್ಸಾಗಿದೆ. ನಾನು ವಕೀಲ ವೃತ್ತಿ ಯಿಂದ ನಿವೃತ್ತನಾಗಿ ಎರಡೂವರೆ ವರುಷಗಳಾದವು. ನನ್ನ ಜೀವನದ ಪುಸ್ತಕ ಈಗ ಹೊಸ ರೂಪವನ್ನು ಧರಿಸಿದೆ. ನಾನು ನನ್ನ ಜೀವನದ ಕೊನೆಯ ಘಟ್ಟವಾದ ಸಾವನ್ನಪ್ಪುವವರೆಗೂ ಇದೇ ರೂಪ ಮುಂದುವರಿಯಲೆಂದು ಬಯಸುತ್ತೇನೆ. ನನ್ನ ಕೈಯ್ಯಲ್ಲಿರುವ ಜನರ ಬಗೆಗಾಗಿ ನಾನು ಈಗ ವಿಚಾರಿಸಬೇಕಾಗಿದೆ. ನನ್ನ ಕರ್ತವ್ಯ ವನ್ನು ಪಾಲಿಸಬೇಕಾಗಿದೆ. ನನ್ನ ದೇಶಕ್ಕೆ, ನನ್ನ ದೇಶಬಾಂಧವರಿಗೆ, ನನ್ನ ದೇವರಿಗೆ ಮತ್ತು ನನ್ನ ಆತ್ಮಕ್ಕೆ ನಾನು ನನ್ನ ಕರ್ತವ್ಯವನ್ನು ಮಾಡಿ ತೋರಿಸಬೇಕಾಗಿದೆ. ನನ್ನಷ್ಟಕ್ಕೆ ನಾನೆ ವಿಚಾರಮಾಡುವುದರ ಬದಲು ನನಗಿಂತ ದೊಡ್ಡವರ ವಿಚಾರ ಗಳನ್ನೋದಿ ಈ ಕರ್ತವ್ಯಗಳನ್ನು ಮಾಡುತ್ತೇನೆ. ನನ್ನ ವೇಳಾಪತ್ರಿಕೆಗನುಸಾರವಾಗಿ ನನ್ನ ದೇಶದ ಸಮಕಾಲೀನ ಸಂಸ್ಥೆ ಮತ್ತು ಘಟನೆಗಳನ್ನು ಕುರಿತು ಮಾಡಿದ ಚಿಂತನೆ ಗಳನ್ನು ಮತ್ತು ನನ್ನಾತ್ಮದ ಕುಲುಮೆಯಲ್ಲಿ ಸಿಡಿದೇಳುವ ಕಿಡಿಗಳನ್ನು ತಿಳಿದು ಕೊಳ್ಳುವುದಕ್ಕಾಗಿ ಮಾತ್ರ ಈ ಪುಸ್ತಕ ಉಪಯೋಗವಾಗುತ್ತದೆ. ಆಗ ಆ ಕಾಲಾ ತೀತ, ವ್ಯೋಮಾತೀತ, ಮಹಾ ಸಂಕಲ್ಪ ಹಾಗೂ ಮಹಾಶಕ್ತಿಯ ತೆರೆಗಳ ಮೇಲೆ ನನ್ನ ಅಹಂ–ಬಿಂದು ತೇಲಾಡುತ್ತಿರುದರಿಂದ ನಾನೀಗ ಸಂತೃಪ್ತನೂ ಆಶಾರಹಿತನೂ ವಸ್ತುನಿಷ್ಟನೂ, 'ಕರ್ತವ್ಯಮುಕ್ತ'ನೂ, ವಿರಾಗಿಯೂ ಆಗಿದ್ದೇನೆ. ನನ್ನ ಮಾನಸಿಕ ಮತ್ತು ನೈತಿಕ ಚೌಕಟ್ಟುಗಳು ಈಗ ಬದಲಾಗಿವೆ. ಹೀಗಾದುದು ನನ್ನ ಆತ್ಮದ ಮತ್ತು ಜಗತ್ತಿನ ಕಲ್ಯಾಣಕ್ಕಾಗಿಯೆ ಆಗಿವೆ — ಅವು ಬದಲಾದುದು ಜಗತ್ತಿನ ಅಭಿರುಚಿಯ ಪ್ರಕಾರ ಮಾತ್ರ ಅಲ್ಲ ಏಕೆಂದರೆ ನಾನು ಎತ್ತರೆತ್ತರ ಹಾರಿದಂತೆ

ಜಗತ್ತು ಕೆಳಗೆ ಕುಸಿದಂತೆ ತೋರುತ್ತದೆ. ನಾವಿಬ್ಬರೂ ಒಬ್ಬರಿಂದೊಬ್ಬರು ದೂರ ವಾಗುತ್ತೇವೆ. ಇದು ಮಹಾಸಂಕಲ್ಪವೆಂದು ತೋರುತ್ತದೆ. ನಾನೂ ಕ್ರೈಸ್ತನಂತೆ "ದೇವರೆ, ನಿನ್ನ ಸಂಕಲ್ಪವೆ ಈಡೇರಲಿ ನನ್ನ ಸಂಕಲ್ಪವಲ್ಲ" ವೆಂದು ಹೇಳುತ್ತೇನೆ.

— ಖಾಸಗಿ ಪುಸ್ತಕ VI

೨೨–೨–೧೯೦೧.

## (೩) ನನ್ನ ಸ್ವಭಾವ

ನನ್ನ ಸ್ವಭಾವ ಸಾಮಾನ್ಯವಾಗಿ ಶಾಂತವಾದುದು. ಇದೊಂದು ಸಂತೋಷದ ವಿಷಯ. ಆದರೆ ಕೆಲವು ಸಂದರ್ಭಗಳಲ್ಲಿ ಮಾತ್ರ ಅದು ಕದಡುತ್ತದೆ. ಇಂಥ ಸಂದರ್ಭಗಳೇನೂ ಈ ಜೀವನದಲ್ಲಿ ಕಡಿಮೆಯಿಲ್ಲ. ಆದರೆ ಸಿಟ್ಟು ಎನ್ನುವುದು ಏಕಿರಬೇಕು ? ನನ್ನ ಲ್ಯಾಪುಟನ್ ಫ್ಲ್ಯಾಪರ್ ಈ ಕ್ಷಣ ಎಲ್ಲಿದ್ದಾನೆ ?......

ಒಳ್ಳೆಯದು. ನನ್ನ ಅಹಂ–ಬಿಂದುವಿನ ಮೇಲೆ ಕೂಜನಗೈಯುವ ಈ ಕಾಲಪಕ್ಷಿಗಳನ್ನು ನೋಡಿ ನಗುತ್ತೇನೆ ಅವು ಈಗ ಹಾರಲುದ್ಯುಕ್ತವಾಗಿವೆ ಎಂದು ನನಗನಿಸುತ್ತದೆ. ಅವೆಲ್ಲ ಹಾರಿಹೋಗಿ ಅವ್ಯಕ್ತದಲ್ಲಿ ಲೀನವಾಗಿ ಬಿಡುತ್ತವೆ. ನಾನಾದರೊ ಅವು ಬರುವುದಕ್ಕಿಂತ ಮೊದಲು ಎಲ್ಲಿದ್ದೆನೊ ಅಲ್ಲಿಯೆ ಉಳಿಯುತ್ತೇನೆ ಹೀಗೆ ಮಹಾ ಸಂಕಲ್ಪ ಸಂಕಲ್ಪಿಸುತ್ತದೆ. ಅವು ಬರುತ್ತವೆ. ಅವು ಹೋಗುತ್ತವೆ ಮತ್ತು "ಕಾಲ ಮತ್ತು ಗಳಿಗೆಗಳು ಕಠಿಣವಾದ ದಿನಗಳನ್ನು ದಾಟಿ ಹೋಗುತ್ತವೆ."

ತರತಿ ಶೋಕಮಾತ್ಮವಿದ್
ತರತಿ ಕ್ರೋಧಮಾತ್ಮವಿದ್
ತರತಿ ಮೋಹಮಾತ್ಮವಿದ್

—ಗೋವರ್ಧನರಾಮ

೨೩–೩–೧೮೯೭.

## (೪) ನನ್ನ ಮನೆಯನ್ನು ಪವಿತ್ರಗೊಳಿಸಿದಾತ್ಮ.

೧೯೦೨ ನೆಯ ಜನವರಿ ಎಂಟನೆಯ ತಾರೀಖಿನ ದಿನ, ದುಃಖದಿಂದ ಜೀವನ ಸಾಗಿಸಿದ ಮತ್ತು ಪರಿಶುದ್ಧಳಾದ ನನ್ನ ಮಗಳು ಲೀಲಾವತಿ ಸ್ವರ್ಗಸ್ಥಳಾದಳು. ಅವಳು ಹಿಂದೂ ಸಮಾಜದ ವ್ಯವಸ್ಥೆಗೆ ಆಹುತಿಯಾದಳು. ಅವಳ ಬಾಲ್ಯದಲ್ಲಿಯೆ ಅವಳನ್ನು

ಮದುವೆ ಮಾಡಿಕೊಟ್ಟ ತಂದೆಯ ಅಧಿಕಾರಕ್ಕೆ ಆಹುತಿಯಾದಳು. ... ತನ್ನನ್ನು ಜೋಪಾನ ಮಾಡಲಾಗದಿದ್ದ ತಂದೆಯನ್ನವಳು ಜೀವನಪರ್ಯಂತ ಜೋಪಾನ ಮಾಡಿದಳು. ... ಅವಳು ಕೊನೆಯುಸಿರೆಳೆಯುವುದನ್ನು ನಾನು ಕಣ್ಣಾರೆ ಕಂಡಿದ್ದೇನೆ. ... ಅವಳ ಪವಿತ್ರವಾದ ಎಳೆಯ ದೇಹವನ್ನು ಹೊತ್ತೊಯ್ಯುವುದನ್ನು ಕಂಡಾಗ ನನ್ನ ಹೃದಯ ಒಡೆದು ಹೋಗಿತ್ತು. ನನ್ನ ತಲೆಬಾಗಿಸಿ ಅವಳ ಅವಶೇಷ ಗಳಿಗೆ ಕೈ ಮುಗಿದು ಪ್ರಾರ್ಥಿಸಿದೆ. ನಾನು ಹುಟ್ಟಿದ ಮೇಲೆ ಯಾವ ಕಾರಣವೂ ಇಲ್ಲದೆ ದುಃಖದಲ್ಲಿಯೆ ತನ್ನ ಜೀವನವನ್ನು ತೆಯ್ದು ನನ್ನ ಮನೆಯನ್ನು ಪವಿತ್ರ ಗೊಳಿಸಿದಾತ್ಮ ಉದಾರವೂ ಮಧುರವೂ ಆಗಿತ್ತು. ... ಲೀಲಾವತಿಯ ಅವಸಾನ ದಿಂದಾಗಿ ನನ್ನ ಅಂತರಂಗದಲ್ಲಾದ ದುಃಖ ಇನ್ನೂ ಮರೆಯಲಾಗದು. ಇಷ್ಟೆಲ್ಲ ತತ್ವಜ್ಞಾನವನ್ನೋದಿದರೂ ಉಕ್ಕಿಬರುವ ಕಣ್ಣೀರನ್ನು ನಾನು ತಡೆಯಲಾರೆ ... ಇದು ಅವಳ ಮೊದಲನೆಯ ಶ್ರಾದ್ಧ. ನನ್ನ ಮುದ್ದು ಲೀಲಾವತಿಯ ಸ್ಮರಣೆಯ ದಿನ. ನನ್ನ ಮೇಜಿನ ಮೇಲಿರುವ ಅವಳ ಚಿತ್ರಕ್ಕೆ, ಅವಳಲ್ಲಿರುವ ಪವಿತ್ರಾತ್ಮಕ್ಕೆ ನಾನೆದ್ದು ನಮಿಸುತ್ತೇನೆ. ನನ್ನ ಮುದ್ದು ಮಗಳೆ, ನೀನು ಸರ್ವಾಂತರ್ಯಾಮಿ ಯಾದ ಆ ಮಹಾ ಸಂಕಲ್ಪದಲ್ಲಿ ಲೀನವಾಗುವುದಕ್ಕಾಗಿ ಯಾತ್ರೆಗೈಯ್ಯುತ್ತಿರುವೆ. ಆ ಮಹಾ ಸಂಕಲ್ಪ ಮನುಷ್ಯನ ಬುದ್ಧಿಯಾಚೆಗಿದ್ದರೂ ಅದನ್ನು ಪ್ರೇರೇಪಿಸಿ ಜೀವಂತ ವಾಗಿರಿಸುತ್ತದೆ. ನನ್ನ ಮುದ್ದು ಮಗಳೆ, ನೀನು ನಿನ್ನ ದೇಹವನ್ನು ತ್ಯಜಿಸಿ ಆ ಮಹಾ ಜ್ಯೋತಿಯಲ್ಲಿ ಒಂದಾಗಿ ಬಿಟ್ಟಿದ್ದೀಯೆ. ಆದರೂ ನಿನ್ನಾತ್ಮ ನನ್ನನ್ನು ಪ್ರೇರೇಪಿಸಿ ಜೀವಂತವಾಗಿರಿಸಿದೆ. ನಿನ್ನಿಚ್ಛೆಯಂತೆಯೆ ಆಗಲಿ.

—ಖಾಸಗಿ ಪುಸ್ತಕ VI

೯–೧–೧೯೦೨.

## ಪರಿಶಿಷ್ಟ—೧

## ಗೋವರ್ಧನರಾವು ಅವರ ಪುಸ್ತಕಗಳು ಮತ್ತು ಪ್ರಬಂಧಗಳು

| ಅ. ಸಂ. | ಪ್ರಕಾಶನದ ಹೆಸರು | ವರ್ಷ |
|---|---|---|
| 1. | ಈ ವಿಶ್ವಕ್ಕೆ ಸೃಷ್ಟಿಕರ್ತನೊಬ್ಬನಿದ್ದಾನೆಯೆ ?<br>(Is There Any Creator of this Universe ?) | 1873 |
| 2. | ಮುಂಬಯಿ ಪ್ರಾಂತದಲ್ಲಿ ಹಿಂದೂ ಸಮಾಜದ ಸ್ಥಿತಿ<br>(The State of Hindu Society in the Bombay Presidency). | 1873 |
| 3. | ಹೃದಯ ರುದಿತ ಶತಕಮ್ (हृदय रुदित शतकम्) | 1875 |
| 4. | ವಿಧಿ ಕುಂಠಿತಮ್ (विधिकुण्ठितम्) | 1875 |
| 5. | ವಿಶ್ವವಿದ್ಯಾಲಯ ಶಿಕ್ಷಣದ ವ್ಯಾಪ್ತಿ<br>(The Scope of University Education). | 1875 |
| 6. | ಭಾರತೀಯರ ಶೈಕ್ಷಣಿಕ ವಿಕಾಸದ ಮೇಲೆ ಬಾಲವಿವಾಹ ಪದ್ಧತಿ ಯಿಂದಾಗುವ ಪರಿಣಾಮಗಳು<br>(On the Effects of the Custom of Early Marriages on the Educational Progress of the Natives of India). | 1876 |
| 7. | ನನ್ನ ದೃಷ್ಟಿಯಲ್ಲಿ 'ಪ್ರಾಯೋಗಿಕ ವೈರಾಗ್ಯ'ದ ಸಾಮಾನ್ಯ ಲಕ್ಷಣಗಳ ಸಂಕ್ಷಿಪ್ತ ಚಿತ್ರ<br>(A Rude Outline of the General Features of 'Practical Asceticism' in My Sense of the Word). | 1877 |
| 8. | ಶಿವಾಜಿಯ ತಾಯಿ ಜೀಜಿ (Jiji the Mother of Shivaji). | 1877 |

| ಅ. ಸಂ. | ಪ್ರಕಾಶನದ ಹೆಸರು | ವರ್ಷ |
|---|---|---|
| 9. | ನಾನಾ ಫಡಣವೀಸ್‌ನ ಚಾರಿತ್ರ್ಯ<br>(The Character of Nana Fadanavis). | 1877 |
| 10. | ಗುಜರಾಥ್ ಮತ್ತು ಮರಾಠಾ ಇತಿಹಾಸದ ವ್ಯಕ್ತಿಗಳ ತುಲನಾತ್ಮಕ ಅಧ್ಯಯನ<br>(A Comparison Between the Characters of the Gujarat & Maratha Histories). | 1877 |
| 11. | ನಮ್ಮ ಧಾರ್ಮಿಕ ಸುಧಾರಣೆಗಳು (Our Religious Reforms). | 1877 |
| 12. | ಬಾಲ್ಯವಿವಾಹಗಳು (Early Marriages). | 1877 |
| 13. | ನನ್ನ ಧರ್ಮ (My Religion). | 1877 |
| 14. | ಗಂಡು ಹೆಣ್ಣಿನ ಸಂಬಂಧ (Relation of the Sexes). | 1877 |
| 15. | ಭಾರತದಲ್ಲಿ ಪ್ರಾಕೃತಿಕ ವಿಜ್ಞಾನಗಳ ಜ್ಞಾನಪ್ರಸಾರದ ಮಾಧ್ಯಮಗಳು ಮತ್ತು ಲಾಭಗಳು<br>(Advantages and Means of Diffusing the Knowledge of Natural Science in India). | 1877 |
| 16. | ಮನಸುಖರಾಮ್ ಕೃತ್ ' ಗೋಕುಲ್‌ಜಿ ಝಾಲಾ ನುನ್ ಜೀವನ ಚರಿತ್ರಾ ' ನುನ್ ಅವಲೋಕನ್ | 1882 |
| 17. | ವೇದ್ ಅನೆ ವೇದಾಂತ್ | 1884 |
| 18. | ನಿಜವಾದ ಅಪರಾಧ ಸಂಹಿತೆಯ ತತ್ವ ಮತ್ತು ವಿಜ್ಞಾನ<br>(The Philosophy and Science of Substantive Criminal Law). | 1884 |
| 19. | ಸಂಸಾರ್ ಸುಧಾರೊ | 1885 |
| 20. | Marginal notes in ' Kusumamala ' | 1887 |
| 21. | ಸರಸ್ವತಿ ಚಂದ್ರ ಭಾಗ–೧ | 1887 |
| 22. | ನಂದಿಯಾಡದ ವಾದನಗರ ಬ್ರಾಹ್ಮಣರಲ್ಲಿ ಕನ್ಯಾದಾನ ಪದ್ಧತಿ<br>(On Betrothal Among the Vadnagara Nagar Brahmins of Nadiad). | 1887 |
| 23. | ಮರಣದ ನಂತರ ನಾವು ಜೀವಿಸುತ್ತೇವೆಯೆ ?<br>(Shall we Live after Death ? ) | 1888 |

| ಅ. ಸಂ. | ಪ್ರಕಾಶನದ ಹೆಸರು | ವರ್ಷ |
|---|---|---|
| 24. | ಖಾಸಗಿ ಪುಸ್ತಕಗಳು (Scrap-Books). | 1888—1906 |
| 25. | ಸ್ನೇಹ್‌ಮುದ್ರಾ | 1889 |
| 26. | ರಸಸುಂದರಿ ಆನೆ ತತ್ತ್ವಾನಂದ್ ಸ್ವಾಮಿ | 1889—1905 |
| 27. | ಶ್ರೀ ಮಣಿಲಾಲ ಎಸ್. ದ್ವಿವೇದಿ ಬಿ. ಎ. ಅವರ ‘ಏಕತಾವಾದ ಅಥವಾ ಅದ್ವೈತವಾದ’ ಮತ್ತು ಶಂಕರಾಚಾರ್ಯರ ಅದ್ವೈತವಾದ (‘Monism or Advaitism’ by Mr. Manilal N. Drivedi B.A. & The Advaitism of Shankar's Vedanta). | 1890 |
| 28. | ನವಲ್‌ರಾಮ ಲಕ್ಷ್ಮೀರಾಮ ನುನ್ ಜೀವನ ವೃತ್ತಾಂತ | 1891 |
| 29. | ಧಾರ್ಮಿಕ ತತ್ತ್ವಜ್ಞಾನದ ಕೆಲವು ಸಮಸ್ಯೆಗಳು (Some Questions of Religious Philosophy). | 1891 |
| 30. | ಸರಸ್ವತಿಚಂದ್ರ ಭಾಗ—೨ | 1892 |
| 31. | ಜೀವ್, ಪ್ರಕೃತಿ, ಆನೆ ಮೃತ್ಯು ಪಚ್ಛಿ | 1892 |
| 32. | ಏಶಿಯಾ, ಯುರೋಪ್ ವಾಗೇರೆ ಖಂಡೊ ಮಾನ್ ನಿ ಮಹಾಪ್ರಜೊ ಮಾನ್ ಜನಸ್ವಭಾವ ನಾನ್ ಲಾಕ್ಷಣಿಕ ದೃಷ್ಟಾಂತ್ | 1893 |
| 33. | ಸಂಸಾರ್ ಪ್ರತಿಬಿಂಬ್ | 1893 |
| 34. | ಗುಜರಾಥಿನ ಅಭಿಜಾತ ಕವಿಗಳು ಮತ್ತು ಸಮಾಜ ಮತ್ತು ನೀತಿಯ ಮೇಲೆ ಅವರು ಬೀರಿದ ಪ್ರಭಾವ (The Classical Poets of Gujarat and Their Influence on Society & Morals). | 1894 |
| 35. | ಕರ್ಮ, ಧರ್ಮ ಆನೆ ಜ್ಞಾನ್: ತತ್ಸಂಬಂಧೆ ದೇಶ್ ಕಾಲ್‌ನೊ ವಿವೇಕ | 1894 |
| 36. | ಕವಿತಾ, ಕಾವ್ಯ ಅಂದ್ ಕವಿ ಎ ವಿಷಯೆ ಮಿತ್ರಪತ್ರ್ | 1896 |
| 37. | ಗುಜರಾಥಿ ಶಬ್ದೊ ನಿ ಲೇಖನ್ ಪದ್ಧತಿನೊ ವಿವೇಕ | 1896 |
| 38. | ವೈದಿಕ ಪುರಾಣ ಸಾಹಿತ್ಯದ ಕುರಿತು ಕೆಲವು ವಿಚಾರಗಳು (Some sidelights on Vedic Mythology). | 1896 |
| 39. | ಆ ಕಲ್ ನಾನ್ ಅಪನನ್ ಆದಿ ನಾಟಕ್ | 1896—97 |
| 40. | ಗುಜರಾಥಿ ಲೇಖನ ಪದ್ಧತಿ ಆನೆ ನರಸಿನ್ಹರಾವ್ ಭೋಲಾನಾಥ್ | 1897—98 |
| 41. | ಸರಸ್ವತಿಚಂದ್ರ ಭಾಗ—೩ | 1898 |
| 42. | ಗುಜರಾಥಿ ಕವಿತಾನುನ್ ಭವಿಷ್ಯ | 1899 |

| ಅ. ಸಂ. | ಪ್ರಕಾಶನದ ಹೆಸರು | ವರ್ಷ |
|---|---|---|
| 43. | ಭಾರತೀಯ ಧರ್ಮದ ಜಾತ್ಯಾತೀತ ಭಾಗ<br>(Secular side in Indian Religion). | 1899 |
| 44. | ಸಾಕ್ಷರ್ ಜೀವನ್ | 1899—1903 |
| 45. | ಮಧ್ವರಾವ್ ಸ್ಮಾರಿಕಾ | 1900 |
| 46. | ಜೀವನದಲ್ಲಿ ಆಂಗ್ಲನೊಬ್ಬನ ಹಾಗೂ ಹಿಂದೂ ಒಬ್ಬನ ಪ್ರವೇಶ<br>(An Englishman's and a Hindu's Entrance into Life). | 1900 |
| 47. | ನಮ್ಮ ಸಾಮಾಜಿಕ ಮತ್ತು ಕೌಟುಂಬಿಕ ವ್ಯವಸ್ಥೆಗಳ ಕೆಲವು ಐತಿಹಾಸಿಕ ಪೈಲುಗಳು<br>(Some Historical Aspects of our Social and Domestic Institutions). | 1900 |
| 48. | ಸರಸ್ವತಿಚಂದ್ರ ಭಾಗ—೪ | 1901 |
| 49. | ಪ್ರಾಚೀನ ಹಿಂದೂ ಸಂಹಿತೆಯಲ್ಲಿ ವಿವಾಹ ಪದ್ಧತಿಗಳು<br>(Marriage Forms under Ancient Hindu Law). | 1901–02 |
| 50. | ನಮ್ಮ ಜೀವನಾದರ್ಶಗಳ ಪ್ರಾಯೋಗಿಕ ಪೈಲುಗಳು<br>(The Practical Aspects of Our Ideals of Life). | 1902 |
| 51. | ಕ್ಷೇಮರಾಜ್ ಅನೆ ಸಾಧ್ವಿ | 1902 |
| 52. | ತನ್ನ ಪ್ರಜೆಗಳ ತಂದೆಯಾಗಿ ಹಿಂದೂ ಸಾಮ್ರಾಟ್<br>(The Hindu Sovereign as Parent of His People). | 1902 |
| 53. | ಸೂರತಿನ ಪ್ರಮುಖ ಜಾತಿಗಳ ಅಭಿರುಚಿಗಳು ಮತ್ತು ಕರ್ತವ್ಯಗಳು<br>(The Aptitudes and Duties of the Leading Communities of Surat). | 1902 |
| 54. | ಸತಿ ಚುನಿ : ಹಿಂದೂ ಜೀವನದ ಒಂದು ಕಥೆ<br>(Chuni the Suttee : A Story of Hindu Life). | 1902 |
| 55. | ಅಧ್ಯಾತ್ಮ ಜೀವನ್ ಅಥ್ವಾ ಅಮರ್ ಜೀವನ ನೊ ಶ್ರುತಿಬೊಧ | 1902—03 |
| 56. | ಸಾರ್ವಜನಿಕ ಚಟುವಟಿಕೆ (Public Activity). | 1903 |
| 57. | ಉದ್ಯೋಗ್ ಹುನ್ನಾರ್ ವಿಷಯಕ್ ಸಾಹಿತ್ಯಾ ನೊ ಪ್ರಚಾರ್ | 1903 |
| 58. | ಪ್ರಾಚೀನ್ ಹಿಂದ್ ನೊ ಬ್ರಾಹ್ಮಣ್ ಧರ್ಮ | 1903 |
| 59. | ಭಾರತದ ಮತಾಂತರಿಗಳು ಮತ್ತು ಮತಾಂತರ ಮಾಡದ ಮೂಲ ನಿವಾಸಿಗಳ ಮಧ್ಯದಲ್ಲಿರುವ ಕಾನೂನು ಸಂಘರ್ಷ<br>(Conflict of Laws Between Converts and Non-converts in India.) | 1903 |

| ಅ. ಸಂ. | ಪ್ರಕಾಶನದ ಹೆಸರು | ವರ್ಷ |
|---|---|---|
| 60. | ಪ್ರಾಚೀನ ಭಾರತದಲ್ಲಿ ಉನ್ನತ ಬ್ರಾಹ್ಮಣ್ಯ (Higher Brahmanism in Ancient India). | 1903 |
| 61. | ಬಡತನವೆಂಬ ಹಿಂದೂ ಆದರ್ಶ (The Hindu Ideal of Poverty) | 1903 |
| 62. | ಪಾಶ್ಚಾತ್ಯ ಹಾಸ್ಯರಸ್ ಅನೆ ತೆನುಸ್ ವಿಶ್ಲೇಷಿಯು ರೂಪಾಂತರ್ | 1904 |
| 63. | ವಿ. ಕೇಖುಶ್‌ರಾವ್ ನವರೋಜಜಿ ಕಬ್ರಾಜಿ ನಿ 'ತುಂಕ್ ಪಿಚ್ಛಾನ್' | 1904 |
| 64. | ಕವಿಭೋಗ್ಯ ಕವಿತಾ | 1904 |
| 65. | ಆಧ್ಯಾತ್ಮಿಕ ಕವಿತಾ ಅನೆ ತೇನಿ ಕವಿತಾ | 1904 |
| 66. | ಅನುಪಮ್ ತಿಮಿರ್ | 1904 |
| 67. | ಅನುಪಮ್ ತೇಜ್ | 1904 |
| 68. | ಗುಜರಾಥಿ ಕ್ರಿಯಾಪದ ನಿ ವ್ಯುತ್ಪತ್ತಿನಾ ನಿಯಮೊ | 1904 |
| 69. | 'ಜೀವನದ ಸಮಸ್ಯೆ' ಯ ವಿಮರ್ಶೆ (Review of 'The Problem of Existence'). | 1904 |
| 70. | ರಾಜಕೀಯ ವಿಷಯೊ ಮಾನ್ ಸಾತ್ವಿಕ ವೃತ್ತಿ | 1904 |
| 71. | ಲೀಲಾವತಿ ಜೀವನ್‌ಕಲಾ | 1905 |
| 72. | ಗುಜರಾಥ್ ನಾ ಪ್ರಾಚೀನ್ ಸಾಹಿತ್ಯನಾ ಇತಿಹಾಸ್ನುನ್ ದಿಗ್ದರ್ಶನ್ | 1905 |
| 73. | ಹಿಂದೂ ಅರ್ಥಶಾಸ್ತ್ರದ ಅಡಿಗಲ್ಲು (The Keystone of the Economics of Hinduism). | 1905 |
| 74. | ಪ್ರಣವ್ ಪುರುಷ್ | 1905 |
| 75. | ಕುರುಕ್ಷೇತ್ರ | 1905 |
| 76. | ಅಧಿಪತ್ಯ ಮತ್ತು ರಾಜ್ಯದ ಹಿಂದೂ ಆದರ್ಶ (The Hindu Ideal of Sovereignty and State). | 1905 |
| 77. | ದಯಾರಾಮ್ ಗಿದುಮಾಲ್‌ರೊಂದಿಗೆ ಪತ್ರ ವ್ಯವಹಾರ (Correspondence with Dayaram Gidumal). | 1906 |
| 78. | ಪ್ರಾಚೀನ ಭಾರತದಲ್ಲಿ ಭೌತಶಾಸ್ತ್ರ (Physics In Ancient India). | 1906 |

| ಅ. ಸಂ. | ಪ್ರಕಾಶನದ ಹೆಸರು | ವರ್ಷ |
|---|---|---|
| 79. | ಆಂಗ್ಲರು ಮತ್ತು ಭಾರತೀಯರ ಮಧ್ಯದಲ್ಲಿರುವ ಅಂತರ (The Gulf between Englishmen and Indians). | 1906 |
| 80. | ಕವಿ ದಯಾರಾಮ್‌ನೊ ಅಕ್ಷರದೇಹ | 1906 |
| 81. | ದಮಯಂತಿ ದಮನಂತಾ | 1906 |
| 82. | ಸರಸ್ವತಿ ಆನೆ ಮಾಯಾ | 1906 |
| 83. | ಕೆಲವು ನೀತಿನಿಯಮಗಳು (Some Rules of Conduct). | 1906 |
| 84. | ಕಾನೂನು ಟಿಪ್ಪಣಿಗಳು ಮುಂತಾದವು (Law-notes etc.) | 1906 |

## ಪರಿಶಿಷ್ಟ—೩

## ಗೋವರ್ಧನರಾಮ ಅವರ ಮೇಲೆ ಪ್ರಕಟವಾದ ಪುಸ್ತಕಗಳು

| ಅ. ಸಂ. | ಪ್ರಕಾಶನದ ಹೆಸರು | ಲೇಖಕರು |
|---|---|---|

### ಗುಜರಾಥಿಯಲ್ಲಿ

| | | |
|---|---|---|
| 1. | ಸರಸ್ವತಿಚಂದ್ರನುನ್ ಅವಲೋಕನ್ | —ವಿಶ್ವನಾಥ್. ಪಿ. ವೈದ್ಯ. |
| 2. | ಗೋವರ್ಧನ್‌ರಾಮ್ ಮಧ್ವರಾಮ್ ತ್ರಿಪಾಠಿ ಆನೆ ತೆಮ್ನಿ ಸಾಹಿತ್ಯಸೇವಾ | —ಮಣಿಶಂಕರ್ ಡಿ. ಜೋಷಿ. |
| 3. | ಗೋವರ್ಧನ್‌ರಾಮ್‌ಭಾಯಿ ಸ್ಮರಣಾಂಜಲಿ | —ಚಂದ್ರಶೇಖರ ಪಾಂಡ್ಯ. |
| 4. | ಪಂಡಿತ್‌ಯುಗ್ ನುನ್ ಮಹಾಕಾವ್ಯ | —ವಿಶ್ವನಾಥ್. ಎಂ. ಭಟ್. |
| 5. | ಶ್ರೀಯುತ್ ಗೋವರ್ಧನರಾಮ್ | —ಕಾಂತಿಲಾಲ್ ಸಿ. ಪಾಂಡ್ಯ. |
| 6. | ಗೋವರ್ಧನ್‌ರಾಮ್ ನುನ್ ಸಲ್‌ವಾರಿ ಜೀವನ್ ಆನೆ ಸಮಕಾಲೀನ್ ಜೀವನ್ | —ಕಾಂತಿಲಾಲ್ ಸಿ. ಪಾಂಡ್ಯ. |
| 7. | ಜಗತ್ ಕಾದಂಬರಿಯೊ ಮನ್ 'ಸರಸ್ವತಿಚಂದ್ರ' ನುನ್ ಸ್ಥಾನ್ | —ನಾನಾಲಾಲ್ ಕವಿ. |
| 8. | ಗೋವರ್ಧನ್ ಶತಾಬ್ದ ಗ್ರಂಥ್ | —ಸಂ. ಉಪೇಂದ್ರ. ಸಿ. ಪಾಂಡ್ಯ. |
| 9. | ಗೋವರ್ಧನ್ ಶತಾಬ್ದಿ ಸ್ಮಾರಕ್ ಗ್ರಂಥ್ | —ಸಂ. ವ್ಹಿ. ಆರ್. ತ್ರಿವೇದಿ, ಮಂಗಳ್ ಭಾಯಿ ದೇಸಾಯಿ, ಉಪೇಂದ್ರ ಪಾಂಡ್ಯ, ಯಶವಂತ್ ಶುಕ್ಲಾ. |
| 10. | ವಿವಿಧ್ ವ್ಯಾಖ್ಯಾನೊ. ಭಾಗ—೧. | —ಬಲವಂತ್‌ರಾಯ್ ಠಾಕೂರ್. |
| 11. | ಗೋವರ್ಧನ್‌ರಾಮ್ | —ಮನ್‌ಸುಖಲಾಲ ಝವೇರಿ. |
| 12. | ಗೋವರ್ಧನ್‌ರಾಮ್ : ಚಿಂತಕ್ ನೆ ಸರ್ಜಕ್ | —ವ್ಹಿ. ಆರ್. ತ್ರಿವೇದಿ. |
| 13. | ಗೋವರ್ಧನ್‌ರಾಮ್—ಏಕ್‌ಅಧ್ಯಯನ್ (ಎರಡನೆ ಆವೃತ್ತಿ) | —ರಮಣ್‌ಲಾಲ್ ಜೋಷಿ. |
| 14. | ಸರಸ್ವತಿಚಂದ್ರ ನೊ ಮಹಿಮಾ : ಏನಿ ಪತ್ರ ಸೃಷ್ಟಿ ಮನ್ | —ರಸಿಕ್‌ಲಾಲ್. ಸಿ. ಪಾರೀಖ್. |
| 15. | ಗೋವರ್ಧನ್‌ರಾಮ್ ನುನ್ ಮನೋರಾಜ್ಯ | —ರಾಮ್‌ಪ್ರಸಾದ ಪಿ. ಬಾಕ್ಸಿ. |
| 16. | 'ವಸಂತ್' ನೊ ಗೋವರ್ಧನ್ ಸ್ಮಾರಕಾಂಕ್ — | — |
| 17. | 'ಸಮಾಲೋಚಕ್' ನೊ ಗೋವರ್ಧನ್ ಸ್ಮಾರಕಾಂಕ್— | — |

### ಇಂಗ್ಲೀಷಿನಲ್ಲಿ

| | | |
|---|---|---|
| 18. | ಸರಸ್ವತಿಚಂದ್ರ ಒಂದು ವಿಮರ್ಶಾತ್ಮಕ ಅಧ್ಯಯನ (Saraswatichandra—A critical Estimate). | —ಆರ್. ಆಯ್. ಪಟೇಲ್ R. I. Patel. |
| 19. | ಗೋವರ್ಧನ್‌ರಾಮ್ | —ರಮಣ್‌ಲಾಲ್ ಜೋಷಿ. |

Indian Inst... 117215 10/12/04

## ಭಾರತೀಯ ಸಾಹಿತ್ಯದ ನಿರ್ಮಾಣಕಾರರು

ಈ ಪ್ರಬಂಧಗಳಲ್ಲಿ ಭಾರತದ ಪ್ರಾಚೀನ ಇಲ್ಲವೆ ಅರ್ವಾಚೀನ ಸಾಹಿತ್ಯದಲ್ಲಿಯ ಮಹತ್ತ್ವದ ಮೈಲಿಗಲ್ಲುಗಳಿಗೆ ಕಾರಣಪುರುಷರಾಗಿರುವವರ ಪರಿಚಯವನ್ನು ಮಾಡಿಕೊಡಲಾಗುವುದು.

* ರಾಜಾರಾಮ ಮೋಹನರಾಯ್ : ಸೌಮ್ಯೇಂದ್ರನಾಥ ಟಾಗೋರ
* ಕೇಶವಸುತರು : ಪ್ರಭಾಕರ ಮಾಚ್ವೆ
* ಇಳಂಗೋ ಅಡಿಗಳ್ : ಎಂ. ವರದರಾಜನ್
* ಲಕ್ಷ್ಮೀನಾಥ ಬೇಜ್‌ಬರುವಾ : ಹೇಮ ಬರೂವಾ
* ಕಬೀರ : ಪ್ರಭಾಕರ ಮಾಚ್ವೆ
* ತೋರುದತ್ : ಪದ್ಮಿನೀ ಸೇನ್ ಗುಪ್ತ
* ಪ್ರೇಮಚಂದ್ : ಪ್ರಕಾಶಚಂದ್ರ ಗುಪ್ತ
* ವೀರೇಶಲಿಂಗಂ : ವಿ. ಆರ್. ನಾರ್ಲ
* ವೇಮನ : ವಿ. ಆರ್. ನಾರ್ಲ
* ಪೋತನ : ಡಿ. ವೇಂಕಟಾವಧಾನಿ
* ಗಾಲಿಬ್ : ಎಂ. ಮುಜೀಬ್
* ಮೀರಾಬಾಯಿ : ಉಷಾ ನಿಲ್ಸನ್

ಷಾ ಲತೀಫ್ : ಕಲ್ಯಾಣ್ ಬಿ. ಅದ್ವಾನಿ

* ಈಶ್ವರಚಂದ್ರ ವಿದ್ಯಾಸಾಗರ : ಹಿರಣ್ಮಯ ಬ್ಯಾನರ್ಜಿ

ಚಂಡೀದಾಸ : ಸುಕುಮಾರ್‌ಸೇನ್

* ಪ್ರಮಥ ಚೌಧರಿ : ಆ. ಮುಖ್ಯೋಪಾಧ್ಯಾಯ
* ಭಾರತೇಂದು ಹರಿಶ್ಚಂದ್ರ : ಮದನ್ ಗೋಪಾಲ್

ಜೀವನಾನಂದ ದಾಸ್ : ಚಿ. ದಾಸ್‌ಗುಪ್ತ

* ಕುಮಾರನ್ ಆಶಾನ್ : ಕೆ. ಎಂ. ಜಾರ್ಜ್
* ಕಾಜೀ ನಜರುಲ್ ಇಸ್ಲಾಮ್ : ಗೋ. ಹಾಲ್ದಾರ್
* ನಜೀರ್ ಅಕಬರಾಬಾದಿ : ಮುಹಮ್ಮದ ಹಸನ್
* ಕಂಬನ್ : ಎಸ್. ಮಹರಾಜನ್
* ಜಯದೇವ : ಸುನೀತಿಕುಮಾರ್ ಚಾಟರ್ಜಿ
* ಚಂದು ಮೆನನ್ : ಟಿ. ಸಿ. ಎಸ್. ಮೆನನ್
* ಮಹರ್ಷಿ ದೇವೇಂದ್ರನಾಥ ಠಾಕೂರ್ : ನಾ. ಚೌಧುರಿ
* ನಮ್ಮಾಳ್ವಾರ್ : ಅ. ಶ್ರೀನಿವಾಸರಾಘವನ್
* ಬಾಣಭಟ್ಟ : ಕೆ. ಕೃಷ್ಣಮೂರ್ತಿ
* ನಾನಾಲಾಲ : ಯು. ಎಂ. ಮಣಿಯಾರ್
* ಬಂಕಿಮಚಂದ್ರ ಚಟರ್ಜಿ : ಸುಬೋಧಚಂದ್ರ ಸೇನ್‌ಗುಪ್ತ
* ಶ್ರೀ ಅರವಿಂದರು : ಮನೋಜ್ ದಾಸ್
* ಭಾರತಿ : ಪ್ರೇಮಾ ನಂದಕುಮಾರ್

* ಇವು ಕನ್ನಡದಲ್ಲಿಯೂ ದೊರೆಯ

Library IIAS, Shimla
K 891.471 809 2 G 746 J
00117215